

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 16 ಶನಿವಾರ 2023

ಸಂಪುಟ: 44 | ಸಂಚಿಕೆ: 239 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ರೌಡಿ ಪ್ರತಿಬಂಧಕ ದಳ ಮರು ಸ್ಥಾಪಿಸಬೇಕಿದೆ!

■ಪುಟ–4



ರಾಜ್ಯದಲ್ಲಿ ಭೀಕರ ಬರ; ರೈತರ ಸಂಕಷ್ಟ

ಸಹಕಾರಿ ಬ್ಯಾಂಕ್‌ಗಳ ಸಾಲದ ಬಡ್ಡಿ ಮನ್ನಾ

- ■ಆದರೆ ಕೃಷಿ ಸಾಲ ಮನ್ನಾ ಮಾಡಲು ಸಾಧ್ಯವೇ ಇಲ್ಲ
- ■ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ■ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ



ಬೆಳಗಾವಿ, ಡಿ.15(ಕೆಎಂಶಿ)– ರಾಜ್ಯದಲ್ಲಿ ತೀವ್ರ ಬರಗಾಲದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದರೂ ಕೃಷಿ ಸಾಲ ಮನ್ನಾ ಸಾಧ್ಯವಿಲ್ಲ, ಆದರೆ ಸಹಕಾರಿ ಬ್ಯಾಂಕ್‌ಗಳಲ್ಲಿ ಕೃಷಿಕ ಪಡೆದಿರುವ ಸಾಲದ ಮೇಲಿನ ಬಡ್ಡಿ ಮತ್ತು ಚಕ್ರ ಬಡ್ಡಿ ಮನ್ನಾ ಮಾಡುವುದಾಗಿ ವಿಧಾನಸಭೆಯಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅಧಿಕಾರಕ್ಕೆ ಬರುವ ಮುನ್ನ ಜನರಿಗೆ ಭರವಸೆ ನೀಡಿದಂತೆ ಕಾಂಗ್ರೆಸ್ ಕಳೆದ ಚುನಾವಣೆಯಲ್ಲಿ ಕೃಷಿ ಸಾಲ ಮನ್ನಾ ಮಾಡುವ ಭರವಸೆ ನೀಡಿರಲಿಲ್ಲ. ಆದರೂ ರೈತರ ಸಂಕಷ್ಟ ಅರಿತು ಒಂದು ಬಾರಿಗೆ ಅನ್ವಯವಾಗುವಂತೆ ಸಹಕಾರಿ ಬ್ಯಾಂಕ್ ಗಳಲ್ಲಿ ಪಡೆದಿರುವ ಸಾಲದ ಮೇಲಿನ ಬಡ್ಡಿಗಳನ್ನು ಮನ್ನಾ ಮಾಡುವುದಾಗಿ ತಿಳಿಸಿದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ಕೊನೆಯ ದಿನವಾದ ಇಂದು ಉತ್ತರ ಕರ್ನಾಟಕಕ್ಕೆ ಒಂದಷ್ಟು ಕೊಡುಗೆಗಳನ್ನು ಪ್ರಕಟಿಸಿ, ಕೃಷಿಕನಿಗೆ ಸದ್ಯಕ್ಕೆ ಇಷ್ಟು ಮಾತ್ರ ಸರ್ಕಾರದಿಂದ ಮಾಡಲು



ಸಾಧ್ಯ ಎಂದರು. ಸಹಕಾರಿ ಬ್ಯಾಂಕ್‌ಗಳಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಅಸಲನ್ನು ಕಟ್ಟಿದರೆ ಸಾಕು ಉಳಿದದ್ದನ್ನು ಸರ್ಕಾರ ಭರಿಸಲಿದೆ. ರಾಜ್ಯದ ಬಹುಭಾಗ ಬರಕ್ಕೆ ಸಿಲುಕಿ ರೈತರು ಕಂಗಾಲಾಗಿದ್ದಾರೆ, ಕೇಂದ್ರ ಸರ್ಕಾರದಿಂದ ನಮಗೆ ಯಾವುದೇ ನೆರವು ದೊರೆತಿಲ್ಲ, ದೆಹಲಿಯಲ್ಲಿ ಕುಳಿತಿರುವ ಪುಣ್ಯಾತ್ಮರು ನಮಗೆ ಭೇಟಿಗೂ ಅವಕಾಶ ನೀಡಿಲ್ಲ. ಹಾಗೆಂದು ನಾವೇನು ಕೈಕಟ್ಟಿ ಕುಳಿತಿಲ್ಲ, ಪರಿಹಾರ ಕಾರ್ಯಗಳ ಜೊತೆಗೆ ರೈತರ ನೆರವಿಗೂ ಬಂದಿದ್ದೇವೆ. 2018ರ ಚುನಾವಣೆಯಲ್ಲಿ ಬಿಜೆಪಿಯವರು ತಮ್ಮ ಪ್ರಣಾಳಿಕೆಯಲ್ಲಿ ಸಹಕಾರಿ ಸಂಘಗಳಲ್ಲಿನ ಒಂದು ಲಕ್ಷದವರೆಗಿನ ರೈತರ ಬೆಳೆ ಸಾಲ ಮನ್ನಾ ಮಾಡಲಾಗುವುದು ಎಂದು ಹೇಳಿದ್ದರು. ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ●7ನೇ ಪುಟಕ್ಕೆ

ನಕಲಿ ವೈದ್ಯರ ವಿರುದ್ಧ ಆರೋಗ್ಯ ಇಲಾಖೆ ಸಮರ

ವೈದ್ಯಕೀಯ ಪ್ರಮಾಣ ಪತ್ರವಿಲ್ಲದ 14 ಕ್ಲಿನಿಕ್‌ಗಳಿಗೆ ಬೀಗ

- ●ಸದ್ಯದಲ್ಲೇ ಇನ್ನು ನಾಲ್ಕು ಕ್ಲಿನಿಕ್ ಬಂದ್
- ●ಕೆಲವು ಅನಾಮಧೇಯ ವೈದ್ಯಕೀಯ ಸಂಸ್ಥೆಗಳ ಪ್ರಮಾಣ ಪತ್ರ ಪ್ರದರ್ಶನ
- ●ವೈದ್ಯಕೀಯ ಪ್ರಮಾಣ ಪತ್ರದ ಕಾನೂನು ಮಾನ್ಯತೆ ಬಗ್ಗೆ ಸಂಶಯ

ಮೈಸೂರು, ಡಿ.15(ಬಿಎಲ್‌ಯು)–ಮೈಸೂರಿನಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಪತ್ತೆಯೊಂದಿಗೆ ನಕಲಿ ವೈದ್ಯರ ಪತ್ತೆಗೂ ಸಮರ ಸಾರಿರುವ ಆರೋಗ್ಯ ಇಲಾಖೆ, ವೈದ್ಯಕೀಯ ಪ್ರಮಾಣ ಪತ್ರವಿಲ್ಲದೆ ಚಿಕಿತ್ಸೆ ನೀಡುತ್ತಿದ್ದ 14 ವೈದ್ಯರ ಕ್ಲಿನಿಕ್‌ಗಳಿಗೆ ಬೀಗ ಜಡಿದಿದೆ. ಇಂತಹ ಇನ್ನು 4 ಕ್ಲಿನಿಕ್‌ಗಳನ್ನು ಪತ್ತೆ ಮಾಡಿದ್ದು, ಜಿಲ್ಲಾಧಿಕಾರಿಗಳ ಅನುಮತಿ ಪಡೆದು ನಾಳೆ ಬಂದ್ ಮಾಡಲಾಗುವುದು ಎಂದು ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಗೋಪಿನಾಥ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಪತ್ತೆಯಾದ ಹೆಣ್ಣು ಭ್ರೂಣ ಪತ್ತೆ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಹೆಣ್ಣು ಭ್ರೂಣ ಹತ್ಯೆ ತಡೆ ಹಾಗೂ ನಕಲಿ ವೈದ್ಯರ ಪತ್ತೆಗೆ ●7ನೇ ಪುಟಕ್ಕೆ



ಹನೂರು ಪಪಂನಲ್ಲಿ ಆಸ್ತಿಗಳಿಗೆ ಅಕ್ರಮ ಖಾತೆ; ಇ–ಸ್ವತ್ತು ವಿತರಿಸಿದ ಆರೋಪ

ಮುಖ್ಯಾಧಿಕಾರಿ ಮೂರ್ತಿಗೆ ಕಡ್ಡಾಯ ನಿವೃತ್ತಿ; ಉಳಿದ 6 ಅಧಿಕಾರಿಗಳಿಗೆ ಹಿಂಬಡ್ತಿ



ಮೂರ್ತಿ

ಹನೂರು, ಡಿ. 15– ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ 54 ಆಸ್ತಿಗಳಿಗೆ ಅಕ್ರಮವಾಗಿ ಖಾತೆ ಮಾಡಿಸಿ, ಇ–ಸ್ವತ್ತು ವಿತರಿಸುವ ಮೂಲಕ ಪಟ್ಟಣ ಪಂಚಾಯ್ತಿಗೆ 31.02 ಲಕ್ಷ ರೂ. ನಷ್ಟ ಉಂಟು ಮಾಡಿದ ಆರೋಪದ ಮೇರೆಗೆ ಹನೂರು ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿಗೆ ಕಡ್ಡಾಯ ಸೇವಾ ನಿವೃತ್ತಿ ದಂಡನೆ ವಿಧಿಸಿ, ಇತರ 6 ಅಧಿಕಾರಿಗಳಿಗೆ ಹಿಂಬಡ್ತಿ ನೀಡಿ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಅಲ್ಲದೇ, ಈ 7 ಮಂದಿಯಿಂದಲೂ ತಲಾ 4,43,170 ರೂ.ಗಳನ್ನು ಇ–ಸ್ವತ್ತು ವಿತರಿಸಿರುವ ದಿನಾಂಕದಿಂದ ವಸೂಲಿ ಮಾಡುವವರೆಗೆ ಶೇ.8ರಷ್ಟು ಬಡ್ಡಿಯೊಂದಿಗೆ ವಸೂಲಿ ಮಾಡಬೇಕೆಂದು ಆದೇಶದಲ್ಲಿ ತಿಳಿಸಿದ್ದಾರೆ. ಹನೂರು ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಮೂರ್ತಿ ಕಡ್ಡಾಯ ಸೇವಾ ನಿವೃತ್ತಿ ದಂಡನೆಗೆ ಗುರಿಯಾದವರಾಗಿದ್ದು, ಹನೂರು ಪ.ಪಂ.ಯ ●7ನೇ ಪುಟಕ್ಕೆ





ಜಗತ್ತು ಕಂಡ ಅದ್ವಿತೀಯ ಯೋಗದ ಮಹಾಚೇತನ ಡಾ.ಬಿ.ಕೆ.ಎಸ್ ಅಯ್ಯಂಗಾರ್



ಮೈಸೂರು, ಡಿ.15–ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ಮೈಸೂರು ಮಹಾನಗರ ಪಾಲಿಕೆಯ ನಮೋ ಯೋಗ ಭವನದಲ್ಲಿ ಯೋಗ ಭೀಷ್ಮ ಯೋಗ ಮಹಾ ಚೇತನ ಡಾ.ಬಿ.ಕೆ.ಎಸ್.ಅಯ್ಯಂಗಾರ್ ಅವರ 105ನೇ ಜಯಂತೋತ್ಸವ ಆಯೋಜಿಸಲಾಯಿತು.

ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಟಿ.ಎ. ಪ್ರಕಾಶ್, ಡಾ. ಬಿ.ಕೆ.ಎಸ್. ಅಯ್ಯಂಗಾರ್ ಅವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಇಡೀ ಜಗತ್ತಿಗೆ ತನ್ನದೇ ಆದ ಯೋಗದ ಪರಂಪರೆಯನ್ನು ಸೃಷ್ಟಿಸಿದವರು ಬಿಕೆಎಸ್ ಅಯ್ಯಂಗಾರ್. ಗುರು ಕೃಷ್ಣಮಾಚಾರ್ಯರ ಗರಡಿಯಲ್ಲಿ ಬೆಳೆದ ಶಿಷ್ಯೋತ್ತಮ ಇವರು ಕಮ್ಯೂನಿಷ್ಟ್ ರಾಷ್ಟ್ರಗಳಲ್ಲೂ ಯೋಗದ ಕಂಪು ಪಸರಿಸಿದವರು. ಜಗಮಾನ್ಯರು ವಿಶ್ವಕ್ಕೆ ಭಾರತೀಯ ಯೋಗಕ್ಕೆ ತನ್ನದೇ ಆದ ನೆಲೆಯನ್ನು ತಂದುಕೊಟ್ಟವರು. ಬಿಕೆಎಸ್ ಹೊಸ ಹೊಸ ಪರಿಕರಗಳನ್ನು ಹಾಗೂ ಉಪಕರಣಗಳನ್ನು ಬಳಸಿ ಯೋಗಾಸನಗಳನ್ನು ಲೀಲಾಜಾಲವಾಗಿ ಮಾಡುವ ನವ ಆವಿಷ್ಕಾರವನ್ನು ಕಂಡುಕೊಂಡು ಅದನ್ನು ಶಿಷ್ಯ ಕೋಟಿಗೆ ಬೋಧಿಸಿ ಯೋಗದಲ್ಲಿ ನಾವೀನ್ಯತೆಯನ್ನು ಪ್ರಚುರಪಡಿಸಿದವರು ಬಿಕೆಎಸ್. ಇವರ ಅಪ್ರತಿಮ ಸಾಧನೆಗೆ ಇಡೀ ಜಗತ್ತೇ ಬೆರಗಾಯಿತು. ಅಲ್ಲದೆ ಇವರನ್ನು ತಮ್ಮ ತಮ್ಮ ದೇಶಗಳಿಗೆ ಆಹ್ವಾನಿಸಲು ತುದಿಗಾಲಿನಲ್ಲಿ ನಿಂತವು. ಜಗತ್ತಿನ ಅನೇಕ ಅನೇಕ ಪ್ರಶಸ್ತಿಗಳಿಗೆ ಜನರ ಭಾಜನರಾದರು. ಅಹಮಿಕೆ ಇಲ್ಲದೆ ತಮ್ಮ ಸರಳ ಸಜ್ಜನಿಕೆಗಳನ್ನು ಜೀವನದುದ್ದಕ್ಕೂ ಬೆಳೆಸಿಕೊಂಡು ಉಳಿಸಿಕೊಂಡು ಬಂದವರು ಎಂದು ಹೇಳಿದರು.

ಹಿರಿಯ ಯೋಗ ಶಿಕ್ಷಕರಾದ ಯೋಗೇಶ್, ಸೇತುರಾಮ್, ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷರಾದ ನಾಗಶ್ರೀ ಸುಚಿಂದ್ರ, ಶ್ರೀ ವಾಸುದೇವ್ ಮಹಾರಾಜ ಫೌಂಡೇಶನ್ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು, ಶ್ರೀಕಾಂತ್ ಕಶ್ಯಪ್, ಚಕ್ರಪಾಣಿ, ರಂಗನಾಥ್,ವಿದ್ಯಾ, ಹಾಗೂ ನೂರಾರು ಯೋಗ ವಿದ್ಯಾರ್ಥಿಗಳು ಹಾಜರಿದ್ದರು.

ಡಾ.ಮೋಹನ್ ಕೃಷ್ಣರಿಗೆ 'ಶಿಕ್ಷಣ ತಜ್ಞ' ಪ್ರಶಸ್ತಿ



ಮೈಸೂರು, ಡಿ.15– ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕ ಡಾ. ಎಸ್.ಎ.ಮೋಹನ್ ಕೃಷ್ಣ ಅವರು ಹೊಸ ದಿಲ್ಲಿಯ ರಿಫಾಸಿಮೆಂಟೊ ಇಂಟರ್ ನ್ಯಾಷನಲ್ ಸಂಸ್ಥೆಯ 'ಶಿಕ್ಷಣ ತಜ್ಞ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಎಂಜಿನಿಯರಿಂಗ್ ಶಿಕ್ಷಣ, ವಿಜ್ಞಾನ ಸಂವಹನ ಮತ್ತು ಖಗೋಳ ಶಾಸ್ತ್ರ ಸಂಶೋಧನೆ ಕ್ಷೇತ್ರದಲ್ಲಿನ ಸಾಧನೆಗಾಗಿ 2023ನೇ ಸಾಲಿನ ಪ್ರಶಸ್ತಿಗೆ ಡಾ.ಎಸ್.ಎ. ಮೋಹನ್ ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದ್ದು, ಇವರು ಸುಮಾರು 18 ವರ್ಷದಿಂದ ಬೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 150ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳು ಇವರಿಗೆ ಸಂದಿವೆ.

ಬೆಳಗಾವಿ ಅಧಿವೇಶನದಲ್ಲಿ ವಿಪಕ್ಷಗಳ ಕಾಲಹರಣ; ಆರೋಪ



ಮೈಸೂರು, ಡಿ.15– ಬೆಳಗಾವಿಯ ಅಧಿವೇಶನದಲ್ಲಿ ನಾಡಿನ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕಾದ ಪ್ರತಿಪಕ್ಷಗಳು ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಧರಣಿ, ಪ್ರತಿಭಟನೆ ಮೂಲಕ ಕಾಲಹರಣ ಮಾಡಿದ್ದು ನಾಚಿಕೆಗೇಡಿನ ಸಂಗತಿ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ತಿಳಿಸಿದ್ದಾರೆ.

ಬೆಳಗಾವಿಯ ಸುವರ್ಣಸೌಧದಲ್ಲಿ ಅಧಿವೇಶನ ನಡೆಯುವಾಗ ಉತ್ತರ ಕರ್ನಾಟಕದ ಸಮಸ್ಯೆಗಳು, ಡಾ.ನಂಜುಂಡಪ್ಪ ವರದಿ, ಗಡಿನಾಡು ಜಿಲ್ಲೆಗಳ ಕುರಿತು ವಿಸ್ತೃತವಾಗಿ ಚರ್ಚಿಸಬೇಕಿತ್ತು. ಆದರೆ, ಸರ್ಕಾರವನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗದೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷದವರು ಧರಣಿಯಲ್ಲೇ ಕಾಲ ಕಳೆದಿದ್ದು ಸರಿಯಲ್ಲ. ವಿಧಾನ ಮಂಡಲ ಅಧಿವೇಶನದ ವೇಳೆ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ಇಲ್ಲದೆ ಕಲಾಪಗಳು ನಡೆದಿದ್ದು ದೊಡ್ಡ ವಿಷಾಧದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಮೇಲ್ಮನೆಯಲ್ಲಿ ಒಬ್ಬ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಸಾಧ್ಯವಾಗದ ಬಿಜೆಪಿ ನಾಯಕರಿಗೆ ಬೇರೆಯವರ ಬಗ್ಗೆ ಮಾತನಾಡಲು ನೈತಿಕ ಹಕ್ಕಿಲ್ಲ. ಪ್ರತಿಪಕ್ಷಗಳು ಕೇಳುವ ಯಾವುದೇ ಪ್ರಶ್ನೆಗಳಿಗೆ ಸರ್ಕಾರದ ಪರವಾಗಿ ಮುಖ್ಯಮಂತ್ರಿ ಹಾಗೂ ಸಚಿವರು ಉತ್ತರ ಕೊಡಲು ಸಮರ್ಥರಿದ್ದರೂ ಬಿಜೆಪಿಯವರಿಗೆ ಜನರ ಹಿತಕ್ಕಿಂತ ರಾಜಕೀಯವೇ ಮುಖ್ಯವಾಗಿತ್ತು ಎಂದು ಆರೋಪಿಸಿದ್ದಾರೆ.



ಮೈಸೂರಿನ ಅಶೋಕಪುರಂನಲ್ಲಿ ಸಿದ್ದಪ್ಪಾಜಿ ದೇವರ ಉತ್ಸವದ ಅಂಗವಾಗಿ ಅನ್ನದಾನಕ್ಕೆ ವೈಯಕ್ತಿಕ ದೇಣಿಗೆ(10 ಸಾವಿರ) ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಸಿದ್ದಪ್ಪಾಜಿ ದೇವಸ್ಥಾನ ಸಮಿತಿ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಅಶೋಕಪುರಂನ ರಾಮು, ಗುರು, ಗುರೂಜಿ, ಚಂದ್ರು, ಅನಿಲ್ ಮತ್ತಿತರರಿದ್ದರು.

ಗ್ರಾಮೀಣ ಅಂಚೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ ಮುಂದುವರಿಕೆ



ಮೈಸೂರು, ಡಿ.15(ಎಸ್‌ಪಿಎನ್)– ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಒಕ್ಕೂಟದ ಮೈಸೂರು ಘಟಕದ ಪದಾಧಿಕಾರಿಗಳು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ನಗರದ ಕೇಂದ್ರ ಅಂಚೆ ಕಚೇರಿ ಎದುರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ 4ನೇ ದಿನಕ್ಕೆ ಕಾಲಿಟ್ಟಿದೆ.

ಅಂಚೆ ನೌಕರರಿಗೆ 8 ಗಂಟೆಗಳ ಕೆಲಸ ನಿಗದಿಪಡಿಸಿ, ನಿವೃತ್ತಿ ವೇತನ ಸೇರಿದಂತೆ ಎಲ್ಲಾ ಸವಲತ್ತು ನೀಡಬೇಕು. ಕಮಲೇಶ್ ಚಂದ್ರ ಸಮಿತಿ ಶಿಫಾರಸ್ಸುಗಳಾದ ಆರ್‌ಟಿಸಿ ವೇತನ ಪರಿಷ್ಕರಣೆಯನ್ನು 2016ರ ಜ.1 ರಿಂದಲೇ ಅನ್ವಯವಾಗುವಂತೆ ನೀಡಬೇಕು, ಎಸ್‌ಡಿಬಿಎಸ್ ಯೋಜನೆಯನ್ನು 3 ಪರ್ಸೆಂಟ್‌ನಿಂದ 10 ಪರ್ಸೆಂಟ್‌ಗೆ ಹೆಚ್ಚಿಸಿ ನಿವೃತ್ತಿ ವೇತನ ನೀಡಬೇಕು. ಐಪಿಪಿಬಿ(ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್), ಗ್ರಾಮೀಣ ಅಂಚೆ ಜೀವ ವಿಮೆ ಕೆಲಸಗಳಿಗೆ ನೀಡುತ್ತಿರುವ ಪ್ರೋತ್ಸಾಹ ಧನವನ್ನು ರದ್ದುಗೊಳಿಸಿ ಕೆಲಸದ ಹೊರಗೆ ಸೇರಿಸಬೇಕು.

ನೂತನವಾಗಿ ನೇಮಕಾತಿ ಹೊಂದಿದ ನೌಕರರಿಗೆ ಕಾರ್ಯ ಭಾರದ ಆಧಾರದ ಮೇಲೆ ವೇತನ ನಿಗದಿಪಡಿಸಬೇಕು. ನೌಕರರು ತಮ್ಮ ಸ್ವಂತ ಮೊಬೈಲ್‌ನಲ್ಲೇ ಇಲಾಖಾ ಕೆಲಸ ನಿರ್ವಹಿಸಲು ಒತ್ತಾಯಿಸುತ್ತಿರುವುದು ಮತ್ತು ಅವೈಜ್ಞಾನಿಕ ಟಾರ್ಗೆಟ್ ನಿಗದಿಪಡಿಸುವುದನ್ನು ಸ್ಥಗಿತಗೊಳಿಸಬೇಕು. ಎಲ್ಲಾ ಕಚೇರಿಗೆ ಲ್ಯಾಪ್‌ಟಾಪ್, ಪ್ರಿಂಟರ್, ಬ್ರಾಡ್‌ಬಾಂಡ್ ನೆಟ್‌ವರ್ಕ್ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಒಕ್ಕೂಟದ ವಿಭಾಗೀಯ ಅಧ್ಯಕ್ಷ ಎಸ್.ಆರ್. ಸೋಮಶೇಖರ್, ಖಜಾಂಚಿ ಮಲ್ಲಯ್ಯ, ಕಾರ್ಯದರ್ಶಿ ಟಿ. ರಾಣಿ ಮೊದಲಾದವರು ಇದ್ದರು.

ಜೀರ್ಣೋದ್ಧಾರ, ಗೋಪುರ ನಿರ್ಮಾಣ ಕಾಮಗಾರಿ ಹಿನ್ನೆಲೆ

ಸಿದ್ದಲಿಂಗಪುರದ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಷಷ್ಠಿ ಜಾತ್ರೆ ರದ್ದು

ಮೈಸೂರು, ಡಿ.15(ಆರ್‌ಕೆ)– ಜೀರ್ಣೋದ್ಧಾರ ಹಾಗೂ ಗೋಪುರ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಮೈಸೂರು–ಬೆಂಗಳೂರು ರಸ್ತೆಯ ಸಿದ್ದಲಿಂಗಪುರ ಬಳಿಯ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಷಷ್ಠಿ ಪ್ರಯುಕ್ತ ಡಿ.18ರಂದು ನಡೆಯಬೇಕಿದ್ದ ವಿಶೇಷ ಪೂಜೆ ಮತ್ತು ಜಾತ್ರೆಯನ್ನು ರದ್ದುಪಡಿಸಲಾಗಿದೆ.



ಈ ಸಂಬಂಧ ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್, ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಡಿ. 11 ರಂದು ಪತ್ರ ಬರೆದಿದ್ದು, ಡಿ. 18 ರಂದು ದೇವಸ್ಥಾನದಲ್ಲಿ ನಡೆಯುವ ಶ್ರೀ ಸುಬ್ರಹ್ಮಣ್ಯ ಷಷ್ಠಿಯಂದು ಯಾವುದೇ ಪೂಜೆ, ಜಾತ್ರೆಯನ್ನು ರದ್ದುಪಡಿಸಿರುವುದರಿಂದ ಅಂದು ಭಕ್ತಾದಿಗಳು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಅವಕಾಶವಿರುವುದಿಲ್ಲ ಎಂಬ ಬಗ್ಗೆ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳಿಗೆ ಮಾಹಿತಿ ನೀಡುವಂತೆ ತಿಳಿಸಿದ್ದಾರೆ.

ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯವನ್ನು ತಮಿಳುನಾಡಿನ ಭಕ್ತರೊಬ್ಬರು ಜೀರ್ಣೋದ್ಧಾರ, ಗೋಪುರ ನಿರ್ಮಾಣ ಹಾಗೂ ಕಳಸ ಪ್ರತಿಷ್ಠಾಪಿಸುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿರುವುದರಿಂದ ವಿಶೇಷ ಪೂಜೆ, ಜಾತ್ರೆಗೆ ಸ್ಥಳಾವಕಾಶವಿಲ್ಲ ಹಾಗೂ ಕಲ್ಲು, ಕಟ್ಟಡ ಸಾಮಾಗ್ರಿಗಳು ಅಲ್ಲಲ್ಲಿ ಬಿದ್ದಿರುವ ಕಾರಣ ಸಂಚಾರ ಮತ್ತು ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಈ ಬಾರಿಯ ಶ್ರೀ ಸುಬ್ರಹ್ಮಣ್ಯ ಷಷ್ಠಿ ಪೂಜೆ ಹಾಗೂ ಜಾತ್ರೆಯನ್ನು ರದ್ದುಪಡಿಸಲಾಗಿದೆ ಎಂದು ದೇವಸ್ಥಾನದ ಪ್ರಧಾನ ಅರ್ಚಕ ಸುಬ್ರಹ್ಮಣ್ಯ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ದೇವಸ್ಥಾನದ ಗೋಪುರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವುದರಿಂದ ಹಾಗೂ ಭಕ್ತಾದಿಗಳ ಹಿತದೃಷ್ಟಿಯಿಂದ ಈ ಬಾರಿಯ ಷಷ್ಠಿ ವಿಶೇಷ ಪೂಜೆ ಹಾಗೂ ಜಾತ್ರೆಯನ್ನು ರದ್ದುಪಡಿಸಲಾಗಿದ್ದು, ಡಿ.18ರಂದು ಭಕ್ತಾದಿಗಳಿಗೆ ದೇವಸ್ಥಾನ ಪ್ರವೇಶಿಸಲು ಅವಕಾಶ ಇರುವುದಿಲ್ಲ ಎಂದು ರೆವಿನ್ಯೂ ಇನ್ಸ್‌ಪೆಕ್ಟರ್ ರಾಘವೇಂದ್ರ ತಿಳಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಡಿ. 15– ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಶನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ ಮೈಸೂರು, ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆ, ಮೈಸೂರು, ಅಮೃತ ಕೃಪಾ ಆಸ್ಪತ್ರೆ ಮೈಸೂರು, ಎಸ್.ಬಿ.ಎಂ ಸ್ನೇಹ ಬಳಗದ ವತಿಯಿಂದ ನಾಳೆ (ಡಿ.16) ಬೆಳಿಗ್ಗೆ 9 ಗಂಟೆಗೆ ಮೈಸೂರಿನ ನಂದಗೋಕುಲದ ಸಮುದಾಯ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಉಚಿತವಾಗಿ ಬಿ.ಪಿ, ಶುಗರ್, ಟಿ.ಬಿ, ಹೆಚ್.ಐ.ವಿ, ತಂಬಾಕು, ಮೂಳೆ, ಗರ್ಭಕೋಶ ತೊಂದರೆ, ಇ.ಸಿ.ಜಿ, ಎಕ್ಸ್ ರೇ, ಇ.ಎನ್.ಟಿ, ಕಣ್ಣಿನ ತಪಾಸಣೆ ಹಾಗೂ ಅಭಾ ಕಾರ್ಡ್, ಇ–ಶಾಮ್ ಕಾರ್ಡನ್ನು ಮಾಡಲಾಗುವುದು. ಸಾರ್ವಜನಿಕ ಇದರ ಸದಪಯೋಗವನ್ನು ಮಾಡಿಕೊಳ್ಳಬೇಕಾಗಿ ಕೋರಲಾಗಿದೆ.

ರಾಜ್ಯದ 'ಕೈ' ನಾಯಕರಿಗೆ ವರಿಷ್ಠರ ಬುಲಾವ್

ಬೆಳಗಾವಿ, ಡಿ.15– ಮುಂಬರುವ ಲೋಕಸಭೆ ಚುನಾವಣೆಗೆ ತಯಾರಿ ಮತ್ತು ನಿಗಮ–ಮಂಡಳಿಗಳಿಗೆ ನೇಮಕ ಸಂಬಂಧ ಚರ್ಚಿಸಲು ಇದೇ 18ರಂದು ದೆಹಲಿಗೆ ಬರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಾಂಗ್ರೆಸ್ ವರಿಷ್ಠರು ಆಹ್ವಾನ ನೀಡಿದ್ದಾರೆ.



ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರಾದ ಬೈರತಿ ಸುರೇಶ್ ಮತ್ತು ಲಕ್ಷ್ಮೀ ಹೆಬ್ಬಾಳಕರ ಸೇರಿ ಕೆಲವು ಸಚಿವರಿಗೆ ಗುರುವಾರ ಕರೆ ಮಾಡಿ ದೆಹಲಿಗೆ ಬರುವಂತೆ ಸೂಚಿಸಿದ್ದಾರೆ. 18ರಿಂದ ಮೂರು ದಿನ ಎಲ್ಲ ನಾಯಕರು ದೆಹಲಿಯಲ್ಲಿ ವಾಸ್ತವ್ಯ ಹೂಡಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಪಕ್ಷದ ಪರಿಷ್ಠರು ರಾಜ್ಯ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ. ಪಕ್ಷ ಸಂಘಟನೆ, ಲೋಕಸಭೆ ಚುನಾವಣೆಗೆ ತಂತ್ರಗಾರಿಕೆ, ನಿಗಮ–ಮಂಡಳಿಗಳಿಗೆ ನೇಮಕ ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆಯುವ ಸಾಧ್ಯತೆಯಿದೆ.

ರಾಜ್ಯದ ಲೋಕಸಭೆ ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯ ಸಹಿತ ವರಿಷ್ಠರನ್ನು ಭೇಟಿ ಮಾಡಲಿರುವ ಸಿದ್ದರಾಮಯ್ಯ ಮತ್ತು ಶಿವಕುಮಾರ್, ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಬಗ್ಗೆಯೂ ಸಮಾಲೋಚನೆ ನಡೆಸಲಿದ್ದಾರೆ. ನಿಗಮ, ಮಂಡಳಿಗೆ ನೇಮಕದ ಪಟ್ಟಿ ಈಗಾಗಲೇ ವರಿಷ್ಠರಿಗೆ ತಲುಪಿದೆ. ಆದರೆ, ಪಟ್ಟಿಯ ಬಗ್ಗೆ ಕೆಲವು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದು, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಸ್ಥಾನ ಒಪ್ಪಿಕೊಳ್ಳಲು ಕೂಡಾ ನಿರಾಕರಿಸುತ್ತಿದ್ದಾರೆ. ಈ ಬಗ್ಗೆಯೂ ಚರ್ಚೆ ನಡೆಯಲಿದೆ. ಜೊತೆಗೆ ಪಕ್ಷದ ಪದಾಧಿಕಾರಿಗಳ ಬದಲಾವಣೆ ಬಗ್ಗೆಯೂ ವಿಚಾರ ವಿನಿಮಯ ನಡೆಯಲಿದೆ ಎಂದೂ ಮೂಲಗಳು ಹೇಳಿವೆ. ಈ ಮಧ್ಯೆ, ನರೇಗಾ ಬಾಕಿ ಬಿಡುಗಡೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಘೋಷಿಸಿದ 5 ಸಾವಿರ ಕೋಟಿ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಸಂಬಂಧಿಸಿದಂತೆ ಕೇಂದ್ರದ ಸಚಿವರನ್ನೂ, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಭೇಟಿ ಮಾಡುವ ಸಾಧ್ಯತೆಯೂ ಇದೆ.

ಬೆಳಗಾವಿ ಅಧಿವೇಶನಕ್ಕೆ ತೆರೆ



ಬೆಳಗಾವಿ, ಡಿ.15–ಬೆಳಗಾವಿ ವಿಧಾನ ಮಂಡಲ ಅಧಿವೇಶನಕ್ಕೆ ಶುಕ್ರವಾರ ತೆರೆ ಬಿದ್ದಿದೆ. ಬೆಳಗಾವಿಯ ಸುವರ್ಣಸೌಧದಲ್ಲಿ ಡಿ. 4ರಂದು ಆರಂಭವಾದ 10 ದಿನಗಳ ಅಧಿವೇಶನ ಇಂದು ಮುಕ್ತಾಯಗೊಂಡಿತು. ಈ ಅಧಿವೇಶನದಲ್ಲಿ ಒಟ್ಟು 17 ಬಿಲ್‌ಗಳು ಅಂಗೀಕಾರವಾಗಿವೆ. 150 ಗಮನ ಸೆಳೆಯುವ ಸೂಚನೆಗಳ ಮೇಲೆ ಚರ್ಚೆ ನಡೆಯಿತು. 42 ಶಾಸಕರು ಒಟ್ಟು 11.04 ಗಂಟೆ ಕಾಲ ಉತ್ತರ ಕರ್ನಾಟಕ ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಎರಡು ದಿನ ಬರಗಾಲದ ಬಗ್ಗೆ ಚರ್ಚೆ ನಡೆಯಿತು.



ಇತ್ತೀಚೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಶಿವಮೊಗ್ಗದಲ್ಲಿ ನಡೆದ ರಾಜ್ಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಮೈಸೂರಿನ ಸಾವಿತ್ರಿ ಕಾನ್ವೆಂಟ್‌ನ ವಿದ್ಯಾರ್ಥಿ ಜಾನ್ ಡೇನಿಯಲ್ ಗೆಲುವು ಸಾಧಿಸಿ ನವದೆಹಲಿಯಲ್ಲಿ ನಡೆಯುತ್ತಿರುವ ರಾಷ್ಟ್ರ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿದ್ದಾರೆ. ಚಿತ್ರದಲ್ಲಿ ಮುಖ್ಯೋಪಾಧ್ಯಾಯರಾದ ಎನ್. ದಯಾನಂದ, ಅಧ್ಯಕ್ಷ ರಾಜು ಕೆ. ಬಾಟಿಯಾ, ಆಡಳಿತಾಧಿಕಾರಿ ಕೆ.ಪಿ. ಪುಷ್ಪಲತಾ, ಶುಗುಪ್ತಾ ಶಿರೀನ್, ಎಸ್. ಶ್ವೇತಾ ಮತ್ತಿತರರನ್ನು ಕಾಣಬಹುದು.

ಮೈಸೂರಿನಲ್ಲಿ ದಕ್ಷಿಣ ವಲಯ ರಿಯಾಲ್ಟರ್ಸ್ ಅಸೋಸಿಯೇಷನ್ ಸಮಾವೇಶ

ಮೈಸೂರು, ಡಿ. 15– ನ್ಯಾಷನಲ್ ಅಸೋಸಿಯೇಷನ್ ಆಫ್ ರಿಯಾಲ್ಟರ್ಸ್ ಇಂಡಿಯಾ (ಎನ್‌ಎಆರ್–ಇಂಡಿಯಾ), ಮೈಸೂರು ರಿಯಾಲ್ಟರ್ಸ್ ಅಸೋಸಿಯೇಷನ್ ವತಿಯಿಂದ ದಕ್ಷಿಣ ವಲಯ ರಿಯಲ್ ಎಸ್ಟೇಟ್ ವ್ಯಾಪಾರ ವಿನಿಮಯ ಸಭೆ ಶನಿವಾರ (ಡಿ.9) ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

NAR ಇಂಡಿಯಾದ ಅಧ್ಯಕ್ಷ ಸಿ.ಆರ್. ಶಿವಕುಮಾರ್ ಸಭೆಯನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿ, 150 ಸದಸ್ಯರ ನಿರೀಕ್ಷಿತ ಹಾಜರಾತಿಯೊಂದಿಗೆ, ಸಮಾವೇಶವು ಉದ್ಯಮದ ಬೆಳವಣಿಗೆ, ಭವಿಷ್ಯದ ವ್ಯಾಪಾರ ನಿರೀಕ್ಷೆಗಳು ಮತ್ತು ಸಹಯೋಗದ ಅವಕಾಶಗಳ ಕುರಿತು ಚರ್ಚೆಗಳಿಗೆ ಕ್ರಿಯಾತ್ಮಕ ವೇದಿಕೆಯಾಗಿದೆ ಎಂದರು. NAR ಇಂಡಿಯಾದ ದಕ್ಷಿಣ ವಲಯದ ನಿರ್ದೇಶಕ ಬಿ ಪ್ರಭು ಮಾತನಾಡಿ, ದಕ್ಷಿಣ ವಲಯದ ರಿಯಲ್ ಎಸ್ಟೇಟ್ ವ್ಯಾಪಾರ ವಿನಿಮಯ ಸಭೆಯು ಉದ್ಯಮದ ಆಟಗಾರರು ಒಟ್ಟಾಗಿ ಸೇರಲು, ಒಳನೋಟಗಳನ್ನು ಹಂಚಿಕೊಳ್ಳಲು ಮತ್ತು ಅಪಾರ ಸಾಮರ್ಥ್ಯವನ್ನು ಅನ್ವೇಷಿಸಲು ಒಂದು ಅಸಾಧಾರಣ ಅವಕಾಶವಾಗಿದೆ ಎಂದರು. ಮೈಸೂರು ರಿಯಾಲ್ಟರ್ಸ್ ಅಸೋಸಿಯೇಶನ್‌ನ ಅಧ್ಯಕ್ಷ ಮಹಾವೀರ್ ಮಾತನಾಡಿ, ಈ ಸಮಾವೇಶವು ರಿಯಲ್ ಎಸ್ಟೇಟ್ ಕ್ಷೇತ್ರವು ವಿವಿಧ ಅಂಶಗಳಲ್ಲಿ ನೀಡುವ ನಂಬಲಾಗದ ಅವಕಾಶಗಳ ಪ್ರದರ್ಶನವಾಗಿದೆ ಎಂದು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.12.2023 ಶನಿವಾರ, ಮಳೆ ನಕ್ಷತ್ರ: ಮೂಲ 16.12.2023 ರಿಂದ 28.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಮಹಾಬೋಧಿ ಶಾಲೆ :** ಚಿಗುರು ಹಬ್ಬ, ಶಾಲಾ ವಾರ್ಷಿಕೋತ್ಸವ, ಉಪಸ್ಥಿತರು : ಮಹಾಬೋಧಿ ಸೊಸೈಟಿ ಪ್ರಧಾನ ಕಾರ್ಯದರ್ಶಿ ಭಿಕ್ಕು ಆನಂದ ಭಂತೇಜಿ, ಮುಖ್ಯ ಅತಿಥಿಗಳು : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ (ಆಡಳಿತ) ಉಪನಿರ್ದೇಶಕ ಹೆಚ್.ಕೆ. ಪಾಂಡು, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಗಾಯಕ ಫೈಸಲ್ ಖಾನ್ ಅಶೂರ್, ಸ್ವಾನ್ಸಿನ್ ಗ್ಯಾಲ್ಪೋ ವಿಮಲೋ, ಸ್ಥಳ: ಕಲಾಮಂದಿರ, ಬೆಳಗ್ಗೆ 9ಕ್ಕೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಶ್ರೀ ಬಲಮುರಿ ಗಣಪತಿ ದೇವಸ್ಥಾನ :** 34ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಮೃತ್ಯು ನಿವಾರಣೆಗಾಗಿ, ಆರೋಗ್ಯಕ್ಕಾಗಿ ಮಹಾಮೃತ್ಯುಂಜಯ ಹೋಮ, ಬೆಳಗ್ಗೆ 9 ರಿಂದ ಗಣಪತಿ ಹೋಮ, ಶ್ರೀ ಸುಬ್ರಹ್ಮಣ್ಯ ಹೋಮ, ಶ್ರೀ ಧರ್ಮಶಾಸ್ತ್ರ ಹೋಮ, ಶ್ರೀ ಗುರುದತ್ತಾತ್ರೇಯ ಹೋಮ, ಶ್ರೀ ಆಂಜನೇಯ ಹೋಮ, ಶ್ರೀ ನವಗ್ರಹ ಹೋಮ, ನಾಗದೇವತಾ ಹೋಮ, ಕುಂಭಾಭಿಷೇಕ, ಸ್ಥಳ: ದೇವಸ್ಥಾನ, ರೈಲ್ವೆ ನಿಲ್ದಾಣದ ಸಮೀಪ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.

■ **ಅಸೆಂಡೆನ್ಸ್ :** ಆರ್. ಚೇತನ್ ಅವರಿಂದ ವಾಟರ್‌ಕಲರ್ ಸೋಲೋ ಪ್ರದರ್ಶನ, ಸ್ಥಳ: ಶ್ರೀ ಕಲಾನಿ ಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಗೃಹಶೋಭೆ :** ಗೃಹಶೋಭೆ ಜೀವನ ಶೈಲಿಯ ಪ್ರದರ್ಶನ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 10 ರಿಂದ.

■ **ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಮಾನಸ ಗಂಗೋತ್ರಿ, ಮೈಸೂರು:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಹೈಕೋರ್ಟ್ ವಕೀಲ ಡಾ. ಎನ್.ಬಿ. ಶಿವರುದ್ರಪ್ಪ ಅವರಿಂದ ಭಾರತದ ಸಂವಿಧಾನ ಮತ್ತು ಸಂವಿಧಾನಾತ್ಮಕ ಕಾನೂನು ಕುರಿತು ಉಪನ್ಯಾಸ, ಅಧ್ಯಕ್ಷತೆ : ಕಾನೂನು ಅಧ್ಯಯನ ವಿಭಾಗದ ಡೀನ್ ಪ್ರೊ. ಟಿ.ಆರ್. ಮಾರುತಿ, ಸ್ಥಳ: ಕಾನೂನು ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿ ಸಂಘದ ಉದ್ಘಾಟನೆ, ಉದ್ಘಾಟನೆ : ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಮೈಸೂರು ವಿವಿ ನಿವೃತ್ತ ಗ್ರಂಥಪಾಲಕ ಡಾ. ಸಿ.ಪಿ. ರಾಮಶೇಷ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎಂ. ಚಂದ್ರಶೇಖರ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು :** ಕಾಗ್ನಿಟಿವ್ ಕಂಪ್ಯೂಟಿಂಗ್ ಅಂಡ್ ಇನ್‌ಫಾರ್ಮೇಷನ್ ಪ್ರೊಸೆಸಿಂಗ್ ಕುರಿತು ಅಂತರಾಷ್ಟ್ರೀಯ ಸಮ್ಮೇಳನ, ಸ್ಥಳ: ಸೆಮಿನಾರ್ ಹಾಲ್, ಗೋಲ್ಡನ್ ಜ್ಯೂಬಿಲಿ ಭವನ, ಬೆಳಗ್ಗೆ 10.30ಕ್ಕೆ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ಪದವೀಧರರ ದಿನಾಚರಣೆ ಮತ್ತು ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಬೆಳಗಾವಿ ವಿಶ್ವೇಶ್ವರಾಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಕುಲಪತಿ ಡಾ. ಎಸ್. ವಿದ್ಯಾಶಂಕರ್, ಅಧ್ಯಕ್ಷತೆ : ಎನ್‌ಐಇ ಅಧ್ಯಕ್ಷ ಡಾ. ಎಂ.ಎಸ್. ರಂಗನಾಥ್, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಇಂಡೋರ್ ಕ್ರೀಡಾ ಸಮುಚ್ಚಯ, ಮಾನಂದವಾಡಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಡಾ. ಬಾಬು ಜಗಜೀವನರಾಂ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಡಾ. ಬಾಬು ಜಗಜೀವನರಾಂ ಸ್ಮರಣಾರ್ಥ 52ನೇ ವರ್ಷದ ವಿಜಯ ದಿವಸ ಹಾಗೂ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಜೀವರತ್ನ ಫೌಂಡೇಶನ್ ಸಂಸ್ಥಾಪಕ ಎಂ. ಶಿವಪ್ರಸಾದ್, ಮಾಜಿ ಸೈನಿಕ ಡಾ. ಆರ್. ನಾಗಭೂಷಣ್ ಅವರಿಂದ ರಕ್ಷಣಾ ಮಂತ್ರಿಯಾಗಿ ಬಾಬು ಜಗಜೀವನರಾಮ್ ಅವರ ಪಾತ್ರ ಕುರಿತು ಉಪನ್ಯಾಸ, ಅಧ್ಯಕ್ಷತೆ : ಡಾ. ಬಾಬು ಜಗಜೀವನರಾಂ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ. ಆರ್. ತಿಮ್ಮರಾಯಪ್ಪ, ಉಪಸ್ಥಿತರು : ಬರಹಗಾರ ಡಾ. ಹರೀಶ್‌ಕುಮಾರ್, ಸ್ಥಳ: ಡಾ. ಬಾಬು ಜಗಜೀವನರಾಂ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಸುರುಚಿ ರಂಗಮನೆ :** "ಕಥೆ ಕೇಳೋಣ ಬನ್ನಿ" ಕಾರ್ಯಕ್ರಮ–806, ಕಥೆ ಹೇಳುವವರು: ನಿವೃತ್ತ ಮುಖ್ಯ ಶಿಕ್ಷಕ ಪಿ.ಮುಕುಂದ ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ

■ **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್:** ಸುಪ್ರಿಯಾ ರಘುನಂದನ್ ಅವರಿಂದ ಭಾವಗೀತೆಗಳ ಗಾಯನ, ಷಣ್ಮುಖ ಸಜ್ಜ–ವಯೋಲಿನ್, ಆತ್ಮಾರಾಂ–ಮೃದಂಗ, ವಿನಯ್ ರಂಗೋಳ್–ರಿದಂ ಪ್ಯಾಡ್, ಸ್ಥಳ: ಸಂಗೀತ ಕಲಾನಿಧಿ ವೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಇನ್ನೋವೇಟಿವ್ ಮೈಸೂರು, ಕನ್ನಡ ಸಾಹಿತ್ಯ ಕಲಾಕೂಟ :** ಮಹಿಳಾ ಯಕ್ಷ ಸಂಭ್ರಮ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಡಾ. ಧರಣೀದೇವಿ ಮಾಲಗತ್ತಿ, ಗೌರವಾರ್ಪಣೆ : ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಮುಖ್ಯ ಅತಿಥಿಗಳು : ಉದ್ಯಮಿ ಜಿ.ಎಂ. ಹೆಗಡೆ, ಸಂಸ್ಕೃತಿ ಪೋಷಕರಾದ ಡಾ. ಕೆ. ರಘುರಾಂ ವಾಜಪೇಯಿ, ಎ.ಪಿ. ನಾಗೇಶ್, ಅಧ್ಯಕ್ಷತೆ : ಯಕ್ಷಗಾನ ಚಿಂತಕ ಜಿ.ಎಸ್. ಭಟ್ಟ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಕರ್ನಾಟಕ ಮಹಿಳಾ ಯಕ್ಷಗಾನ ನಿರ್ದೇಶಕ ಶ್ರೀನಿವಾಸ ಸಾಸ್ತಾನ, ಇನ್ನೋವೇಟಿವ್ ಕೋಶಾಧ್ಯಕ್ಷ ಡಾ.ಎಸ್.ಎನ್. ಹೆಗಡೆ, ಕಾರ್ಯದರ್ಶಿ ಹೇರಂಬ ಭಟ್ಟ, ಸಹಕಾರಿ ಧುರೀಣ ಜಗದೀಶ್ ಹೆಬ್ಬಾರ್, ಶ್ರೀನಿವಾಸ ಸಾಸ್ತಾನ ನಿರ್ದೇಶನದಲ್ಲಿ ಕರ್ನಾಟಕ ಮಹಿಳಾ ಯಕ್ಷಗಾನ ಕಲಾವಿದರಿಂದ ಶಿವಪಂಚಾಕ್ಷರಿ ಮಹಿಮೆ ಯಕ್ಷಗಾನ ಪ್ರಸಂಗ, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು, ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಮೈಸೂರು :** ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15 ರಿಂದ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** 63ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 5 ರಿಂದ ಗಣಪತಿ ಹೋಮ, ತುಪ್ಪದ ಅಭಿಷೇಕ, ಶ್ರೀ ಅಯ್ಯಪ್ಪ ಸ್ವಾಮಿಗೆ ಅಲಂಕಾರ ಪೂಜಾ, ಮಧ್ಯಾಹ್ನ 3.30 ರಿಂದ ವಿದ್ಯಾರಣ್ಯಪುರಂನ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಿಂದ ಅಯ್ಯಪ್ಪಸ್ವಾಮಿ ದೇವಾಲಯದವರೆಗೆ ಮೆರವಣಿಗೆ, ಸಂಜೆ 6 ರಿಂದ ಭಕ್ತಿಗೀತೆಗಳ ಕಾರ್ಯಕ್ರಮ, ರಾತ್ರಿ 7 ರಿಂದ ಅಯ್ಯಪ್ಪನ್ ಭಜನೆ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯ, ಚಾಮುಂಡಿಬೆಟ್ಟದ ಪಾದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ರವೀಂದ್ರ ಜೋಶಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯ ಕ್ರಮ, ಪ್ರಸ್ತುತಿ– ಡಾ. ಅನಿಲ್ ಕುಮಾರ್, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, 10.00 ಬಾಂಬೆ ಜಯಶ್ರೀ – ಹಾಡುಗಾರಿಕೆ

ಮಧ್ಯಾಹ್ನ: 12.30ದೇವರನಾಮ, 12.45 ಜನಪದ ಸಂಗೀತ, 1.30 ಪ್ರಗತಿಪಥ–ಸಾವರಿನ್ ಗೋಲ್ಡ್ ಬಾಂಡ್ ಯೋಜನೆ ಕುರಿತು ಫಣೀಶ್ ಅವರಿಂದ ಮಾಹಿತಿ, 1.20 ಭಾವಗೀತೆ, 3.30 ಮಕ್ಕಳ ಮಂಟಪ–ಶ್ರೀರಂಗರಾವ್ ಸ್ಮಾರಕ ವಿಕಲ ಚೇತನರ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.30 ನೆನಪಿನಂಗಳ– ಖ್ಯಾತ ಗಮಕ ಕಲಾವಿದರಾದ ಹೊಸಹಳ್ಳಿ ಕೇಶವಮೂರ್ತಿ ಅವರೊಂದಿಗೆ ಜಿ.ರಾಜಲಕ್ಷ್ಮೀ ಶ್ರೀಧರ್ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.15 ಯುವವಾಣಿ, 9.30 ಶ್ರದ್ಧೆಯ ಸರಕಿನ ಉದ್ಯಮ– ಉದ್ಯಮಿ ಬಿ.ಎಸ್. ವಿಜಯಾ ಅವರೊಡನೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ವಿದುಷಿ ಕಲಾಪಣಿ ಕೋಂಕಲಿ – ಗಾಯನ

ದೇಶದ ಅಭಿವೃದ್ಧಿ ದೃಷ್ಟಿಯಿಂದ ಎಲ್ಲಾ ವಿಧದ ಕೈಗಾರಿಕೆಗೆ ಕೇಂದ್ರ ಸರ್ಕಾರ ಉತ್ತೇಜಿಸುತ್ತಿದೆ

ಎಂಎಸ್‌ಎಂಇ ಸಚಿವಾಲಯದ ಅಪರ ಅಭಿವೃದ್ಧಿ ಆಯುಕ್ತೆ ಡಾ.ಇಶಿತಾ ಗಂಗೂಲಿ ತ್ರಿಪಾಠಿ ವಿವರಣೆ

ಮೈಸೂರು, ಡಿ.15(ಎಸ್‌ಬಿಡಿ)– ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಲವು ಸೌಲಭ್ಯಗಳನ್ನು ಕಲ್ಪಿಸಿದ್ದು, ಈ ಬಗ್ಗೆ ಉದ್ದಿಮೆದಾರರಿಗೆ ಮಾಹಿತಿ ತಲುಪಬೇಕಿದೆ ಎಂದು ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ(ಎಂಎಸ್‌ಎಂಇ) ಸಚಿವಾಲಯದ ಅಪರ ಅಭಿವೃದ್ಧಿ ಆಯುಕ್ತೆ ಡಾ.ಇಶಿತಾ ಗಂಗೂಲಿ ತ್ರಿಪಾಠಿ ಹೇಳಿದರು.



ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್(SIDBI-ಸಿಡ್ಬಿ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (KASSIA-ಕಾಸಿಯಾ)ದ ಸಹಯೋಗದಲ್ಲಿ ಮೈಸೂರಿನ ಹೋಟೆಲ್ ಪೈ ವಿಸ್ತಾ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಸವಲತ್ತುಗಳು ಹಾಗೂ ಹಣಕಾಸಿನ ನೆರವು' ಕುರಿತ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ರಾಷ್ಟ್ರದ ಅಭಿವೃದ್ಧಿಗೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಉತ್ತೇಜನ ನೀಡುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಿದೆ. ಆಯವ್ಯಯದಲ್ಲೂ ಈ ಕ್ಷೇತ್ರಕ್ಕೆ ಆದ್ಯತೆ ನೀಡಿ, ಹೆಚ್ಚಿನ ಅನುದಾನ ಮೀಸಲಿಡಲಾಗಿದೆ. ಸೂಕ್ಷ್ಮ, ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳನ್ನು ಗುರುತಿಸಿ, ಸಾಲ ಸೌಲಭ್ಯ ಸೇರಿದಂತೆ ಇತರೆ ಸೌಕರ್ಯಗಳನ್ನು ತಲುಪಿಸುವ ನಿಟ್ಟಿನಲ್ಲಿ ಉತ್ತಮ ಪ್ರಗತಿಯಾಗಿದೆ. ಮುಂದಿನ ಸಾಲಿನಲ್ಲಿ ಯೋಜನೆಗಳನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶವಿದೆ ಎಂದು ತಿಳಿಸಿದರು.

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಉತ್ತೇಜಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳು, ಕಾರ್ಯಕ್ರಮಗಳ ಬಗ್ಗೆ ಎಲ್ಲರಿಗೂ ಮಾಹಿತಿ ತಲುಪಿಸುವಲ್ಲಿ ಉದ್ಯಮಕ್ಕೆ ಸಂಬಂಧಿಸಿದ ಸಂಘ ಸಂಸ್ಥೆಗಳು ಹಾಗೂ ಬ್ಯಾಂಕ್‌ಗಳ ಸಹಕಾರ ಬಹಳ ಮುಖ್ಯ. ಸರ್ಕಾರದ ಸಾಲ ಸೌಲಭ್ಯ, ಸಬ್ಸಿಡಿ ಇನ್ನಿತರ ಮಾಹಿತಿಯನ್ನು ಹೆಚ್ಚು ಜನರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಈ ರೀತಿಯ ಅರಿವು ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಡಿಪಿ ಕೊಡುಗೆ ವೃದ್ಧಿಸಲಿ: ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (ಸಿಡ್ಬಿ) ಬೆಂಗಳೂರು ಘಟಕದ ಮುಖ್ಯ ಪ್ರಧಾನ ವ್ಯವಸ್ಥಾಪಕ ಹಾಗೂ ಪ್ರಾದೇಶಿಕ ಮುಖ್ಯಸ್ಥ ಸಾತ್ಯಕಿ ರಸ್ತೋಗಿ ಮಾತನಾಡಿ, ಎಂಎಸ್‌ಎಂಇ ನಗರ ಪ್ರದೇಶ ಮಾತ್ರವಲ್ಲ ಗ್ರಾಮೀಣ ಭಾಗವನ್ನೂ ವ್ಯಾಪಿಸಿದೆ. ಆದರೆ ರಾಷ್ಟ್ರದ ಜಿಡಿಪಿಗೆ ಎಂಎಸ್‌ಎಂಇ ಕೊಡುಗೆ ಶೇ.30ರಷ್ಟು ಮಾತ್ರ, ಇತರೆ ದೇಶಗಳಲ್ಲಿ ಈ ಪ್ರಮಾಣ ಶೇ.50–60ರಷ್ಟಿದೆ. ಭಾರತದಲ್ಲಿ ಜಿಡಿಪಿ ಕೊಡುಗೆಯನ್ನು ಶೇ.40ಕ್ಕೆ ವೃದ್ಧಿಸುವ ಪ್ರಯತ್ನ ನಡೆದಿದೆ. ಹಲವು ಉದ್ದಿಮೆಗಳನ್ನು ಎಂಎಸ್‌ಎಂಇ ಅಡಿಯಲ್ಲಿ ತರಲಾಗುತ್ತಿದೆ. ಉದ್ದಿಮೆದಾರರು ಎಲ್ಲಾ ರೀತಿಯ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಇವರು ಏಕವ್ಯಕ್ತಿ ಪ್ರದರ್ಶನ(ಒನ್ ಮ್ಯಾನ್ ಶೋ) ಮಾಡಬೇಕು. ಎಲ್ಲಾ ಹಂತಗಳಲ್ಲೂ ಒಬ್ಬರೇ ನಿರ್ವಹಣೆ ಮಾಡುವ ಪರಿಸ್ಥಿತಿ ಸೃಷ್ಟಿಯಾಗಿರುತ್ತದೆ. ಹಾಗಾಗಿ ಎಂಎಸ್‌ಎಂಇಗೆ ಮತ್ತಷ್ಟು ಹಣಕಾಸಿನ ನೆರವು ಹಾಗೂ ಉತ್ತೇಜನ ಅಗತ್ಯವಿದೆ ಎಂದು ಅಭಿಪ್ರಾಯಿಸಿದರು.

ಕಾಸಿಯಾ ಅಧ್ಯಕ್ಷ ಸಿ.ಎ.ಶಶಿಧರ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎಂಎಸ್‌ಎಂಇ ಅಭಿವೃದ್ಧಿ ಮತ್ತು ಸೌಲಭ್ಯ ಕಚೇರಿಯ ಜಂಟಿ ನಿರ್ದೇಶಕ ಹಾಗೂ ಮುಖ್ಯಸ್ಥ ಡಾ.ಕೆ.ಸಾಕ್ರಟೀಸ್, ಕೆನರಾ ಬ್ಯಾಂಕ್ ಸಹಾಯಕ ವ್ಯವಸ್ಥಾಪಕ ಹಾಗೂ ಪ್ರಾದೇಶಿಕ ನಿರ್ದೇಶಕ ಎಸ್.ರಾಜಶೇಖರ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್, ಸಿಡ್ಬಿ ಮೈಸೂರು ಶಾಖೆ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಆಲ್ಬರ್ಟ್ ಜೆರ್ಮಿ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು ಸೇರಿದಂತೆ ಮೈಸೂರು ಇಂಡಸ್ಟ್ರೀಸ್ ಅಸೋಸಿಯೇಷನ್, ಹೆಬ್ಬಾಳ್ ಇಂಡಸ್ಟ್ರಿಯಲ್ ಎಸ್ಟೇಟ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್, ಕೆಎಡಿಬಿ ಇಂಡಸ್ಟ್ರಿಯಲ್ ಏರಿಯಾ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘ, ಕಾತ್ಕಿ ಇಂಡಸ್ಟ್ರಿಯಲ್ ಅಸೋಸಿಯೇಷನ್, ಮೈಸೂರು ಪ್ರಿಂಟರ್ಸ್ ಕ್ಲಸ್ಟರ್ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಕೌನ್ಸಿಲ್‌ನ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

> ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೋದ್ಯಮದಲ್ಲಿ ಆರ್ಥಿಕ ಸಾಕ್ಷರತೆ ಸಾಧಿಸುವುದು ಬಹಳ ಮುಖ್ಯ. ಈ ಮೂಲಕ ಕೈಗಾರಿಕೋದ್ಯಮಕ್ಕೆ ಪರಿಣಾಮಕಾರಿ ಉತ್ತೇಜನ ದೊರಕಲಿದೆ. ಹಾಗಾಗಿ ದೇಶದ ಒಂದು ಕೋಟಿ ಅನೌಪಚಾರಿಕ(informal) ಉದ್ಯಮಗಳನ್ನು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಡಿ ತರಲಾಗಿದೆ. ಹೊಸ ಉದ್ದಿಮೆದಾರರು ಸೇರಿದಂತೆ ಹಲವು ಕೈಗಾರಿಕೋದ್ಯಮಿಗಳು ಗರಿಷ್ಠ 10 ಲಕ್ಷ ರೂ. ಸಾಲ ಸೌಲಭ್ಯ ಪಡೆಯುತ್ತಿದ್ದಾರೆ. ಅಂತಹವರಿಗೂ ಸುಲಭವಾಗಿ ದೊರಕುವಂತೆ ಹಾಗೂ ಮರು ಪಾವತಿಗೆ ಅನುಕೂಲವಾಗುವ ರೀತಿಯಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ
> – ಡಾ.ಇಶಿತಾ ಗಂಗೂಲಿ ತ್ರಿಪಾಠಿ,

ಸಂಸತ್ ಸ್ಮೋಕ್ ಬಾಂಬ್ ದಾಳಿ ಮಾಸ್ಟರ್ ಮೈಂಡ್ ಲಲಿತ್ ಝಾ ಅರೆಸ್ಟ್

ನವದೆಹಲಿ, ಡಿ. 15– ಸಂಸತ್ತಿನಲ್ಲಿ ನಡೆದ ಕಲರ್ ಗ್ಯಾಸ್ ಸ್ಫೋಟದ ಮಾಸ್ಟರ್ ಮೈಂಡ್ ಲಲಿತ್ ಝಾನನ್ನು ದೆಹಲಿಯ ವಿಶೇಷ ಪೊಲೀಸ್ ತಂಡ ಗುರುವಾರ ರಾತ್ರಿ ಬಂಧಿಸಿದೆ.



ನಾಪತ್ತೆಯಾಗಿದ್ದ ಈತನಿಗಾಗಿ ಪೊಲೀಸರು ತೀವ್ರ ಶೋಧ ನಡೆಸುತ್ತಿದ್ದರು. ಗುರುವಾರ ಬೆಳಗ್ಗೆ ಈತ ರಾಜಸ್ತಾನ್‌ನಲ್ಲಿ ಇದ್ದುದ್ದಾಗಿ ಪೊಲೀಸರಿಗೆ ಮಾಹಿತಿ ದೊರಕಿತ್ತು. ಆದರೆ, ಗುರುವಾರ ರಾತ್ರಿ ವೇಳೆಗೆ ಲಲಿತ್ ಝಾ ದೆಹಲಿಯ ಕರ್ತವ್ಯಪಥ್ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಾನೆ. ಈತನನ್ನು ಬಂಧಿಸಿದ ವಿಶೇಷ ತನಿಖಾ ತಂಡದ ಅಧಿಕಾರಿಗಳು ಇಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಏಳು ದಿನಗಳ ಕಾಲ ಪೊಲೀಸ್ ವಶಕ್ಕೆ ಲಲಿತ್ ಝಾನನ್ನು ಒಪ್ಪಿಸಲಾಗಿದೆ.

ಬಿಹಾರದ ಅರ್ಚಕರೊಬ್ಬರ ಪುತ್ರನಾಗಿರುವ ಲಲಿತ್ ಝಾ ಸಂಸತ್‌ನಲ್ಲಿ ನಡೆದ ಕಲರ್ ಗ್ಯಾಸ್ ಸ್ಫೋಟದ ಮಾಸ್ಟರ್ ಮೈಂಡ್ ಎಂದು ಪೊಲೀಸರು ತಿಳಿಸಿದ್ದಾರೆ. ಕೊಲ್ಕತ್ತಾದ ಶಾಲೆಯೊಂದರಲ್ಲಿ ಶಿಕ್ಷಕನಾಗಿದ್ದ ಈತ ಪಶ್ಚಿಮ ಬಂಗಾಳದ ಬುಡಕಟ್ಟು ಸಮುದಾಯದ ಶಿಕ್ಷಣಕ್ಕಾಗಿ ಶ್ರಮಿಸುತ್ತಿರುವ ಎನ್‌ಜಿಒ ಒಂದರ ಪ್ರಧಾನ ಕಾರ್ಯದರ್ಶಿಯಾಗಿದ್ದ. ಗಾಂಧಿ ಚಿಂತನೆಗಳ ಹಾಗೂ ಪ್ರಧಾನಿ ಮೋದಿಯವರ ವಿರೋಧಿಯಾಗಿದ್ದ ಲಲಿತ್ ಝಾ ಭಗತ್ ಸಿಂಗ್‌ರಿಂದ ಪ್ರೇರೇಪಣೆಗೊಂಡಿದ್ದು, ಫೇಸ್ ಬುಕ್‌ನಲ್ಲಿರುವ ಭಗತ್ ಸಿಂಗ್ ಫ್ಯಾನ್ ಕ್ಲಬ್ ಎಂಬ ಹೆಸರಿನಲ್ಲಿ ಪೇಜ್‌ವೊಂದನ್ನು ಕ್ರಿಯೇಟ್ ಮಾಡಿಕೊಂಡು ಅದರ ಮೂಲಕ ಎಲ್ಲರನ್ನೂ ಸಂಘಟಿಸಿದ್ದ, 22ನೇ ವರ್ಷಾಚರಣೆ ದಿನವೇ ದಾಳಿ ನಡೆಸಲು ದಿನ ನಿಗದಿ ಮಾಡಿದ್ದ ಈತ ಅದಕ್ಕಾಗಿ ಹೊಸ ಸಂಸತ್ ಭವನದ ಭದ್ರತೆಯ ಬಗ್ಗೆ ಪರಿಶೀಲಿಸಿದ್ದ ಎಂದು ಹೇಳಲಾಗಿದೆ. ಬುಧವಾರ ಕೃತ್ಯ ನಡೆಯುವ ಮುನ್ನ ಎಲ್ಲ ಆರೋಪಿಗಳಿಂದ ಮೊಬೈಲ್‌ಗಳನ್ನು ಪಡೆದುಕೊಂಡಿದ್ದ ಲಲಿತ್ ಝಾ, ಬಳಿಕ ಸಂಸತ್ತಿನ ಹೊರಗೆ ನೀಲಂ ಮತ್ತು ಅಮೋಲ್ ಸ್ಮೋಕ್ ಕ್ಯಾನ್ ಸಿಡಿಸಿದ ದೃಶ್ಯವನ್ನು ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದು ಪರಾರಿಯಾಗಿದ್ದ. ತಾನು ಸೆರೆ ಹಿಡಿದ ವಿಡಿಯೋವನ್ನು ಕೋಲ್ಕತ್ತಾದಲ್ಲಿನ ಎನ್‌ಜಿಒ ಮುಖ್ಯಸ್ಥನ ಮೊಬೈಲ್‌ಗೆ ಕಳುಹಿಸಿ, ಇದನ್ನು ಸುರಕ್ಷಿತವಾಗಿ ಇಡು ಎಂಬ ಸಂದೇಶ ರವಾನಿಸಿದ್ದ. ಸಾಮಾಜಿಕ ಜಾಲತಾಣದ ಮೂಲಕ ಆರೋಪಿಗಳು ಸಂಪರ್ಕದಲ್ಲಿದ್ದರು ಎಂಬುದನ್ನು ಅರಿತುಕೊಂಡಿದ್ದ. ಸೈಬರ್ ಕ್ರೈಂ ಪೊಲೀಸರು ಕೃತ್ಯದ ಮಾಸ್ಟರ್ ಮೈಂಡ್ ಲಲಿತ್ ಝಾ ಎಂಬುದನ್ನು ಗುರುತಿಸಿದ್ದರು. ಹೀಗಾಗಿ ಈತನಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದರು. ಸಂಸತ್‌ನಲ್ಲಿ ಕಲರ್ ಗ್ಯಾಸ್ ಸ್ಫೋಟಿಸಿದ ನಾಲ್ವರು ಆರೋಪಿಗಳ ಮೊಬೈಲ್‌ಗಳನ್ನು ಈತ ನಾಶಪಡಿಸಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಸಂಸತ್ ಭದ್ರತಾ ಲೋಪ ಪ್ರಕರಣ

ಮೈಸೂರಿಗೆ ಮನೋರಂಜನ್, ಸಾಗರ್ ಶರ್ಮಾ ಕರೆತರುವ ಸಾಧ್ಯತೆ

ಮೈಸೂರು, ಡಿ.15(ಆರ್‌ಕೆ)– ವಿಶೇಷ ತನಿಖಾ ತಂಡ(SIT)ದ ವಶದಲ್ಲಿರುವ ಸಂಸತ್ ಭವನಕ್ಕೆ ನುಸುಳಿದ್ದ ಆರೋಪಿಗಳ ಪೈಕಿ ಮನೋರಂಜನ್ ಮತ್ತು ಸಾಗರ್ ಶರ್ಮಾರನ್ನು ಶೀಘ್ರ ಮೈಸೂರಿಗೆ ಕರೆತರುವ ಸಾಧ್ಯತೆ ಇದೆ.





ಡಿ.ಮನೋರಂಜನ್ ಸಾಗರ್ ಶರ್ಮಾ

ಮನೋರಂಜನ್ ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿಯಾಗಿದ್ದು, ಸಾಗರ್ ಶರ್ಮಾ ಕಳೆದ ಒಂದೂವರೆ ವರ್ಷದ ಹಿಂದೆ ಮೈಸೂರಿಗೆ ಬಂದು ಇಬ್ಬರೂ ಹೋಟೆಲ್‌ವೊಂದರಲ್ಲಿ ಭೇಟಿಯಾಗಿ ಚರ್ಚೆ ನಡೆಸಿದ್ದರು ಎಂಬ ಮಾಹಿತಿ ಹಿನ್ನೆಲೆಯಲ್ಲಿ ಅವಷ್ಟು ಎಸ್‌ಐಟಿ ಅಧಿಕಾರಿಗಳು ಮೂರ್ನಾಲ್ಕು ದಿನಗಳಲ್ಲಿ ಕರೆತರಬಹುದು ಎಂದು ಸ್ಥಳೀಯ ಪೊಲೀಸ್ ಮೂಲಗಳು ತಿಳಿಸಿವೆ.

ಈಗಾಗಲೇ ಬಂಧಿತರಾಗಿರುವ ಎಲ್ಲಾ ಆರೋಪಿಗಳನ್ನು ದೆಹಲಿ ನ್ಯಾಯಾಲಯಕ್ಕೆ ಹಾಜರುಪಡಿಸಿ 7 ದಿನಗಳವರೆಗೆ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ ಅಧಿಕಾರಿಗಳು, ಮನೋರಂಜನ್ ಮತ್ತು ಸಾಗರ್ ಶರ್ಮಾನನ್ನು ಮಹಜರು ನಡೆಸಲು ಮೈಸೂರಿಗೆ ಕರೆತಂದು ವಿಜಯನಗರ 2ನೇ ಹಂತದ ಮನೆಯಲ್ಲಿ ಆರೋಪಿಗಳ ಸಮ್ಮುಖದಲ್ಲೇ ಪರಿಶೀಲನೆ ನಡೆಸುವರು ಎಂದು ಮೂಲಗಳು ತಿಳಿಸಿವೆ.

ಇಬ್ಬರೂ ಭೇಟಿ ನೀಡಿದ್ದ ಹೋಟೆಲ್‌ಗೂ ಕರೆದೊಯ್ದು, ಅವರು ಕೊಠಡಿ ಪಡೆಯಲು ನೀಡಿದ್ದ ವಿಳಾಸ, ಗುರುತಿನ ಚೀಟಿ, ಲಭ್ಯವಿದ್ದರೆ ಸಿಸಿ ಕ್ಯಾಮರಾ ಫುಟೇಜಸ್‌ಗಳನ್ನು ಕಲೆ ಹಾಕಲಿರುವ ತನಿಖಾಧಿಕಾರಿಗಳು, ಮನೋರಂಜನ್ ತಂದೆ–ತಾಯಿ, ತಂಗಿ ಹಾಗೂ ಸಂಬಂಧಿಕರಿಂದಲೂ ಅಗತ್ಯ ಮಾಹಿತಿ ಸಂಗ್ರಹಿಸಲಿದ್ದಾರೆ ಎನ್ನಲಾಗಿದೆ.

ಅದೇ ವೇಳೆ ಈಗಾಗಲೇ ಸ್ಥಳೀಯ ಸರಹದ್ದಿನ ಪೊಲೀಸರು, ರಾಜ್ಯ, ಕೇಂದ್ರ ಗುಪ್ತಚರ ವಿಭಾಗದ ಪೊಲೀಸರು ಕಲೆ ಹಾಕಿರುವ ಮಾಹಿತಿಗಳನ್ನು ಪಡೆದು, ಅವರೊಂದಿಗೆ ಚರ್ಚಿಸಲಿದ್ದಾರೆ. ಒಂದು ವೇಳೆ ಇಬ್ಬರೂ ಆರೋಪಿಗಳು ಮನೋರಂಜನ್ ಅವರ ತಂದೆಯ ಮೂಲ ಗ್ರಾಮ ಹಾಗೂ ಜಮೀನಿಗೆ ಹೋಗಿ ಬಂದಿದ್ದರೆ, ಅಲ್ಲಿಗೂ ಅವರನ್ನು ಕರೆದೊಯ್ದು ಸ್ಥಳ ಮಹಜರು ನಡೆಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ಪೊಲೀಸ್ ಉನ್ನತ ಮೂಲಗಳು ತಿಳಿಸಿವೆ.

ಆದರೆ, ಯಾವ ದಿನ ಮೈಸೂರಿಗೆ ಆರೋಪಿಗಳಿಬ್ಬರನ್ನು ಕರೆತರಲಾಗುವುದು, ಎಲ್ಲೆಲ್ಲಿಗೆ ಕರೆದೊಯ್ಯಲಾಗುತ್ತದೆ, ಮಾಡಿಕೊಳ್ಳಬೇಕಾದ ಪೊಲೀಸ್ ಭದ್ರತೆ, ಸಭೆ ನಡೆಸುವ ಕುರಿತಂತೆ ಎಸ್‌ಐಟಿಯಿಂದ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಇನ್ನೂ ಮಾಹಿತಿ ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರಿನ ಮನೋರಂಜನ್ ಇಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿದಿದ್ದರೂ ಮರೆಮಾಚಿ ಮನೆಯವರಿಗೆ ಬಿಇ ಮಾಡಿದ್ದೇನೆಂದು ಹೇಳಿ, ಕೆಲಸಕ್ಕೂ ಹೋಗದೇ ಸುಮಾರು 15 ವರ್ಷಗಳ ಕಾಲ ಏನು ಮಾಡುತ್ತಿದ್ದ, ಇತರ 5 ಮಂದಿಯ ಗುಂಪಿಗೆ ಸೇರಿದ್ದು ಹೇಗೆ, ಆತನ ಉದ್ದೇಶ ಏನಾಗಿತ್ತು ಎಂಬುದು ಕುತೂಹಲಕಾರಿಯಾಗಿದ್ದು, ವಿಚಾರಣೆಯಿಂದ ತನಿಖಾಧಿಕಾರಿಗಳಿಗೆ ಉತ್ತರ ಸಿಗಬೇಕಾಗಿದೆ.

ಸಮರ್ಪಣಾ ಮನೋಭಾವ, ಜ್ಞಾನದಿಂದ ಅಸಾಧ್ಯವಾದುದು ಸಾಧ್ಯವಾಗುವುದುಂಟು

ಡಿಆರ್‌ಡಿಓ ಏರೋನಾಟಿಕಲ್ ಸಿಸ್ಟಮ್‌ನ ಮಾಜಿ ಮಹಾ ನಿರ್ದೇಶಕಿ ಡಾ.ಟೆಸ್ಸಿ ಥಾಮಸ್ ವಿಶ್ವಾಸ

ಮೈಸೂರು, ಡಿ.15(ಎಂಕೆ)– ಸಮರ್ಪಣಾ ಮನೋಭಾವ, ಜ್ಞಾನಕ್ಕೆ ಅನುಗುಣವಾಗಿ ವೃತ್ತಿಯಲ್ಲಿ ತೊಡಗಿಕೊಂಡರೆ ಅಸಾಧ್ಯವೆಂಬುದು ಕೂಡ ಸಾಧ್ಯವಾಗುತ್ತದೆ ಎಂದು ಡಿಆರ್‌ಡಿಓ (ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ) ಏರೋನಾಟಿಕಲ್ ಸಿಸ್ಟಮ್‌ನ ಮಾಜಿ ಮಹಾನಿರ್ದೇಶಕಿ ಡಾ.ಟೆಸ್ಸಿ ಥಾಮಸ್ ಹೇಳಿದರು.



ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕೋಝಿಕೋಡ್ (IIM Kozhikode) ಆಯೋಜಿಸಿರುವ 'ಭಾರತೀಯ ಚಿಂತನೆಯನ್ನು ಜಾಗತೀಕರಣಗೊಳಿಸುವಿಕೆ' (Globalizing Indian thought GIT-2023) ಶೀರ್ಷಿಕೆಯ 4ನೇ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ತಮ್ಮ ವೃತ್ತಿ ಜೀವನ, ಸಾಧನೆ ಕುರಿತು ಮಾತನಾಡಿದ ಅವರು, ವಿಜ್ಞಾನಿಗಳು ಸದಾ ಹೊಸತನ್ನು ಕಲಿಯುತ್ತಲೇ ಇರಬೇಕು. ಅದೇ ರೀತಿ ನಾನೂ ಕೂಡ ಕಲಿಯುತ್ತಾ, ಸಿಕ್ಕ ಅವಕಾಶಗಳನ್ನು ಬಿಡದೆ ಹಿರಿಯ ವಿಜ್ಞಾನಿಗಳ ಮಾರ್ಗದರ್ಶನದೊಂದಿಗೆ ಕೆಲಸ ಮಾಡಿದ್ದರಿಂದಾಗಿ ಗುಣಮಟ್ಟದ ರಾಕೆಟ್‌ಗಳನ್ನು ರೂಪಿಸಲು ಸಾಧ್ಯವಾಯಿತು ಎಂದರು.


ಲೀಡರ್ ಆದವರು ಅವರಿಗೆ ನೀಡಿರುವ ಜವಾಬ್ದಾರಿ ಅಥವಾ ಅವರ ಮುಂದಿರುವ ಸವಾಲಿನ ಬಗ್ಗೆ ತಮ್ಮ ಗಮನವನ್ನು ಕೇಂದ್ರೀಕರಿಸಿರಬೇಕು. ಮೊದ ಮೊದಲು ಸಂಶೋಧನೆ ನಡೆಸುವಾಗ ಲ್ಯಾಬ್‌ನಲ್ಲಿ ಬಸ್ಟ್ ಆದದ್ದು ಇದೆ. ಆದರೂ ಗುರಿಯತ್ತ ಗಮನ ಹರಿಸಿ ಕೆಲಸ ಮಾಡಿದ್ದರಿಂದ ಒಂದು ವರ್ಷಕ್ಕೆ 23 ರಾಕೆಟ್‌ಗಳನ್ನು ತಯಾರಿಸಲು ಸಾಧ್ಯವಾಯಿತು ಎಂದು ತಿಳಿಸಿದರು.

ಇದೇ ವೇಳೆ ತಮ್ಮ ವೃತ್ತಿ ಬದುಕಿನ ಆರಂಭದ ದಿನಗಳಲ್ಲಿ ಭಾರತ ರತ್ನ ಎಪಿಜೆ ಅಬ್ದುಲ್ ಕಲಾಂ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ್ದು ಹಾಗೂ ಅಗ್ನಿ ಕ್ಷಿಪಣಿಗಳ(ಅಗ್ನಿ 1 ರಿಂದ 4ರವರೆಗೆ) ತಯಾರಿಕೆಯಲ್ಲಿನ ತಮ್ಮ ಅನುಭವ ಹಂಚಿಕೊಂಡರು. ಬಳಿಕ ಬಂಧನ್ ಬ್ಯಾಂಕ್‌ನ ಸಂಸ್ಥಾಪಕ ಚಂದ್ರಶೇಖರ್ ಘೋಷ್ ಉಪನ್ಯಾಸ ನೀಡಿದರು. ನಂತರ ಇಬ್ಬರು ಸಾಧಕರಿಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕೋಝಿಕೋಡ್ ನಿರ್ದೇಶಕ ದೇಬಾಶಿಸ್ ಚಟರ್ಜಿ ಸಮಾವೇಶದ ಸ್ಮರಣಿಕೆ ನೀಡಿ ಅಭಿನಂದಿಸಿದರು.



ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಭಾರತ ಹಸ್ತ ಶಿಲ್ಪ ಪ್ರದರ್ಶನಕ್ಕೆ ಚಾಲನೆ

ಮೈಸೂರು, ಡಿ.15(ಎಸ್‌ಪಿಎನ್)– ಮೈಸೂರು ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಶುಕ್ರವಾರದಿಂದ ಡಿ.24ರವರೆಗೆ ಅಖಿಲ ಭಾರತ ಹಸ್ತಶಿಲ್ಪ ಪ್ರದರ್ಶನ ಮತ್ತು ಮಾರಾಟಕ್ಕೆ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಜಿ. ವಿಶ್ವನಾಥ್ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟ್‌ಸೂರಮಠ ಶುಕ್ರವಾರ ಚಾಲನೆ ನೀಡಿದರು.



ನಂತರ ಡಾ.ಸಿ.ಜಿ.ಬೆಟ್‌ಸೂರಮಠ ಮಾತನಾಡಿ, ದೇಶದ ವಿವಿಧೆಡೆಯಿಂದ ಬಂದಿರುವ ಹಲವಾರು ಕುಶಲಕರ್ಮಿಗಳಿಗೆ ಮೈಸೂರಿನ ನಾಗರಿಕರಿಗೆ ನೇರ ಮಾರುಕಟ್ಟೆಯ ವೇದಿಕೆಯನ್ನು ಒದಗಿಸುವುದು ಈ ಪ್ರದರ್ಶನದ ಉದ್ದೇಶವಾಗಿದೆ ಎಂದರು.

ಇಲ್ಲಿ ಭಾಗವಹಿಸುವ ಎಲ್ಲಾ ಕರಕುಶಲ ಕರ್ಮಿಗಳು ಗ್ರಾಹಕರ ಅಗತ್ಯ ಮತ್ತು ಅಭಿರುಚಿಗಳಿಗೆ ತಕ್ಕಂತೆ ಮಾರುಕಟ್ಟೆಗೆ ಬೇಕಾದ ನವೀನ ವಿನ್ಯಾಸದ ವಸ್ತುಗಳನ್ನು ತಯಾರಿಸಿದ್ದಾರೆ. ಅಲ್ಲದೆ, ದೇಶದ ಎಲ್ಲ ರಾಜ್ಯಗಳಿಂದ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಕುಶಲಕರ್ಮಿಗಳು ಸೇರಿದಂತೆ ಸುಮಾರು 100 ಕುಶಲಕರ್ಮಿಗಳು, ಕೈಮಗ್ಗ ನೇಕಾರರು ತಯಾರಿಸಿದ ತಮ್ಮ ಉತ್ಕೃಷ್ಟ ಕಲಾವಸ್ತುಗಳನ್ನು ಈ ಪ್ರದರ್ಶನದಲ್ಲಿ ಅನಾವರಣಗೊಳಿಸಿದ್ದು, ಇದರ ಸದುಪಯೋಗವನ್ನು ಗ್ರಾಹಕರು ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಈ ಪ್ರದರ್ಶನದಲ್ಲಿ ಮರದ ಕೆತ್ತನೆಯ ವಸ್ತುಗಳು, ವಿವಿಧ ಕಬ್ಬಿಣದ ಶಿಲ್ಪಗಳು, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ತಂಜಾವೂರು ಮತ್ತು ಮೈಸೂರು ಶೈಲಿಯ ಚಿತ್ರಕಲೆ, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಪಶ್ಚಿಮ ಬಂಗಾಲ ಕಡಲತೀರ ಅಲಂಕಾರಿಕ ವಸ್ತುಗಳು, ಛತೀಸ್‌ಗಢದ ದೊಕ್ರಾ ಕಾಸ್ಟಿಂಗ್, ಮಧ್ಯಪ್ರದೇಶದ ಮಹೇಶ್ವರಿ, ಚಂದೇರಿ ಸೀರೆಗಳು, ಗುಜರಾತ್ ರಾಜ್ಯದ ಪಟೋಲ ಸೀರೆಗಳು, ಒಡಿಶಾದ ಪಟ್ಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಶೀತಲ ಪಟ್ಟಿ, ಬಿದಿರು ಬೆತ್ತದ ವಸ್ತುಗಳು, ಚಿಕನ್ ಎಂಬ್ರಾಯ್ಡರಿ, ಮೇಘಾಲಯ ಬಿದಿರಿನ ಕಲಾತ್ಮಕ ವಸ್ತುಗಳು, ಡ್ರೈ ಫ್ಲವರ್‌ಗಳು, ಗುಜರಾತಿನ ಕರಕುಶಲ ವಸ್ತುಗಳು, ಮುದ್ರಿತ ಜವಳಿ, ಬಿಹಾರದ ಮಧುಬನಿ ಚಿತ್ರಕಲೆ, ಪಂಜಾಬ್ ರಾಜ್ಯದ ಫುಲ್ಕಾರಿ ಬಟ್ಟೆಗಳು, ಅರಗಿನ ಬಳೆಗಳು ಸೇರಿದಂತೆ ಒಂದೇ ಸೂರಿನಡಿ ಮಹಿಳೆಯರು ಮತ್ತು ಪುರುಷರಿಗೆ ಬೇಕಾದ ವಸ್ತುಗಳ ಕಡಿಮೆ ಬೆಲೆ ದೊರಕುತ್ತಿವೆ ಎಂದು ಮಾಹಿತಿ ನೀಡಿದರು.

ವಿಶೇಷ ಕಲೆಗೆ ಆದ್ಯತೆ: ಮಹಾರಾಷ್ಟ್ರ ಗೋವಾ, ಕರ್ನಾಟಕದ ಕರಾವಳಿ ತೀರದ ಪ್ರದೇಶಗಳಲ್ಲಿ ಕಂಡುಬರುವ ಹಾಗು ಕೆಮ್ಮಣ್ಣು ಮತ್ತು ಸುಣ್ಣದ ಮಿಶ್ರಣದಲ್ಲಿ ರಚಿಸಲಾಗುವ ಕಾವಿಕಲೆ ಈ ಮೇಳದಲ್ಲಿ ಪ್ರದರ್ಶನಗೊಂಡಿದೆ. ಹಾವಂಜೆ ಕಲಾವಿದರ ತಂಡದ ಈ ಕಲೆಯನ್ನು ರಚಿಸಿ ಪ್ರದರ್ಶಿಸಿರುವುದು ವಿಶೇಷ. ಛತೀಸ್‌ಗಡದ ಬಸ್ತಾರ್ ಐರನ್ ಕ್ರಾಫ್ಟ್, ದೋಕ್ರ ಕಾಸ್ಟಿಂಗ್, ಕೇರಳದ ಬ್ಯಾಂಬೋ ಪೇಂಟಿಂಗ್ ಸೇರಿದಂತೆ ಹಲವು ಕರಕುಶಲ ಪದಾರ್ಥಗಳು ಪ್ರದರ್ಶನಗೊಂಡಿವೆ ಎಂದರು.

100 ಮಂದಿಗೆ ಅವಕಾಶ: ಈ ಪ್ರದರ್ಶನದಲ್ಲಿ ನಡೆಯುತ್ತಿರುವ ಗಾಂಧಿಶಿಲ್ಪ ಬಜಾರ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು 100 ಮಂದಿಯನ್ನು ಕುಶಲಕರ್ಮಿಗಳಿಗೆ ಆನ್‌ಲೈನ್ ಮೂಲಕ 900 ಅರ್ಜಿಗಳು ಬಂದಿದ್ದವು. ಅರ್ಜಿ ಸಲ್ಲಿಸಿದ ಕುಶಲಕರ್ಮಿಗಳ ಪೈಕಿ ಇಲಾಖೆಯ ಪೋರ್ಟಲ್ ಮೂಲಕ ಆಯ್ಕೆ ಮಾಡಲಾಗಿದೆ ಎಂದರು.

ವ್ಯವಸ್ಥಾಪಕ ನಿರ್ದೇಶಕ ಡಾ.ಜಿ.ವಿಶ್ವನಾಥ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಅಸಂಘಟಿತ ವಲಯದ ಕುಶಲಕರ್ಮಿಗಳಿಗೆ ಈ ಬಾರಿ ಅವಕಾಶ ಕಲ್ಪಿಸಿದೆ. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವತಿಯಿಂದ 13 ಸಂಕೀರ್ಣಗಳನ್ನು ಸ್ಥಾಪಿಸಿ, ಕುಶಲಕರ್ಮಿಗಳ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಈ ಸಂಕೀರ್ಣಗಳಲ್ಲಿ ಅಸಂಘಟಿತ ವಲಯದ ಕುಶಲಕರ್ಮಿಗಳು ವಿವಿಧ ಜಿಲ್ಲೆ, ವಿವಿಧ ರಾಜ್ಯಗಳಲ್ಲಿ ಆಯೋಜಿಸುವ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಭಾಗವಹಿಸಿ, ತಮ್ಮ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲು ನಮ್ಮ ನಿಗಮ ಸೇತುವೆಯಾಗಿ ಕೆಲಸ ಮಾಡುತ್ತಿವೆ. ನಮ್ಮ ಮಳಿಗೆಗಳಲ್ಲಿ ಸುಮಾರು 2 ಸಾವಿರಕ್ಕೂ ಅಧಿಕ ಕರಕುಶಲ ವಸ್ತುಗಳು ಲಭ್ಯವಿದೆ ಎಂದರು.

ಉಚಿತ ಪ್ರವೇಶ: ಈ ಪ್ರದರ್ಶನ ಹಾಗೂ ಮಾರಾಟ ಮೇಳ ಇಂದಿನಿಂದ ಡಿ.24ರವರೆಗೆ ಬೆಳಗ್ಗೆ 10.30ರಿಂದ ರಾತ್ರಿ 9 ಗಂಟೆಯವರಿಗೆ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದೆ.

ಈ ವೇಳೆ ಕೇಂದ್ರ ಸರ್ಕಾರದ ಕರಕುಶಲ ಸೇವಾ ಕೇಂದ್ರ ಜವಳಿ ಮಂತ್ರಾಲಯದ ಸಹಾಯಕ ನಿರ್ದೇಶಕ ಕೆ.ಎಸ್.ಸುನಿಲ್ ಕುಮಾರ್, ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಸಾಮಾನ್ಯ ಆಡಳಿತ ವಿಭಾಗದ ರವೀಂದ್ರ, ಹಣಕಾಸು ವಿಭಾಗದ ಡಿಡಿ ಎಂ.ಶಿವನಂಜಸ್ವಾಮಿ, ಯೋಜನಾಧಿಕಾರಿ ರಾಕೇಶ್ ರೈ, ಸುಂದರಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಆತ : "ನಮ್ಮನೆಗೂ ಐಟಿಯವರು ಬಂದಿದ್ರು"
ಈತ : "ಹೌದಾ? ಆಮೇಲೆ ಏನಾಯ್ತು?"
ಆತ : "ಅದೇ ವೇಳೆ ಅಡುಗೆ ಮನೆಯಲ್ಲಿ 'ಒಂದು ಕೆಜಿ ಟೊಮ್ಯಾಟೋ ತರೋ ಯೋಗ್ಯತೆ ಇಲ್ಲ ನಿಮ್ಗೆ' ಅಂತ ನನ್ನ ಹೆಂಡತಿ ಸಿಟ್ಟಿನಲ್ಲಿ ಆಡೋದು ಕೇಳಿಸ್ಕೊಂಡು ವಾಪಸ್ ಹೋದರು!!

ಮೈಸೂರು ಮಿತ್ರ

ಶನಿವಾರ, 16 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸ್ನೇಹ ಮತ್ತು ಸದ್ಗುಣಗಳಿಂದ ಮನುಷ್ಯನನ್ನು ಗೆಲ್ಲಬಹುದೇ ಹೊರತು ಬಲಾಬಲದಿಂದಲ್ಲ. –ಡಾ.ರಾಧಾಕೃಷ್ಣನ್

ವೇದ ಸುಳ್ಳಾದರೂ { ಕಣ್ಣೆರಡಾದರೂ
ಗಾದೆ ಸುಳ್ಳಾಗದು { ನೋಟ ಒಂದೇ

ನಿಮ್ಮ ಪತ್ರಗಳು

ಸಂಸದ ಪ್ರತಾಪ್ ಸಿಂಹ ಮೇಲೆ ಕ್ರಮ ಏಕಿಲ್ಲ?

ಮಾನ್ಯರೆ,

ಏಳು ಸುತ್ತಿನ ಭದ್ರತೆ ಇರುವ ಸಂಸತ್ ಭವನದ ಒಳಗೆ ನುಗ್ಗಿ ಸಂಸತ್ತಿನ ಒಳಗಿದ್ದ ಎಲ್ಲರನ್ನೂ ಕೆಲ ಕಾಲ ನಿಲ್ಲುವಂತೆ ಮಾಡಿ ಬಣ್ಣದ ಹೊಗೆ ಸಿಡಿಸಿದ ಕೃತ್ಯ ಎಸಗಿದ ಮೈಸೂರಿನ ಯುವಕ ಸಾಂಸ್ಕೃತಿಕ ನಗರಿ ಮೈಸೂರಿಗೆ ಅಪಕೀರ್ತಿ ತಂದಿದ್ದಾನೆ ಇದರಲ್ಲಿ ಸಂಸದ ಪ್ರತಾಪ್ ಸಿಂಹ ಅವರ ಪಾಲು ಇದೆ.

ಈಗಾಗಲೇ ಪ್ರಕರಣ ಸಂಬಂಧ ಏಳು ಮಂದಿ ಭದ್ರತಾ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ ಮತ್ತು ಕಲಾಪದಲ್ಲಿ ಇದೆ ವಿಷಯಕ್ಕೆ ಗದ್ದಲ ಎಬ್ಬಿಸಿದ್ದಾರೆ ಎಂಬ ಕಾರಣಕ್ಕೆ ಒಂಬತ್ತು ಮಂದಿಯನ್ನು ಸದನದಿಂದ ಅಮಾನತ್ತು ಗೊಳಿಸಿದ್ದಾರೆ. ಆದರೆ ಸಂಸತ್ ಭವನ ಪ್ರವೇಶಿಸಲು ಪಾಸ್ ನೀಡಿರುವ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ್ ಸಿಂಹರ ಮೇಲೆ ಕೇಂದ್ರ ಸರ್ಕಾರ ಏಕೆ ಕ್ರಮ ಕೈಗೊಂಡಿಲ್ಲ, ಅವರನ್ನು ಇನ್ನು ಯಾಕೆ ವಿಚಾರಣೆಗೆ ಒಳಪಡಿಸಿಲ್ಲ, ಪಾಸ್ ನೀಡುವಾಗ ಆತನ ಪರಿಚಯ ಇಲ್ಲದೆ ಅನುಮತಿ ಹೇಗೆ ನೀಡಿದರು, ಇದು ಕೇವಲ ಬಿಜೆಪಿಯ ವಿಷಯವಲ್ಲ, ದೇಶದ ಭದ್ರತೆಯ ವಿಷಯ. ಇದೆ ಕೆಲಸ ಅನ್ಯ ಪಕ್ಷದ ಸಂಸದರು ಮಾಡಿದ್ದರೆ ಇಷ್ಟೊತ್ತಿಗೆ ಪ್ರಧಾನಿ ಮೋದಿ ಮತ್ತು ಅಮಿತ್ ಷಾ ಅವರು ಸಂಸದ ಸ್ಥಾನದಿಂದ ಉಚ್ಚಾಟನೆ ಮಾಡಿರುತ್ತಿದ್ದರು. ಪಾಪ ಸ್ವಪಕ್ಷೀಯ ಪ್ರೇಮ ಅಡ್ಡಿ ಉಂಟುಮಾಡುತ್ತಿರಬೇಕು. ದೇಶದ ರಾಜಕೀಯ ಇತಿಹಾಸದಲ್ಲೆ ಇಂತಹ ಸಂಸದರು ಯಾರು ಇಲ್ಲ. ಅಂದ ಮೇಲೆ ಈ ಘಟನೆ ಸಂಬಂಧ ಈವರೆಗೂ ಯಾಕೆ ಇವರ ಮೇಲೆ ಕ್ರಮ ಕೈಗೊಂಡಿಲ್ಲ ಎಂಬುದೆ ಮತ್ತಷ್ಟು ಅನುಮಾನಕ್ಕೆ ಎಡೆ ಮಾಡಿದೆ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

ಜಮ್ಮು ಕಾಶ್ಮೀರ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಆನೆ ಬಲ

ಮಾನ್ಯರೆ,

ಜಮ್ಮು– ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಆಗಸ್ಟ್ 5, 2019 ರಂದು ರದ್ದುಗೊಳಿಸಿದ್ದ ಕೇಂದ್ರ ಸರ್ಕಾರದ ಆದೇಶವನ್ನು ದೇಶದ ಸರ್ವೋಚ್ಛ ನ್ಯಾಯಾಲಯ ಎತ್ತಿಹಿಡಿದಿರುವುದು ಸ್ವಾಗತಾರ್ಹವಾಗಿದೆ.

2014ರ ಲೋಕಸಭಾ ಚುನಾವಣೆಯ ಸಂಧರ್ಭದಲ್ಲಿ, ವಿಶೇಷ ಸ್ಥಾನಮಾನದ ರದ್ದತಿಯ ವಿಚಾರ ದೊಡ್ಡ ಮಟ್ಟದಲ್ಲಿ ಚಲಾವಣೆಗೆ ಬಂದಿತು. ತಾನು ಅಧಿಕಾರಕ್ಕೆ ಬಂದರೆ, 370 ನೇ ವಿಧಿಯನ್ನು ರದ್ದು ಪಡಿಸುವ ಭರವಸೆ ನೀಡಿದ್ದ ಭಾರತೀಯ ಜನತಾ ಪಕ್ಷ ಹಾಗೂ ಅದರ ಮಿತ್ರ ಪಕ್ಷಗಳು, ಆಗಸ್ಟ್ 5, 2019 ರಂದು ಜಮ್ಮು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿ, ಎರಡು ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಿತು.

ಸರ್ವೋಚ್ಛ ನ್ಯಾಯಲಯದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿ ಗವಾಯ್, ನ್ಯಾಯಮೂರ್ತಿ ಎಸ್ ಕೆ ಕೌಲ್, ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿ ಸೂರ್ಯಕಾಂತ್ ಇವರುಗಳನ್ನು ಒಳಗೊಂಡ ಸಾಂವಿಧಾನಿಕ ಪೀಠ ನೀಡಿದ ಈ ತೀರ್ಪು ಐತಿಹಾಸಿಕವಾಗಿದ್ದು. ಜನರ ಬಹು ನಿರೀಕ್ಷೆಯ ಕನಸನ್ನು ನನಸಾಗಿಸಿದೆ. ಹಿಂದಿನ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370 ನೇ ವಿಧಿಯ ನಿಬಂಧನೆಗಳನ್ನು ಕೇಂದ್ರ ಸರ್ಕಾರವು ರದ್ದು ಗೊಳಿಸಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ 23 ಅರ್ಜಿಗಳ ವಿಚಾರಣೆ ನಡೆಸಿದ ಸರ್ವೋಚ್ಛ ನ್ಯಾಯಲಯ ಈ ಐತಿಹಾಸಿಕ ತೀರ್ಪು ನೀಡಿದೆ. ಲಡಾಖ್ ಕೇಂದ್ರಾಡಳಿತ ಪ್ರದೇಶವನ್ನು ಜಮ್ಮು ಕಾಶ್ಮೀರದಿಂದ ಬೇರ್ಪಡಿಸುವ ನಿರ್ಧಾರವನ್ನು ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟ್, ಜಮ್ಮು ಕಾಶ್ಮೀರ ದೇಶದ ಇತರ ರಾಜ್ಯಗಳಿಗಿಂತ ಭಿನ್ನವಾದ ಅಂತರಿಕ ಸಾರ್ವಭೌಮತ್ವ ಹೊಂದಿಲ್ಲ ಎಂದು ಹೇಳಿದ್ದು, ಜಮ್ಮು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಹೇಳಿದೆ. ಅದೇ ರೀತಿ ಭಾರತೀಯ ಸಂವಿಧಾನದ ಎಲ್ಲಾ ನಿಬಂಧನೆಗಳನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ಸಹ ಅನ್ವಯಿಸಬಹುದು ಎಂದು ಹೇಳಿದೆ.

ಹಲವಾರು ದಶಕಗಳಿಂದ ಭಯೋತ್ಪಾದನೆಯ ಕರಿ ನೆರಳಲ್ಲೇ ಬೇಯುತ್ತಿದ್ದ ಜಮ್ಮು ಕಾಶ್ಮೀರದಲ್ಲಿ ಸಹಜ ಪರಿಸ್ಥಿತಿ ಮೂಡಿಸಲು ಕೇಂದ್ರ ಸರ್ಕಾರ ಹೆಣಗಾಡುತ್ತಲೇ ಇತ್ತು. ವಿಚ್ಛಿದ್ರಕಾರಕ ಶಕ್ತಿಗಳಿಗೆ ಹಾಗೂ ಭಯೋತ್ಪಾದಕರಿಗೆ ಪಾಕಿಸ್ತಾನ ಬೆಂಬಲ ನೀಡುತ್ತಿದ್ದರಿಂದ, ಜಮ್ಮು ಕಾಶ್ಮೀರವನ್ನು ದೇಶದ ಮುಖ್ಯ ವಾಹಿನಿಗೆ ತರುವಲ್ಲಿ ಸಾಕಷ್ಟು ಸವಾಲುಗಳು ಎದುರಾಗಿದ್ದವು. ಇದೀಗ ದೇಶದ ಸರ್ವೋಚ್ಛ ನ್ಯಾಯಾಲಯ, ಕೇಂದ್ರ ಸರ್ಕಾರದ ಆದೇಶವನ್ನು ಎತ್ತಿ ಹಿಡಿದಿರುವುದರಿಂದ, ಕೇಂದ್ರ ಸರ್ಕಾರಕ್ಕೆ ಜಮ್ಮು ಕಾಶ್ಮೀರ ವಿಷಯದಲ್ಲಿ ಆನೆಯ ಬಲ ಬಂದ ಹಾಗಿದೆ. ಸರ್ವೋಚ್ಛ ನ್ಯಾಯಾಲಯ ನೀಡಿರುವ ನಿರ್ದೇಶನದಂತೆ, ಸಾಮರಸ್ಯ ಆಯೋಗವನ್ನು ರಚಿಸುವುದರ ಜೊತೆಗೆ, ಮುಂಬರುವ ಸೆಪ್ಟೆಂಬರ್ 30 ರೊಳಗೆ ಅಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿ, ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವುದು ಕೇಂದ್ರ ಸರ್ಕಾರದ ಆದ್ಯತೆಯಾಗಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು

ಪೊಲೀಸ್ ಆಯುಕ್ತರಲ್ಲಿ ಮನವಿ

ಮಾನ್ಯರೆ,

ಮೈಸೂರಿನ ಸುಣ್ಣದ ಕೇರಿ ಕೆ.ಆರ್. ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ದಂಧೆ ಎಗ್ಗಿಲ್ಲದೇ ನಡೆಯುತ್ತಿದೆ. ಇದಕ್ಕೆ ದಾಸರಾಗಿ ಅನೇಕ ವಿದ್ಯಾವಂತ ಯುವಕರು ತಮ್ಮ ಅಮೂಲ್ಯ ಜೀವನ, ಹಣವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಹಣವನ್ನು ಕಳೆದುಕೊಂಡ ಯುವಕರು ಸರಗಳ್ಳತನ, ಮೊಬೈಲ್ ಕಳ್ಳತನ, ದ್ವಿಚಕ್ರ ವಾಹನ ಕಳ್ಳತನಗಳಲ್ಲಿ ಭಾಗಿಯಾಗಿ ಸಮಾಜಕ್ಕೆ ಕಂಟಕರಾಗುತ್ತಿದ್ದಾರೆ. ಈ ಬಗ್ಗೆ ಅನೇಕ ಬಾರಿ ದೂರು ನೀಡಿದರೂ ಏನೂ ಪ್ರಯೋಜನವಾಗಿಲ್ಲ.

ಅನೇಕರು ಹಣ ಕಳೆದುಕೊಂಡು ಆತ್ಮಹತ್ಯೆಗೂ ಪ್ರಯತ್ನಿಸಿದ್ದುಂಟು. ದಕ್ಷ, ಪ್ರಾಮಾಣಿಕ ಮೈಸೂರು ನಗರ ಪೊಲೀಸ್ ಆಯುಕ್ತರು ಕ್ರಿಕೆಟ್ ಬುಕ್ಕಿಗಳ ಹೆಡೆಮುರಿ ಕಟ್ಟಿ ಈ ಭಾಗದಲ್ಲಿ ಸಾರ್ವಜನಿಕರು ಶಾಂತಿ ನೆಮ್ಮದಿಯಿಂದ ಬದುಕಲು ಅನುವು ಮಾಡಿಕೊಡಬೇಕೆಂದು ಮನವಿ.

–ನೊಂದ ನಾಗರಿಕರು, ಮೈಸೂರು.

ಸೂಕ್ತ ತನಿಖೆಯಾಗಿ ಸತ್ಯಾಂಶ ಹೊರಬರಲಿ

ಮಾನ್ಯರೆ,

ಭಾರತದ ನೂತನ ಸಂಸತ್ತು ಭವನದೊಳಗೆ ಭದ್ರತಾ ಸಿಬ್ಬಂದಿಗಳ ವೈಫಲ್ಯದಿಂದ ನುಗ್ಗಿ ಆತಂಕವನ್ನು ಸೃಷ್ಟಿ ಮಾಡಿದ ಆರೋಪಿಗಳನ್ನು ಸೂಕ್ಷ್ಮವಾಗಿ ತನಿಖೆ ಮಾಡುವುದರ ಜೊತೆಗೆ ಇವರ ಉದ್ದೇಶ ಹಾಗೂ ಹಿಂದೆ ಇರುವ ಸತ್ಯಾಂಶವನ್ನು ಬಹಿರಂಗಪಡಿಸಿ ಭಯೋತ್ಪಾದಕ ಚಟುವಟಿಕೆಗಳ ಹಿನ್ನೆಲೆ ಇದ್ದರೆ ನಿರ್ದಾಕ್ಷಿಣ್ಯವಾಗಿ ಕಾನೂನಿನ ಅಡಿಯಲ್ಲಿ ಶಿಕ್ಷೆಯಾಗಲಿ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ ಜಿಲ್ಲೆ.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ರೌಡಿ ಪ್ರತಿಬಂಧಕ ದಳ ಮರು ಸ್ಥಾಪಿಸಬೇಕಿದೆ!





ಪೊಲೀಸರು ರೌಡಿಗಳ ಮನೆಗಳ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ವಶಪಡಿಸಿಕೊಂಡ ಮಾರಕಾಸ್ತ್ರಗಳನ್ನು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಪರಿಶೀಲಿಸುತ್ತಿರುವುದು. ಬಲಚಿತ್ರದಲ್ಲಿ ಯಾವುದೇ ಸಮಾಜಘಾತುಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಂತೆ ರೌಡಿಶೀಟರ್‌ಗಳಿಗೆ ಆಯುಕ್ತರು ಕಟ್ಟುನಿಟ್ಟಿನ ಎಚ್ಚರಿಕೆ ನೀಡುತ್ತಿರುವುದನ್ನು ಕಾಣಬಹುದು.

ಇತ್ತೀಚೆಗೆ, ಕಚೇರಿ ಆವರಣದಲ್ಲಿ ಧೂಮಪಾನ ಮಾಡ ಬೇಡಪ್ಪಾ ಎಂದಿದ್ದಕ್ಕೆ ಯುವಕನೊಬ್ಬ ನಮ್ಮ ಮೈಸೂರು ನಗರ ಪಾಲಿಕೆಯ ರೆವಿನ್ಯೂ ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ಮಾಡಿದ್ದಾನೆ.

ಇದಕ್ಕೂ ಕೆಲ ವಾರದ ಹಿಂದೆ ಏಕಮುಖ ಸಂಚಾರವಿರುವ ರಸ್ತೆಯಲ್ಲಿ ಬೈಕ್‌ನಲ್ಲಿ ನುಗ್ಗಿದ ಮೂವರು ಯುವಕರನ್ನು ಎಚ್ಚರಿಸಿದ ಕಾರಣಕ್ಕೆ ಒಬ್ಬ ಮಧ್ಯ ವಯಸ್ಕರ ಮೇಲೆ ಆ ಪುಂಡರು ಹಲ್ಲೆ ನಡೆಸಿದ ಬಗ್ಗೆ ವರದಿಯಾಗಿತ್ತು.

ಕೆಲವು ವಾರಗಳ ಹಿಂದೆ ಕ್ರಾಫರ್ಡ್ ಹಾಲ್ ಬಳಿ ನಾನೇ ಒಂದು ಅಪಘಾತಕ್ಕೆ ಸಾಕ್ಷಿ. ಅಲ್ಲಿ ಓರ್ವ ಹಿರಿಯ ನಾಗರಿಕರು ನಿಧಾನವಾಗಿ ವೃತ್ತದಲ್ಲಿ ತಮ್ಮ ಕಾರನ್ನು ತಿರುಗಿಸಿಕೊಳ್ಳುತ್ತಿರುವಾಗ ಯಾವ ಕಡೆಯಿಂದಲೋ ನುಗ್ಗಿದ ಇಬ್ಬರು ಯುವಕರು ಸೀದಾ ಬಂದು ಕಾರಿಗೆ ಗುದ್ದಿದರು.

ಈ ಅಪಘಾತದ ನಂತರ ಎದ್ದು, ಕುಂಟುತ್ತಾ ಬಂದ ಆ ಹುಡುಗರು "ಹೆ ಕುರುಡ ಮುದುಕ, ನಾನು ವೇಗವಾಗಿ ಬರುತ್ತಿರೋದು ಕಾಣಲಿಲ್ವಾ? ಬ್ರೇಕ್ ಹಾಕಬೇಕು ಅಂತ ನಿನಗೆ ಗೊತ್ತಾಗಲಿಲ್ವಾ?" ಎಂದು ರೇಗಾಡಿದರು. ಆ ಯುವಕ ಎಷ್ಟರ ಮಟ್ಟಿಗೆ ಅವರ ಮೇಲೆ ಅಧಿಕಾರ ಚಲಾಯಿಸುತ್ತಿದ್ದ ಅಂದರೆ ಅವನು ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದರಿಂದ ಬೇರೆಲ್ಲಾ ವಾಹನಗಳು ಬ್ರೇಕ್ ಹಾಕಬೇಕಂತೆ. ಇವನದು ಎಂಥಾ ಸೊಕ್ಕು!

> "ಮೈಸೂರು ಪೊಲೀಸರು ಗಂಭೀರ ಅಪರಾಧಗಳನ್ನು ತನಿಖೆ ಮಾಡುವುದರಲ್ಲಿ ಅದ್ಭುತವಾಗಿ ಕೆಲಸ ಮಾಡಿದ್ದಾರೆ. ಆದರೆ ಸಣ್ಣಪುಟ್ಟ ಹಲ್ಲೆ ಪ್ರಕರಣಗಳನ್ನು ಹತ್ತಿಕ್ಕುವುದರಲ್ಲಿ ಎಲ್ಲೋ ಸೋತಿದ್ದಾರೆ ಅನ್ನಿಸುತ್ತದೆ. ಇಂತಹ ಪ್ರಕರಣಗಳನ್ನು ನಿಭಾಯಿಸುವುದು ಕಷ್ಟ. ಏಕೆಂದರೆ ಪೊಲೀಸರು ಇಂತಹವುಗಳನ್ನು 'ಬರೀ ವಾಗ್ವಾದ' ಅಥವಾ 'ಸಣ್ಣ ಗದ್ದಲ' ಎಂದು ಪರಿಗಣಿಸುತ್ತಾರೆ. ಹಾಗಾಗಿ ದೂರು ದಾಖಲಿಸಲು ಹೋಗುವುದಿಲ್ಲ. ಹಾಗೆಯೇ ಗದರಿಸಿಯೋ, ಎಚ್ಚರಿಸಿಯೋ ಕಳುಹಿಸಿಬಿಡುತ್ತಾರೆ.

ಓರ್ವ ಸಹ ಪ್ರಯಾಣಿಕರು ಆ ರೀತಿ ವೇಗವಾಗಿ ವಾಹನ ಚಾಲನೆ ಮಾಡುವುದು ತಪ್ಪು ಕಣ್ರಪ್ಪಾ ಎಂದು ಹೇಳಿದ್ದಕ್ಕೆ, ಆ ಪುಂಡ ಹುಡುಗರು ಅವರನ್ನೂ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಅವರ ಅಟ್ಟಹಾಸದಿಂದ ಹೆದರಿದಂತಹ ಅಲ್ಲಿ ನೆರೆದಿದ್ದವರು ಸುಮ್ಮನೆ ಜಾಗ ಖಾಲಿ ಮಾಡಿದರು.

ಇಂತಹ ಘಟನೆಗಳಲ್ಲಿ ಪುಂಡ ಪೋಕರಿಗಳು ಜನರನ್ನು ಹೆದರಿಸಿ–ಬೆದರಿಸುವುದು, ಮನಬಂದಂತೆ ಹಲ್ಲೆ ನಡೆಸುವುದು, ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ನಗರ ಬೆಳೆದಂತೆ ಇನ್ನೂ ಹೆಚ್ಚಾಗುವ ಸಾಧ್ಯತೆಯೂ ಇದೆ.

ಮೈಸೂರು ಪೊಲೀಸರು ಗಂಭೀರ ಅಪರಾಧಗಳನ್ನು ತನಿಖೆ ಮಾಡುವುದರಲ್ಲಿ ಅದ್ಭುತವಾಗಿ ಕೆಲಸ ಮಾಡಿದ್ದಾರೆ. ಆದರೆ ಸಣ್ಣಪುಟ್ಟ ಹಲ್ಲೆ ಪ್ರಕರಣಗಳನ್ನು ಹತ್ತಿಕ್ಕುವುದರಲ್ಲಿ ಎಲ್ಲೋ ಸೋತಿದ್ದಾರೆ ಅನ್ನಿಸುತ್ತದೆ. ಇಂತಹ ಪ್ರಕರಣಗಳನ್ನು ನಿಭಾಯಿಸುವುದು ಕಷ್ಟ. ಏಕೆಂದರೆ ಪೊಲೀಸರು ಇಂತಹವುಗಳನ್ನು 'ಬರೀ ವಾಗ್ವಾದ' ಅಥವಾ 'ಸಣ್ಣ ಗದ್ದಲ' ಎಂದು ಪರಿಗಣಿಸುತ್ತಾರೆ. ಹಾಗಾಗಿ ದೂರು ದಾಖಲಿಸಲು ಹೋಗು ವುದಿಲ್ಲ. ಹಾಗೆಯೇ ಗದರಿಸಿಯೋ, ಎಚ್ಚರಿಸಿಯೋ ಕಳುಹಿಸಿಬಿಡುತ್ತಾರೆ.

ಕೆಲವು ಸಲ, ದಿನವೆಲ್ಲಾ, ಕೆಲವೊಮ್ಮೆ ಹಲವು ದಿನ ಪೊಲೀಸ್ ಠಾಣೆಯಲ್ಲಿ ಕಳೆಯಬೇಕಾಗಬಹುದು ಎಂಬ ಕಾರಣದಿಂದಲೂ ಸಂತ್ರಸ್ತರು ದೂರು ಕೊಡಲು ಹೋಗುವುದಿಲ್ಲ.

ಯುವಕರ ಇಂತಹ ದುರ್ವರ್ತನೆಗೆ ಇನ್ನೂ ಎರಡು ಕಾರಣಗಳಿವೆ. **ಮೊದಲನೆಯದಾಗಿ;** 'ವೇದಿಕೆಗಳು' ಮತ್ತು 'ಅಭಿಮಾನಿ ಸಂಘ'ಗಳಿಗೆ ಸದಸ್ಯರಾಗಿರುವವರಿಗೆ ಇರುವಂತಹ ರಾಜಕೀಯ ಬೆಂಬಲ. ಅಂತಹ ಸಂಘಗಳ ಸದಸ್ಯರಾಗಿರುವ ಯುವಕರ ಮೇಲೆ ಕ್ರಮ ಕೈಗೊಳ್ಳದಂತೆ ಪೊಲೀಸರ ಮೇಲೆ ಸಹಜವಾಗಿಯೇ ರಾಜಕೀಯ ಒತ್ತಡ ಇದ್ದೇ ಇರುತ್ತದೆ.

ಎರಡನೆಯದಾಗಿ; ಕಾನೂನು ಪಾಲಕರಿಗೆ, ಕಾನೂನು ಧಿಕ್ಕರಿಸುವವರಿಂದ ಸನ್ಮಾನ, ಸತ್ಕಾರ. ಪ್ರತೀಭಾರಿ ನಗರಕ್ಕೆ ಹೊಸ ಪೊಲೀಸ್ ಅಧಿಕಾರಿ ಬಂದು, ಅಧಿಕಾರ ವಹಿಸಿಕೊಂಡಾಗ ಅವರನ್ನು ಮೊದಲು ಸ್ವಾಗತಿಸಿ, ಸನ್ಮಾನಿಸಿ, ಸತ್ಕರಿಸುವವರು ನಾಗರಿಕ ಕಾನೂನು ಉಲ್ಲಂಘಿಸುವವರೇ ಆಗಿದ್ದಾರೆ.

ಒಂದು ಕೆಟ್ಟ ಸಂಗತಿ ಎಂದರೆ, ಈಗೀಗ ಪೊಲೀಸ್ ಅಧಿಕಾರಿಗಳು ಪ್ರಶ್ನಾರ್ಹ ಹಿನ್ನೆಲೆಯುಳ್ಳಂತಹ ವ್ಯಕ್ತಿಗಳೊಂದಿಗೆ ಬಾರ್, ರೆಸ್ಟೋರೆಂಟ್‌ಗಳಲ್ಲಿ ಕುಳಿತು ತಿಂದು–ಕುಡಿಯುವುದು, ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಬಿಂಬಿಸಿಕೊಳ್ಳುವುದು ಪೊಲೀಸ್ ಇಲಾಖೆಗೆ ಒಪ್ಪುವಂತಹದ್ದಲ್ಲ. ಸಾಮಾನ್ಯ ಜನ ಯಾರ ಮೇಲೆ ದೂರು ನೀಡಲು ಬಯಸುತ್ತಾರೋ ಅವರ ಜೊತೆ ಪೊಲೀಸರು ಕುಡಿದು, ಮೋಜು–ಮಸ್ತಿ ಮಾಡುತ್ತಿದ್ದರೆ ಅವರ ಬಗ್ಗೆ ಸಾರ್ವಜನಿಕರಲ್ಲಿ ನಂಬಿಕೆ ಹುಟ್ಟುವುದಾದರು ಹೇಗೆ?

ಸಣ್ಣಪುಟ್ಟ ಹಲ್ಲೆ, ಗಲಾಟೆ–ಗದ್ದಲಗಳಂತಹ ಪ್ರಕರಣಗಳು ಹೆಚ್ಚಿದಂತೆ ನಾಗರಿಕರು ಏನು ಮಾಡಬೇಕು? ನಾವು ಪೊಲೀಸರಂತೆ ಬಾಡಿ ಕ್ಯಾಮ್‌ಗಳನ್ನು ಧರಿಸುವುದಕ್ಕೆ ಶುರು ಮಾಡಬೇಕೆ? ಆ ರೀತಿ ನಮಗೆ ನ್ಯಾಯ ದೊರೆಯದಿದ್ದರೆ ಸಾಮಾಜಿಕ ಜಾಲತಾಣಗಳಲ್ಲಿ ನಾವು ಆ ವೀಡಿಯೋಗಳನ್ನು ಹಾಕಿ ರೌಡಿಗಳ ಅಟ್ಟಹಾಸದ ಬಗ್ಗೆ ಎಚ್ಚರಿಸಬಹುದು.

ಸಾಮಾನ್ಯ ನಾಗರಿಕರಾದ ನಾವು ಪೆಪ್ಪರ್ ಸ್ಪ್ರೇ ಇಲ್ಲವೇ ಖಾರದ ಪುಡಿಯನ್ನು ಇಟ್ಟುಕೊಂಡು ಅಟ್ಟಹಾಸ ಮೆರೆಯುವಂತಹ ಪಾನಮತ್ತ ಪುಡಿ ರೌಡಿಗಳಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕೆ?

ರೌಡಿ ಪ್ರತಿಬಂಧಕ ದಳವನ್ನು ಪುನಃ ತರುವ ಸಮಯ ಈಗ ಬಂದಿದೆ. ಆದರೆ, ಅದು ಪೊಲೀಸರು ನಗರದಾದ್ಯಂತ ಗಸ್ತು ತಿರುಗುತ್ತಿರುವಂತಹ ನಿರಂತರ ಪ್ರಕ್ರಿಯೆ ಆಗಿರಬೇಕು.

1990ರ ದಶಕದ ಆರಂಭದಲ್ಲಿ, ಮೈಸೂರಲ್ಲಿ ರೌಡಿಗಳ ಹಾವಳಿ ಹೆಚ್ಚಾಗಿತ್ತು. ಆಗ, 1993ರಲ್ಲಿ ಚಾಮರಾಜ ಜೋಡಿ ರಸ್ತೆಯ ಗಾಯಿತ್ರಿ ಚಿತ್ರಮಂದಿರದ ಬಳಿ ಇಬ್ಬರು ಕಾರ್ಯನಿರತ ಪೇದೆಗಳ ಮೇಲೆ ದಾಳಿ ನಡೆಯಿತು.

ಪರಿಸ್ಥಿತಿಯ ಗಂಭೀರತೆ ಅರಿತಂತಹ ಆಗಿನ ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದ **ಹೆಚ್.ಆರ್. ಕಸ್ತೂರಿರಂಗನ್** ಅವರು **ಖಡಕ್ ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಎಸ್.ತಮ್ಮಯ್ಯ**

> "ಒಂದು ಕೆಟ್ಟ ಸಂಗತಿ ಎಂದರೆ, ಈಗೀಗ ಪೊಲೀಸ್ ಅಧಿಕಾರಿಗಳು ಪ್ರಶ್ನಾರ್ಹ ಹಿನ್ನೆಲೆಯುಳ್ಳಂತಹ ವ್ಯಕ್ತಿಗಳೊಂದಿಗೆ ಬಾರ್, ರೆಸ್ಟೋರೆಂಟ್‌ಗಳಲ್ಲಿ ಕುಳಿತು ತಿಂದು–ಕುಡಿಯುವುದು, ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಬಿಂಬಿಸಿಕೊಳ್ಳುವುದು ಪೊಲೀಸ್ ಇಲಾಖೆಗೆ ಒಪ್ಪುವಂತಹದ್ದಲ್ಲ. ಸಾಮಾನ್ಯ ಜನ ಯಾರ ಮೇಲೆ ದೂರು ನೀಡಲು ಬಯಸುತ್ತಾರೋ ಅವರ ಜೊತೆ ಪೊಲೀಸರು ಕುಡಿದು, ಮೋಜು–ಮಸ್ತಿ ಮಾಡುತ್ತಿದ್ದರೆ ಅವರ ಬಗ್ಗೆ ಸಾರ್ವಜನಿಕರಲ್ಲಿ ನಂಬಿಕೆ ಹುಟ್ಟುವುದಾದರು ಹೇಗೆ?

ನವರ ನೇತೃತ್ವದಲ್ಲಿ **ರೌಡಿ ಪ್ರತಿಬಂಧಕ ದಳ** (Anti-Rowdy Squad-ARS) ವನ್ನು ರಚಿಸಿದರು. ಸದ್ಯವೇ, ಪೊಲೀಸ್ ವಶದಿಂದ ತಪ್ಪಿಸಿ ಕೊಂಡು 'ಪರಾರಿ' ಆಗಲು ಯತ್ನಿಸಿದ ರೌಡಿಶೀಟರ್ ಲಕ್ಷ್ಮಣ ಅಲಿಯಾಸ್ 'ಚಿಂಪಾಂಜಿ' ಹಳೆ ಸಂತೇಪೇಟೆ ಪ್ರದೇಶದಲ್ಲಿ ಎನ್‌ಕೌಂಟರ್‌ಗೆ ಬಲಿಯಾದ.

ನಾವು ಪತ್ರಕರ್ತರು, ARS ಎಂದು ಕರೆಯುತ್ತಿದ್ದ ಆ ಪಡೆ ರೌಡಿಗಳ, ಅದರಲ್ಲೂ ರೌಡಿಗಳಾಗಬೇಕೆಂದಿದ್ದವರ ಎದೆಯಲ್ಲಿ ನಡುಕ ಸೃಷ್ಟಿಸಿತು. ಎರಡೇ ವರ್ಷಗಳಲ್ಲಿ ರೌಡಿಗಳು ಪೂರ್ತಿಯಾಗಿ ತಣ್ಣಗಾದರು. ನಂತರದ ದಿನಗಳಲ್ಲಿ ರೌಡಿ ಪ್ರತಿಬಂಧಕ ದಳವನ್ನು ನಗರ ಅಪರಾಧ ದಳ (ಸಿಸಿಬಿ) ವಿಭಾಗದಲ್ಲಿ ಸೇರ್ಪಡೆಗೊಳಿಸಲಾಗಿತ್ತು. ಈಗ ಅದು ನಿಷ್ಕ್ರೀಯವಾಗಿದೆ. ನಮ್ಮ ಮೈಸೂರು ನಗರ ಪೊಲೀಸ್ ಆಯುಕ್ತರಾದ ರಮೇಶ್ ಬಾನೋತ್ ಅವರು ಅದಕ್ಕೆ ಮರು ಜೀವ ನೀಡಬಹುದೇ?

ಇನ್ನು ನೆನಪಿದೆ; ಕಳೆದ ವರ್ಷ ಪೊಲೀಸ್ ಆಯುಕ್ತ ಬಾನೋತ್ ಅವರೇ ರೌಡಿ ಶೀಟರ್‌ಗಳಾದ ಕೆಲವು ಪ್ರಭಾವಿ ರಾಜಕಾರಣಿ ಗಳನ್ನು ರೌಡಿ ಪೆರೇಡ್‌ಗೆ ಎಳೆದು ತಂದಿದ್ದರು. ಅವರಲ್ಲಿ ಕೆಲವರು ಪೆರೇಡ್‌ಗೆ ಹಾಜರಾಗಲು ಒಪ್ಪಿರಲಿಲ್ಲ.

ಪೊಲೀಸರ ಈ ರೀತಿಯ ನಡೆ ಜನರಲ್ಲಿ ಅವರ ಬಗ್ಗೆ ವಿಶ್ವಾಸವನ್ನು ಮೂಡಿಸುತ್ತದೆ. ಆಯುಕ್ತರು ಸಹಾಯವಾಣಿ ಇರುವ ಶಕ್ತಿಶಾಲಿ ರೌಡಿ ಪ್ರತಿಬಂಧಕ ದಳವನ್ನು ರಚಿಸಿದಲ್ಲಿ ಮೈಸೂರಿನ ಹಿರಿಯ ನಾಗರಿಕರು ಮತ್ತು ಸಾಮಾನ್ಯ ಜನರು ಅವರನ್ನು ಪ್ರಶಂಸಿಸುತ್ತಾರೆ. ಅವರೆಲ್ಲರೂ ನಿರಾತಂಕವಾಗಿರುತ್ತಾರೆ. ಅವರ್‍ಯಾರೂ ಸ್ವಯಂ ಶೈಲಿಯ ಪುಡಿ ರೌಡಿಗಳಿಗೆ ಹೆದರಬೇಕಾಗಿರುವುದಿಲ್ಲ.

email: vikram@starofmysore.com

ಹಿಂದುಳಿದ ತಾಲೂಕುಗಳ ಪರಿಸ್ಥಿತಿ ಅಧ್ಯಯನಕ್ಕಾಗಿ ಉನ್ನತ ಮಟ್ಟದ ಸಮಿತಿ ರಚನೆ

ಬೆಳಗಾವಿ: ಹಿಂದುಳಿದ ತಾಲೂಕುಗಳ ಕುರಿತ ನಂಜುಂಡಪ್ಪನವರ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿಯನ್ನು ಅಧ್ಯಯನ ಮಾಡಲು ನುರಿತ ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ವಿಧಾನಸಭೆಯಲ್ಲಿಂದು ಉತ್ತರ ಕರ್ನಾಟಕ ಕುರಿತ ಚರ್ಚೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ನಂಜುಂಡಪ್ಪ ವರದಿ ಸಲ್ಲಿಕೆಯಾಗಿ 21 ವರ್ಷಗಳಾಗಿದ್ದು, ಅವರ ವರದಿಯನ್ನಾಧರಿಸಿ ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮೂಲಕ ಇದುವರೆಗೆ 61,330 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ. ಇದರಲ್ಲಿ ಸುಮಾರು 42,000 ಕೋಟಿ ರೂ. ಖರ್ಚು ಮಾಡಲಾಗಿದೆ. ನಂಜುಂಡಪ್ಪ ವರದಿಯನ್ನಾಧರಿಸಿ ನೀಡಲಾಗುವ ವಿಶೇಷ ಅಭಿವೃದ್ಧಿ ಯೋಜನೆಯಡಿಯೇ 32,433.43 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇದರ ಜೊತೆಯಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿ ವತಿಯಿಂದಲೂ ಅನುದಾನಗಳನ್ನು ಒದಗಿಸಲಾಗಿದೆ ಎಂದು ಸದನಕ್ಕೆ ಅಂಕಿ ಅಂಶ ಸಹಿತ ಮಾಹಿತಿ ನೀಡಿದರು.

ಇಷ್ಟೆಲ್ಲ ಮಾಡಿದರೂ ಈ ಭಾಗದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವು ನಿರೀಕ್ಷಿತ ಮಟ್ಟದಲ್ಲಿ ಸುಧಾರಿಸುತ್ತಿಲ್ಲ. ಶಿಕ್ಷಣ, ಆರೋಗ್ಯ, ಆದಾಯ ಗಳಿಕೆ ಮುಂತಾದವುಗಳಲ್ಲಿ ಹಿನ್ನಡೆಯನ್ನು ಈ ಜಿಲ್ಲೆಗಳು ಅನುಭವಿಸುತ್ತಿವೆ. ಹಾಗಾಗಿ ವಿಶೇಷವಾಗಿ ನಂಜುಂಡಪ್ಪ ಅವರ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿಯನ್ನು ಅಧ್ಯಯನ ಮಾಡಲು ನುರಿತ ಅರ್ಥಶಾಸ್ತ್ರಜ್ಞರ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಮಿತಿ ರಚಿಸಲಾಗುವುದು ಎಂದು ತಿಳಿಸಿದರು. ಉತ್ತರ ಕರ್ನಾಟಕದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆರ್ಥಿಕತೆಗೆ ಉತ್ತೇಜನ ನೀಡಲು ಹಾಗೂ ಸ್ಥಳೀಯರಿಗೆ ಉದ್ಯೋಗ ಒದಗಿಸುವ ಸಲುವಾಗಿ ಬೆಳಗಾವಿ ಸಮೀಪ ಸುಮಾರು 2000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ, 500 ಎಕರೆ ಪ್ರದೇಶದಲ್ಲಿ ಫೌಂಡ್ರಿ ಕ್ಲಸ್ಟರ್ ಅನ್ನು ಸ್ಥಾಪಿಸಲಾಗುವುದು ಹಾಗೂ ಜಿಲ್ಲೆಯಲ್ಲಿ ಏರೋ ಸ್ಪೇಸ್ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ವಿಶೇಷ ಒತ್ತು ನೀಡಲಾಗುವುದು ಎಂದರು.

ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಕ್ಲಸ್ಟರ್ ಅನ್ನು ಸ್ಥಾಪಿಸಲಾಗುತ್ತಿದ್ದು, ಈಗಾಗಲೇ 19 ಘಟಕಗಳು ರೂ.1255 ಕೋಟಿ ಬಂಡವಾಳ ಹೂಡಿಕೆ ಮಾಡುತ್ತಿದ್ದು, ಸುಮಾರು 2450 ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ. ಅಲ್ಲದೇ, ಧಾರವಾಡದ ಸಮೀಪ ಸುಮಾರು 3000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲಾಗುತ್ತದೆ ಎಂದು ತಿಳಿಸಿದರು. ರಾಯಚೂರಿನಲ್ಲಿ ಹತ್ತಿ ಉತ್ಪಾದನೆಯು ಹೆಚ್ಚಿರುವುದರಿಂದ ಈ ಜಿಲ್ಲೆಯಲ್ಲಿ ಆರ್ಥಿಕ ಅಭಿವೃದ್ಧಿ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ದೃಷ್ಟಿಯಿಂದ ಹತ್ತಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ಒತ್ತು ನೀಡಲಾಗುವುದು. ವಿಜಯಪುರದಲ್ಲಿ ಉತ್ಪಾದನಾ ಕ್ಲಸ್ಟರ್ ಅನ್ನು ಅಂದಾಜು 1500 ಎಕರೆ ಪ್ರದೇಶ ದಲ್ಲಿ ಸ್ಥಾಪಿಸಲಾಗುವುದು. ಉತ್ತರ ಕರ್ನಾ ಟಕವು ಸಮೃದ್ಧ ಪ್ರವಾಸೋದ್ಯಮಗಳ ತಾಣವಾಗಿದೆ ಎಂದರು.

ಧಾರವಾಡದಲ್ಲಿರುವ ವಾಲ್ಮಿ [ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ] ಯನ್ನು ಉನ್ನತೀಕರಿಸಲಾಗುವುದು. ಇದನ್ನು `Centre of excellence for water management' ಆಗಿ ಬದಲಾಯಿಸಿ ಇದರ ಮೂಲಕ ಜಲ ಶಿಕ್ಷಣ ನೀಡುವುದಷ್ಟೆ ಅಲ್ಲ, ಉತ್ತರ ಕರ್ನಾಟಕದ ಮಣ್ಣಿನ ಸವುಳು– ಜವುಳು ಸಮಸ್ಯೆಯನ್ನು ನಿರ್ವಹಿಸಲಾಗುವುದು. ಹಾಗೂ ರೈತರ ಆದಾಯ ಹೆಚ್ಚಳದ ಕಡೆಗೆ ಒತ್ತು ನೀಡಲಾಗುವುದು ಎಂದು ಮುಖ್ಯಮಂತ್ರಿ ಸದನಕ್ಕೆ ವಿವರಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶನಿವಾರ 16 ಡಿಸೆಂಬರ್ 2023

ಬೇಸಿಗೆಯಲ್ಲಿ ಬೆಂಕಿ ಅವಘಡ ಎದುರಿಸಲು ಬಂಡೀಪುರ ಸಜ್ಜು

2877 ಕಿ.ಮೀ. ಫೈರ್ ಲೈನ್ ನಿರ್ಮಾಣ, 68 ಬ್ಲೋವರ್ ಬಳಕೆ, 475 ಫೈರ್ ವಾಚರ್ ನೇಮಕಕ್ಕೆ ನಿರ್ಧಾರ, 13 ವಲಯಗಳಲ್ಲಿಯೂ ಹೈ ಅಲರ್ಟ್

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಡಿ.15– ಮಳೆ ಇಲ್ಲದೆ ಬಿಸಿಲಿನ ಹೊಡೆತಕ್ಕೆ ಅರಣ್ಯ ಪ್ರದೇಶ ನಲುಗುತ್ತಿದ್ದು, ಬೇಸಿಗೆಯಲ್ಲಿ ಅರಣ್ಯ ಸಂಪತ್ತಿನ ಸಂರಕ್ಷಣೆಗೆ ಅರಣ್ಯ ಇಲಾಖೆ ಮುಂದಾಗಿದೆ. ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶವಾದ ಬಂಡೀಪುರದಲ್ಲಿ ಬೇಸಿಗೆ ಎದುರಿಸಲು ಎಲ್ಲಾ ವಲಯಗಳಲ್ಲೂ ಹೈ ಅಲರ್ಟ್ ಘೋಷಿಸಲಾಗಿದ್ದು, 2876 ಕಿ.ಮೀ. ಬೆಂಕಿ ತಡೆರೇಖೆ ನಿರ್ಮಿಸಿ, 475 ಫೈರ್ ವಾಚರ್ ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಕಳೆದ ಮೂರು ವರ್ಷದಿಂದ ಯಾವುದೇ ಬೆಂಕಿ ಅನಾಹುತವಿಲ್ಲದೆ ಸಂರಕ್ಷಿಸಲ್ಪಟ್ಟಿರುವ ಬಂಡೀಪುರ ಅಭಯಾರಣ್ಯದಲ್ಲಿ ಈ ಬಾರಿಯೂ ಬೆಂಕಿ ಬೀಳದಂತೆ ಕಟ್ಟೆಚ್ಚರ ವಹಿಸಲಾಗಿದೆ. 13 ವಲಯಗಳ ಎಲ್ಲಾ ಸಿಬ್ಬಂದಿಗಳೂ ಬೇಸಿಗೆ ಎದುರಿಸಲು ಸಿದ್ಧರಾಗಿದ್ದಾರೆ. 1036 ಚ.ಕಿ.ಮೀ ವ್ಯಾಪ್ತಿಯುಳ್ಳ ಬಂಡೀಪುರ ಅರಣ್ಯಕ್ಕೆ ಕಾಡ್ಗಿಚ್ಚು ದೊಡ್ಡ ಸವಾಲಾಗಿದ್ದು, ಈ ಹಿಂದೆ ಅಪಾರ ಪ್ರಮಾಣದ ಅರಣ್ಯ ಸಂಪತ್ತು ಹಾನಿಯಾಗಿತ್ತು. ಕೊರೊನಾ ಸಂದರ್ಭದಲ್ಲಿ ಜನ ಸಂಚಾರವಿಲ್ಲದ ಕಾರಣ 2020–21ರಲ್ಲಿ ಬಂಡೀಪುರದಲ್ಲಿ ಬೆಂಕಿ ಅವಘಡ ಸಂಭವಿಸಿರಲಿಲ್ಲ.

100 ಕಿ.ಮೀ ಹೆಚ್ಚುವರಿ ಫೈರ್‌ಲೈನ್ ನಿರ್ಮಾಣ: ಅರಣ್ಯ ಪ್ರದೇಶದಲ್ಲಿ ಉಂಟಾಗುವ ಮಾನವ ನಿರ್ಮಿತ ಬೆಂಕಿ ಅನಾಹುತ ತಡೆದು ಅರಣ್ಯ ಸಂಪತ್ತು ಸಂರಕ್ಷಿಸಲು ಬೆಂಕಿ ತಡೆರೇಖೆ (ಫೈರ್ ಲೈನ್) ಪ್ರಮುಖ ಪಾತ್ರವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿವರ್ಷವೂ ಅರಣ್ಯ ಪ್ರದೇಶದಲ್ಲಿ ಗುರುತಿಸಲ್ಪಟ್ಟ ಸ್ಥಳದಲ್ಲಿ ಬೆಂಕಿ ತಡೆರೇಖೆ ನಿರ್ಮಿಸಲಾಗುತ್ತದೆ. ಅರಣ್ಯ ಪ್ರದೇಶದ ಸಾಂದ್ರತೆಗೆ ಅನುಗುಣವಾಗಿ 20 ಮೀ, 30 ಮೀಟರ್ ಅಗಲದ ಫೈರ್‌ಲೈನ್ ನಿರ್ಮಿಸಲಾಗುತ್ತದೆ. ಕಳೆದ ವರ್ಷ 2776 ಕಿ.ಮೀ. ಬೆಂಕಿ ತಡೆರೇಖೆ ನಿರ್ಮಿಸಲಾಗಿತ್ತು. ಈ ಬಾರಿ ಸೂಕ್ಷ್ಮ ವಲಯಗಳಲ್ಲಿ ಸಿಬ್ಬಂದಿಗಳ ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿಯಾಗಿ 100 ಕಿ.ಮೀ. ಬೆಂಕಿ ತಡೆರೇಖೆ ನಿರ್ಮಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಅನುಮತಿ ಕೋರಲಾಗಿದೆ.

ಫೈರ್ ಡಿಟೆಕ್ಷನ್ ಪಾಯಿಂಟ್: ದಟ್ಟಾರಣ್ಯ ಹಾಗೂ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ವಾಚ್ ಟವರ್‌ಗಳೂ ಅಷ್ಟೇ ಪ್ರಮುಖ ಪಾತ್ರವಹಿಸಲಿವೆ. ವೀಕ್ಷಣಾ ಗೋಪುರ(ವಾಚ್ ಟವರ್)ಗಳ ಮೇಲೆ ಸಿಬ್ಬಂದಿಗಳು ವಲಯವಾರು ವೀಕ್ಷಿಸಿ ಹೊಗೆ ಕಾಣಿಸಿಕೊಳ್ಳುವ ಪ್ರದೇಶಗಳ ಬಗ್ಗೆ ತಕ್ಷಣವೇ ಮಾಹಿತಿ ನೀಡಲಿದ್ದಾರೆ. ಈ ಬಾರಿ ವಲಯಕ್ಕೆ 1 ಅಥವಾ 2 ವೀಕ್ಷಣಾ ಗೋಪುರ(ಮರದ ಮೇಲೆ ಅಟ್ಟ) ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ಸ್ಟಾಟಿಕ್ ಮೊಬೈಲ್ ಫೈರ್ ಪ್ರೊಟೆಕ್ಷನ್ ಕ್ಯಾಂಪ್: ಬೇಸಿಗೆ ಎದುರಿಸಲು ಅರಣ್ಯ ಸಿಬ್ಬಂದಿಗಳೊಂದಿಗೆ 8ರಿಂದ 10 ಮಂದಿ ವಾಚರ್‌ಗಳಿರುವ ಸ್ಟಾಟಿಕ್ ಫೈರ್ ಪ್ರೊಟೆಕ್ಷನ್ ಕ್ಯಾಂಪ್‌ಗೆ ಸ್ಥಳ ಗುರುತಿಸಲಾಗಿದೆ. ಈ ಕ್ಯಾಂಪ್‌ನಲ್ಲಿ ಕಾಯುತ್ತಿರುವ ಸಿಬ್ಬಂದಿಗಳು ವಾಚ್ ಟವರ್ ಸಿಬ್ಬಂದಿಗಳು ನೀಡುವ ಮಾಹಿತಿ ಆಧರಿಸಿ, ಬೆಂಕಿ ಬಿದ್ದ ಸ್ಥಳಕ್ಕೆ ತೆರಳಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಲಿದ್ದಾರೆ.

ಮೊಬೈಲ್ ಫೈರ್ ಪ್ರೊಟೆಕ್ಷನ್ ಕ್ಯಾಂಪ್: ಕಾಡ್ಗಿಚ್ಚು ತಡೆಗಾಗಿ ಬೆಂಕಿ ತಡೆರೇಖೆ, ವೀಕ್ಷಣಾ ಗೋಪುರ, ಸ್ಟಾಟಿಕ್ ಮೊಬೈಲ್ ಪ್ರೊಟೆಕ್ಷನ್ ಕ್ಯಾಂಪ್‌ನೊಂದಿಗೆ ಮೊಬೈಲ್ ಫೈರ್ ಪ್ರೊಟೆಕ್ಷನ್ ಕ್ಯಾಂಪ್ ಸೇರಿಕೊಂಡು ಕಾರ್ಯನಿರ್ವಹಿಸಲಿದೆ. ಪ್ರತಿ ವಲಯದಲ್ಲೂ ತಲಾ ಒಂದೊಂದು ವಾಹನ ನಿಯೋಜಿಸಲಾಗಿದ್ದು, ಯಾವುದೇ ಕ್ಷಣದಲ್ಲೂ ಬೆಂಕಿ ಬಿದ್ದ ಸ್ಥಳಕ್ಕೆ ವಾಚರ್ ಹಾಗೂ ಬೇರೆ ಬೇರೆ ವಲಯದ ಸಿಬ್ಬಂದಿಗಳನ್ನು ಕರೆದೊಯ್ಯಲು ಮೊಬೈಲ್ ಫೈರ್ ಪ್ರೊಟೆಕ್ಷನ್ ಕ್ಯಾಂಪ್ ಸಜ್ಜಾಗಿರುತ್ತದೆ. ಬೆಂಕಿಬಿದ್ದ ಸ್ಥಳದಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಈ ವಾಹನಗಳ ಮೂಲಕವೇ ಊಟ, ನೀರು ಸೇರಿದಂತೆ ಅಗತ್ಯ ವಸ್ತುಗಳನ್ನು ಸರಬರಾಜು ಮಾಡಲಾಗುತ್ತದೆ.

ಫೈರ್ ಎಕ್ಯುಪ್‌ಮೆಂಟ್: ಬೆಂಕಿ ಬಿದ್ದ ಸ್ಥಳದಲ್ಲಿ ಬೆಂಕಿ ನಂದಿಸಲು ನಿಯೋಜಿಸಿರುವ ಫೈರ್ ವಾಚರ್‌ಗಳು ಬೆಂಕಿ ಬಡಿಯಲು ಪೊರಕೆ ಮಾದರಿಯಲ್ಲಿ ಹಸಿರು ಸೊಪ್ಪಿನ ಗಂಟನ್ನು ಸಿದ್ಧಪಡಿಸಿಕೊಳ್ಳಲಿದ್ದಾರೆ. ಇದರೊಂದಿಗೆ ಫೈರ್ ಬ್ಲೋವರ್ ಬಳಸಲಾಗುತ್ತದೆ. ಈಗಾಗಲೇ 55 ಬ್ಲೋವರ್‌ಗಳಿದ್ದು, ಹೆಚ್ಚುವರಿಯಾಗಿ 13 ಬ್ಲೋವರ್ ತರಿಸಲಾಗಿದೆ. ಅಲ್ಲದೆ, ವಾಚರ್‌ಗಳು ಕಾರ್ಯ ನಿರ್ವಹಿಸಲು ಬೇಕಾದ ಕತ್ತಿ, ವಾಟರ್ ಕ್ಯಾನ್ ತಂದು ಇಟ್ಟುಕೊಳ್ಳಲಾಗಿದೆ.

ಸಿಬ್ಬಂದಿಗಳಿಗೆ ತರಬೇತಿ: ಪ್ರತಿ ವರ್ಷದಂತೆ ಈ ಬಾರಿಯೂ ಬಂಡೀಪುರ ಸೇರಿದಂತೆ ರಾಜ್ಯದ ಎಲ್ಲಾ ಅರಣ್ಯಗಳಲ್ಲೂ ಅಗ್ನಿಶಾಮಕ ದಳದ ವಾಹನ ಮತ್ತು ಸಿಬ್ಬಂದಿಗಳನ್ನು ಬೇಸಿಗೆ ನಿರ್ವಹಣೆಗೆ ನಿಯೋಜಿಸಲಾಗುತ್ತದೆ. ಅಲ್ಲದೆ, ಬಂಡೀಪುರದಲ್ಲಿ ಈಗಾಗಲೇ ಕಾಡ್ಗಿಚ್ಚು ನಂದಿಸುವ ಸಂಬಂಧ ಅಗ್ನಿಶಾಮಕ ಸಿಬ್ಬಂದಿಗಳಿಂದ ತರಬೇತಿ ನೀಡಲಾಗಿದೆ. ಬೆಂಕಿ ನಂದಿಸಲು ಯಾವ ದಿಕ್ಕಿನಿಂದ ಕಾರ್ಯನಿರ್ವಹಿಸಬೇಕು. ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮ ಕುರಿತು ಮನವರಿಕೆ ಮಾಡಿಕೊಡಲಾಗಿದೆ.






ಸಿಬ್ಬಂದಿಗಳಿಗೆ ತರಬೇತಿ ನೀಡುತ್ತಿರುವುದು



ಫೈರ್ ಲೈನ್ ಮಾಡುತ್ತಿರುವ ಸ್ಥಳೀಯ ಬುಡಕಟ್ಟು ಜನ

ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ



ಬೇಸಿಗೆಯಲ್ಲಿ ಕಾಡ್ಗಿಚ್ಚು ತಡೆಗೆ ಈಗಾಗಲೇ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ಸಿಬ್ಬಂದಿಗಳ ಪರಿಶ್ರಮದಿಂದ ಮೂರು ವರ್ಷದಿಂದ ಶೂನ್ಯ ಬೆಂಕಿ ಪ್ರಕರಣದ ಕಾಡು ಎಂಬ ಹೆಗ್ಗಳಿಕೆ ಬಂಡೀಪುರಕ್ಕೆ ಇದೆ. ಈ ಬಾರಿಗೂ ನಾವು ಸವಾಲಿನಿಂದ ಕಾರ್ಯನಿರ್ವಹಿಸುತ್ತಿದ್ದೇವೆ. ಕಾಡಂಚಿನ ಗ್ರಾಮಗಳಲ್ಲಿ ಕಾಡ್ಗಿಚ್ಚು ತಡೆಗೆ ಅರಿವು ಮೂಡಿಸಲು ಬೀದಿ ನಾಟಕ, ಭಿತ್ತಿಪತ್ರ, ಪೋಸ್ಟರ್‌ಗಳ ಮೂಲಕ ಜಾಗೃತಿ ಮೂಡಿಸಲಾಗಿದೆ. 475 ವಾಚರ್‌ಗಳನ್ನು ನೇಮಿಸಿಕೊಳ್ಳಲಾಗುತ್ತಿದ್ದು, ಎಲ್ಲರಿಗೂ ತಲಾ 10 ಲಕ್ಷ ರೂ. ವಿಮೆ ಮಾಡಿಸಲಾಗಿದೆ. ಜನವರಿಯಿಂದ ಏಪ್ರಿಲ್‌ವರೆಗೂ ಬೇಸಿಗೆ ನಿರ್ವಹಣೆಗೆ ಬೇಕಾದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಯಾವುದೇ ಸ್ಥಳದಲ್ಲಿ ಬೆಂಕಿ ಕಾಣಿಸಿಕೊಂಡರೂ, ಆ ಸ್ಥಳಕ್ಕೆ ಅರ್ಧ ಗಂಟೆಯೊಳಗೆ ಹೆಚ್ಚುವರಿ ಸಿಬ್ಬಂದಿಗಳನ್ನು ಕರೆಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಪ್ರಮುಖವಾಗಿ ಕಾಡಂಚಿನ ಗ್ರಾಮಗಳ ಸಹಕಾರ ಕೋರಲಾಗಿದ್ದು, ಬೆಂಕಿಯಿಂದ ಅರಣ್ಯ ಸಂಪತ್ತು ಸಂರಕ್ಷಣೆಗೆ ಇಲಾಖೆಯೊಂದಿಗೆ ಕೈಜೋಡಿಸುವಂತೆ ಕೋರಲಾಗಿದೆ.

- ಡಾ.ಪಿ.ರಮೇಶ್ ಕುಮಾರ್.
ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ನಾಳೆ 'ಸಂಧ್ಯಾ ಸಂಭ್ರಮ' ಕಾರ್ಯಕ್ರಮ



ಮೈಸೂರು,ಡಿ.15(ಎಂಟಿವೈ)– ಮೈಸೂರಿನ ಜೆ.ಕೆ.ಮೈದಾನದಲ್ಲಿ ಡಿ.17ರಂದು ಸಂಜೆ 5ಕ್ಕೆ ಸ್ವರಾಂಜಲಿ ಸಂಸ್ಥೆಯಿಂದ ಹಿರಿಯ ನಾಗರಿಕರಿಗಾಗಿ 'ಸಂಧ್ಯಾ ಸಂಭ್ರಮ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ರೂಪಶ್ರೀ ಶೇಷಾದ್ರಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ನಾಗರಿಕರಿಗೆ ಮಾನಸಿಕ ಸ್ಥೈರ್ಯ ಹಾಗೂ ದೈಹಿಕ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕಳೆದ ಎರಡು ವರ್ಷದಿಂದ ವಿವಿಧ ಕಾರ್ಯಕ್ರಮ ಆಯೋಜಿಸುತ್ತಾ ಬಂದಿದ್ದೇವೆ. ಡಿ.17ರಂದು ಸಂಜೆ 5ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ಈ ಕಾರ್ಯಕ್ರಮದಲ್ಲಿ ಥಟ್ ಅಂತ ಹೇಳಿ ಕಾರ್ಯಕ್ರಮ ಖ್ಯಾತಿಯ ಡಾ.ನಾ. ಸೋಮೇಶ್ವರ್ ಹಾಗೂ ಹಾಸ್ಯ ಸಾಹಿತಿ ಪ್ರೊ.ಕೃಷ್ಣೇಗೌಡ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಡಿ.9ರಂದು ನಮ್ಮ ತಂಡದಿಂದ ಹಿರಿಯ ನಾಗರೀಕರಿಗಾಗಿ ಗಾಯನ ಸ್ಪರ್ಧೆ, ಡಿ.10ರಂದು ರಂಗೋಲಿ ಹಾಗೂ ರಸಪ್ರಶ್ನೆ(ಲಿಖಿತ) ಸ್ಪರ್ಧೆ ನಡೆಸಲಾಗಿದೆ. ಡಿ.16ರಂದು ಮಧ್ಯಾಹ್ನ 2 ಗಂಟೆಗೆ ಫ್ಯಾಷನ್ ಶೋ ಆಯೋಜಿಸಲಾಗಿದೆ. ಡಿ.17ರಂದು ಬೆಳಗ್ಗೆ 10ಕ್ಕೆ ರಸಪ್ರಶ್ನೆ ಮೌಖಿಕ ಸ್ಪರ್ಧೆ ನಡೆಯಲಿದೆ. ಈ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಡಿ.17ರಂದು ಸಂಜೆ ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುತ್ತದೆ ಎಂದು ತಿಳಿಸಿದರು.

ಬಳಿಕ ಮನರಂಜನಾ ಕಾರ್ಯಕ್ರಮ ನಡೆಯಲಿದ್ದು, ಭಾರತ್ ಬ್ರಾಸ್ ತಂಡದ ಸದಸ್ಯರು ವಾದ್ಯ ಸಂಗೀತದೊಂದಿಗೆ ಹಳೆಯ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99168 30019 ನ್ನು ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸ್ವರಾಂಜಲಿ ಸಂಸ್ಥೆಯ ಡಾ. ಲಾವಣ್ಯ, ಆನಂದ್ ಮಾಧವ್, ಡಾ. ರಘುಕುಮಾರ್ ಇದ್ದರು.

ನಾಳೆವರೆಗೆ ಅಯೋಧ್ಯಾ ಶ್ರೀರಾಮ ಮಂದಿರ ಮಾದರಿ ವೀಕ್ಷಣೆಗೆ ಅವಕಾಶ



ಮೈಸೂರು,ಡಿ.15(ಎಂಟಿವೈ)– ಮೈಸೂರಿನ ಶ್ರೀರಾಂಪುರ ಎರಡನೇ ಹಂತದ ಲೀಸಾಸ್ ಫಸ್ಟ್ ಸ್ಟೆಪ್ ಶಿಕ್ಷಣ ಸಂಸ್ಥೆಯಲ್ಲಿ ಡಿ. 17ರವರೆಗೆ ಸಂಜೆ 4ರಿಂದ ರಾತ್ರಿ 8.30ರವರೆಗೆ ಅಯೋಧ್ಯಾ ಶ್ರೀರಾಮ ಮಂದಿರದ ಮಾದರಿ ಪ್ರದರ್ಶನ ಏರ್ಪಡಿಸಲಾಗಿದ್ದು, ಸಾರ್ವಜನಿಕರು ದರ್ಶನ ಪಡೆಯಬಹುದಾಗಿದೆ ಎಂದು ಸಂಸ್ಥೆ ಸುಧಾ ಹೆಗ್ಡೆ ತಿಳಿಸಿದ್ದಾರೆ.

ಜಿಲ್ಲ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ವಿನಯ್ ರಾವ್ ಅವರು ಯಾರ ನೆರವೂ ಪಡೆಯದೇ ಥರ್ಮೋಕೋಲ್‌ನಲ್ಲಿ ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರದ ಮಾದರಿ ನಿರ್ಮಿಸಿದ್ದಾರೆ. ಡಿ.10ರಿಂದ ಪ್ರದರ್ಶನ ಆಯೋಸಲಾಗಿದ್ದು, ಈಗಾಗಲೇ ಸಾಕಷ್ಟು ಮಂದಿ ಅಯೋಧ್ಯೆಯ ಶ್ರೀರಾಮ ಮಂದಿರದ ಮಾದರಿ ವೀಕ್ಷಿಸಿದ್ದಾರೆ. ಇನ್ನು ಎರಡು ದಿನ ರಾಮಮಂದಿರದ ಮಾದರಿ ವೀಕ್ಷಿಸಲು ಅವಕಾಶವಿದ್ದು, ಮೈಸೂರಿನ ಜನತೆ ಪ್ರದರ್ಶನದ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶಾಲೆ ಪ್ರಾಚಾರ್ಯರಾದ ಎಸ್. ರಾಜರಾಜೇಶ್ವರಿ, ವಿನಯ್ ರಾಂ ಇದ್ದರು.

ನಾಳೆ ಪಿಂಚಣಿದಾರರ ದಿನಾಚರಣೆ



ಮೈಸೂರು, ಡಿ.15(ಎಂಟಿವೈ)– ಮೈಸೂರಿನ ಶ್ರೀರಾಂಪುರದ ಎಸ್‌ಬಿಎಂ ಕಾಲೋನಿಯಲ್ಲಿರುವ ಶಿವ ಭವನದಲ್ಲಿ ಡಿ.17ರಂದು ಮಧ್ಯಾಹ್ನ 3ಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ವಿಶ್ರಾಂತ ಉದ್ಯೋಗಿಗಳ ಸಂಘದ ವತಿಯಿಂದ ಪಿಂಚಣಿದಾರರ ದಿನಾಚರಣೆ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಆರ್. ಉಮಾಕಾಂತ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 10 ವರ್ಷದ ಹಿಂದೆ ಸ್ಥಾಪಿತವಾದ ಕರ್ನಾಟಕ ರಾಜ್ಯ ಸರ್ಕಾರಿ ವಿಶ್ರಾಂತ ಉದ್ಯೋಗಿಗಳ ಸಂಘ ಹಲವು ಸಮಾಜಮುಖಿ ಸೇವಾ ಕಾರ್ಯ ಮಾಡುತ್ತಾ ಸಾಗುತ್ತಿದೆ. ಪ್ರತಿ ತಿಂಗಳ ಕೊನೆ ಭಾನುವಾರ ಸಂಘದ ಸದಸ್ಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದೆ. ಸಂಘದ ವತಿಯಿಂದ ವೃದ್ಧಾಶ್ರಮ ನಿರ್ಮಿಸಲು ಉದ್ದೇಶಿಸಲಾಗುತ್ತಿದ್ದು, ದಾನಿಗಳಿಂದ ನೆರವು ನಿರೀಕ್ಷಿಸಲಾಗಿದೆ. ಅಲ್ಲದೆ, ನಿವೃತ್ತ ನೌಕರರಿಗೆ ವಿವಿಧ ಸೌಲಭ್ಯ ಒದಗಿಸಲು ಸರ್ಕಾರವನ್ನು ಒತ್ತಾಯಿಸಲು ಹಲವು ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಪಿಂಚಣಿದಾರರ ದಿನಾಚರಣೆ ಕಾರ್ಯಕ್ರಮವನ್ನು ನಿವೃತ್ತ ಸರ್ಕಾರಿ ಅಧೀನ ಕಾರ್ಯದರ್ಶಿ ಡಾ.ಪಿ. ಬೋರೇಗೌಡ ಉದ್ಘಾಟಿಸುವರು, ಸಾರ್ವಜನಿಕ ಇಲಾಖೆ ನಿವೃತ್ತ ಸಹ ನಿರ್ದೇಶಕ ಪಿ.ಶಾರದಮ್ಮ ಅತಿಥಿಗಳಾಗಿರುವರು. ಸಂಸ್ಥಾಪಕ ಅಧ್ಯಕ್ಷ ಎನ್. ಓಬಯ್ಯ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಸಿ. ಚಿಕ್ಕಲಿಂಗಸ್ವಾಮಿ, ಆರ್. ನಾಗೇಶ್, ನರಸಿಂಹಮೂರ್ತಿ ಇದ್ದರು.

ಸಿ.ಪಿ.ಯೋಗೇಶ್ವರ್ ಬಾವ ಮಹದೇವಯ್ಯ ಕೊಲೆ ಪ್ರಕರಣ; ತಮಿಳುನಾಡಿನಲ್ಲಿ ಆರೋಪಿ ಸೆರೆ

ಚನ್ನಪಟ್ಟಣ: ಮಾಜಿ ಸಚಿವ, ಹಾಲಿ ವಿಧಾನಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಬಾವ ಮಹದೇವಯ್ಯ ಅವರ ಕೊಲೆ ಪ್ರಕರಣದ ಆರೋಪಿಯೊಬ್ಬನನ್ನು ತಮಿಳುನಾಡಿನಲ್ಲಿ ಪೊಲೀಸರು ಬಂಧಿಸಿದ್ದಾರೆ.



ಮಹದೇವಯ್ಯ

ಮುರುಗನ್ ಬಂಧಿತ ಆರೋಪಿ. ತಮಿಳುನಾಡು ಮೂಲದ ಈತ ಕೆಲ ವರ್ಷಗಳಿಂದ ಮಹದೇವಯ್ಯ ಅವರ ಪಕ್ಕದ ತೋಟದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ. ಮಹದೇವಯ್ಯ ಅವರಿಗೆ ಪರಿಚಿತನಾಗಿದ್ದ ಆರೋಪಿಗೆ ಅವರ ಹಣದ ವಹಿವಾಟಿನ ಬಗ್ಗೆಯೂ ಮಾಹಿತಿ ಇತ್ತು ಎನ್ನಲಾಗಿದೆ. ಹಾಗಾಗಿ ತನ್ನ ಸಹಚರರೊಂದಿಗೆ ಕೃತ್ಯ ವೆಸಗಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣದ ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಬಲೆ ಬೀಸಲಾಗಿದೆ. ಸದ್ಯ ಬಂಧಿತ ಆರೋಪಿ ಮುರುಗನ್‌ನನ್ನು ತಮಿಳುನಾಡಿನಿಂದ ಕರೆತರಲಾಗುತ್ತಿದೆ. ಕೋರ್ಟ್ ಎದುರು ಹಾಜರುಪಡಿಸಿದ ಬಳಿಕ ವಿಚಾರಣೆಗಾಗಿ ಪೊಲೀಸ್ ವಶಕ್ಕೆ ಪಡೆಯಲಾಗುವುದು ಎಂದು ಮೂಲಗಳು ತಿಳಿಸಿವೆ.

ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಅವರ ಸಹೋದರಿ ಪುಷ್ಪಾ ಅವರ ಪತಿ ಮಹದೇವಯ್ಯ ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದರು. ಅವರು ಡಿಸೆಂಬರ 1ರ ಶುಕ್ರವಾರ ರಾತ್ರಿ ಚಕ್ಕರೆ ಗ್ರಾಮದ ತೋಟದ ಮನೆಯಿಂದ ನಾಪತ್ತೆಯಾಗಿದ್ದರು. ಬಳಿಕ ಮಹದೇಶ್ವರ ಬೆಟ್ಟದಲ್ಲಿ ಟವರ್ ಲೊಕೇಶನ್ ಪತ್ತೆ ಆಗಿತ್ತು ತದನಂತರ ಚಾಮರಾಜನಗರದ ಹನೂರು ತಾಲೂಕಿನ ರಾಮಾಪುರ ಗ್ರಾಮದ ನಿರ್ಜನ ಪ್ರದೇಶದಲ್ಲಿ ಮಹದೇವಯ್ಯ ಮೃತದೇಹ ಪತ್ತೆಯಾಗಿತ್ತು. ಅವರ ಕಾರು ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ರಾಮಾಪುರ ಗ್ರಾಮದ ಬಳಿ ಪತ್ತೆಯಾಗಿತ್ತು ಈ ಪ್ರಕರಣದ ಆರೋಪಿಗಳ ಪತ್ತೆಗಾಗಿ ಪೊಲೀಸರು ನಾಲ್ಕು ತಂಡಗಳನ್ನು ರಚಿಸಿದ್ದರು.

ಡಿ.18, 19ರಂದು ಅಂತಾರಾಷ್ಟ್ರೀಯ ಸಮ್ಮೇಳನ

ಮೈಸೂರು, ಡಿ.15–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಮತ್ತು ಇಂಟರ್‌ನ್ಯಾಷನಲ್ ಕೌನ್ಸಿಲ್ ಫಾರ್ ಡೆವಲಪ್ಮೆಂಟ್ ರಿಸರ್ಚ್ ಮೈಸೂರು ಇವರ ಸಹಯೋಗದಲ್ಲಿ ಗ್ಲೋಬಲ್ ಪ್ಯಾರಡಮ್ ಶಿಫ್ಟ್ ಟು ಸ್ಟೆಬಿಲೈಸ್ ಗ್ರೋಥ್ ಕುರಿತು ಡಿಸೆಂಬರ್ 18 ಮತ್ತು 19ರಂದು ಅಂತಾರಾಷ್ಟ್ರೀಯ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರಾಮುವಿ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಸ್ತಕ ಓದಿನ ಆಸಕ್ತಿ ಹೆಚ್ಚಿಸಲು ಹೊಸ ಯೋಜನೆ ಅವಶ್ಯವಿದೆ

ಮೈಸೂರು ವಿವಿ ಹಣಕಾಸು ಅಧಿಕಾರಿ ರೇಖಾ ಅಭಿಪ್ರಾಯ

ಮೈಸೂರು, ಡಿ.15(ಬಿಎಲ್‌ಯು)– ವಿದ್ಯಾರ್ಥಿಗಳು ಸೇರಿದಂತೆ ಜನರಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಓದಿನ ಆಸಕ್ತಿ ಹೆಚ್ಚಿಸಲು ಹೊಸ ಯೋಜನೆಗಳನ್ನು ರೂಪಿಸುವ ಅವಶ್ಯಕತೆ ಇದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಕೆಎಸ್.ರೇಖಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಇಂದು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಕಾಲಕ್ಕೆ ತಕ್ಕಂತೆ ಹಲವು ಬದಲಾವಣೆಗಳಾಗುತ್ತಿರುವ ಕಾರಣ ವರ್ತಮಾನಕ್ಕೆ ಅನುಗುಣವಾದಂತೆ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಳ್ಳುವ ಸವಾಲು ನಮ್ಮ ಮುಂದಿದೆ ಎಂದು ಅಭಿಪ್ರಾಯಪಟ್ಟರು.

ಗ್ರಂಥಾಲಯ ಕ್ಷೇತ್ರದಲ್ಲಿ ಉದ್ಯೋಗವಕಾಶಗಳಿವೆ. ಇದರಿಂದ ಹೆಚ್ಚಿನ ವಿದ್ಯಾರ್ಥಿಗಳು ಗ್ರಂಥಾಲಯ ವಿಜ್ಞಾನ ಆಯ್ಕೆ ಮಾಡಿಕೊಂಡು ವ್ಯಾಸಂಗ ಮಾಡುತ್ತಿರುವುದು ಅಭಿನಂದನೀಯ ಎಂದು ಹೇಳಿದರು.

ಜಗತ್ತಿನ ಚಿಂತನೆಗಳನ್ನು ಈಗಲೂ ಕೂಡ ಉಳಿಸಿಕೊಳ್ಳಲು ಗ್ರಂಥಾಲಯದಿಂದ ಮಾತ್ರಸಾಧ್ಯವಾಗಿದೆ ದೇವನ್ನು ಕಾಣಲು ಜ್ಞಾನದಿಂದ ಮಾತ್ರ ಸಾಧ್ಯ. ಆದರೆ ಅದನ್ನು ಪಡೆಯುವ ಸ್ಥಳವೆಂದರೆ ಅದು ಗ್ರಂಥಾಲಯ ಎಂದು ರೇಖಾ ಅಭಿಪ್ರಾಯಪಟ್ಟರು.

ಬಹಳಷ್ಟು ಮಾಹಿತಿಗಳನ್ನು ಕಲೆ ಹಾಕಲು ಭಾರತದಲ್ಲಿರುವ ನಳಂದ ಗ್ರಂಥಾಲಯಕ್ಕೆ ವಿದೇಶದ ಜನರು ಬರುತ್ತಿದ್ದರು. ಅಂತಹ ಗ್ರಂಥ ಭಂಡಾರ ನಮ್ಮಲ್ಲಿತ್ತು ಎಂದು ಹೆಮ್ಮೆಯಿಂದ ಹೇಳಿದರು.



ಮಾಹಿತಿ ಮತ್ತು ಜ್ಞಾನದ ನಡುವೆ ವ್ಯತ್ಯಾಸವಿದೆ. ಆದರೆ ಈಗಿನ ಜನರು ಜ್ಞಾನಾರ್ಜನೆ ಬಿಟ್ಟು ಅಗತ್ಯವಿರುವಷ್ಟು ಮಾಹಿತಿಯನ್ನಷ್ಟೇ ಎದುರು ನೋಡುತ್ತಿದ್ದಾರೆ. ಇದರಿಂದ ಈಗಿನ ಮಾಹಿತಿ ವಿಜ್ಞಾನ ಯುಗದಲ್ಲಿ ಅನೇಕ ಸವಾಲುಗಳಿವೆ ಎಂದು ರೇಖಾ ಅಭಿಪ್ರಾಯಪಟ್ಟರು.

ನಿವೃತ್ತ ಗ್ರಂಥಪಾಲಕ ಡಾ.ಸಿ.ಪಿ.ರಾಮಶೇಷ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಂ.ಚಂದ್ರಶೇಖರ್, ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಸಿ.ವಿ.ಮನೋಜ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಸದ ಸ್ಥಾನದಿಂದ ಪ್ರತಾಪ್ ಸಿಂಹ ಅಮಾನತಿಗೆ ಆಗ್ರಹ



ಮೈಸೂರು, ಡಿ.15(ಎಂಟಿವೈ)– ಸಂಸತ್ ಭವನದಲ್ಲಿ ಕೆಲ ಯುವಕರಿಂದ ನಡೆದ ಅಹಿತಕರ ಘಟನೆಗೆ ಭದ್ರತಾ ವೈಫಲ್ಯವೇ ಕಾರಣವಾಗಿದ್ದು, ಸಂಸತ್ ಭವನಕ್ಕೆ ರಕ್ಷಣೆ ನೀಡಲು ಸಾಧ್ಯವಾಗದ ಕೇಂದ್ರ ಸರ್ಕಾರದಿಂದ ದೇಶದ ರಕ್ಷಣೆ ಸಾಧ್ಯವೇ ಎಂದು ನಗರ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್. ರಾಜೇಶ್ ಪ್ರಶ್ನಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಪ್ರತಾಪ್‌ಸಿಂಹ ಅವರಿಂದ ಪಾಸ್ ಪಡೆದಿರುವ ಆರೋಪಿಗಳು ಸಂಸತ್‌ಗೆ ನುಗ್ಗಿದ್ದಾರೆ. ಪ್ರಮುಖ ಆರೋಪಿ ಮನೋರಂಜನ್ ಹಾಗೂ ಸಂಸದರ ನಡುವಿನ ಸಂಬಂಧದ ಬಗ್ಗೆ ತನಿಖೆ ನಡೆಯಬೇಕು. ಇದೊಂದು ಪೂರ್ವ ನಿಯೋಜಿತ ಪ್ರಕರಣವೂ ಆಗಿರಬಹುದು ಎಂಬ ಶಂಕೆ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್‌ಸಿಂಹ ಅವರನ್ನು ಅಮಾನತಿನಲ್ಲಿರಿಸಬೇಕು. ಸಂಸತ್‌ನಲ್ಲಿ ಸಂಸತ್ ಭವನದ ಭದ್ರತಾ ವೈಫಲ್ಯದ ಬಗ್ಗೆ ಚರ್ಚೆ ನಡೆಯಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಿದ್ದರಾಜು, ಶಿವರುದ್ರ, ರಹೀಂ ಇದ್ದರು.

ಗೃಹೋಪಯೋಗಿ ವಸ್ತುಗಳ ಪ್ರದರ್ಶನ, ಮಾರಾಟ ಮೇಳ 'ಗೃಹಶೋಭೆ'ಗೆ ಚಾಲನೆ

ಹನ್ನೊಂದು ದಿನಗಳ ಕಾಲ ನಿತ್ಯ ಬೆಳಗ್ಗೆ 11 ರಿಂದ ರಾತ್ರಿ 9 ರವರೆಗೆ ಪ್ರವೇಶಾವಕಾಶ



ಮೈಸೂರು, ಡಿ.15(ಎಂಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ 'ಗೃಹಶೋಭೆ' ಅಂತಾರಾಷ್ಟ್ರೀಯ ಗೃಹೋಪಯೋಗಿ ವಸ್ತುಗಳ ಪ್ರದರ್ಶನ ಮತ್ತು ಮಾರಾಟದ ಮೇಳಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಡಿ.25ರವರೆಗೆ ನಡೆಯುವ ಬೃಹತ್ ಮೇಳಕ್ಕೆ ಸೈಮನ್ ಎಕ್ಸಿಬಿಟರ್ಸ್ ನಿರ್ದೇಶಕ ಎಂ.ಎಸ್.ನಾಗಚಂದ್ರ, ಡಾಲ್ಫಿನ್ ಬೇಕರ್ಸ್ ಸಿಇಓ ಮೊಹಮದ್ ನಿಝಾರ್ ಚಾಲನೆ ನೀಡಿದರು. 11 ದಿನಗಳ ಕಾಲ ನಿತ್ಯ ಬೆಳಗ್ಗೆ 11 ರಿಂದ ರಾತ್ರಿ 9 ಗಂಟೆವರೆಗೆ ತೆರೆದಿರುವ 'ಗೃಹಶೋಭೆ'ಯಲ್ಲಿ ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಅಂಗವಾಗಿ ಕೇಕ್‌ನಿಂದ ಮಾಡಿರುವ 'ಲೋಟಸ್ ಟೆಂಪಲ್', 10 ಅಡಿ ಎತ್ತರ 'ಕುತುಬ್ ಮಿನಾರ್', 'ಕೆಂಪು ಕೋಟೆ', 'ಚಂದ್ರಯಾನ–3', 'ರೈಲು', 'ಅಂಬಾರಿ ಆನೆ ಅರ್ಜುನ' ಮಾದರಿಯ ಕಲಾಕೃತಿಗಳು ಆಕರ್ಷಣೆಯಾಗಿವೆ.

100ಕ್ಕೂ ಹೆಚ್ಚು ಮಳಿಗೆ: ವಿವಿಧ ಬಗೆಯ ಪೀಠೋಪಕರಣಗಳನ್ನು ಕಡಿಮೆ ಬೆಲೆಗೆ ಹುಡುಕುತ್ತಿರುವ ಜನರು ಈ ಎಕ್ಸ್‌ಪೋಗೆ ಭೇಟಿ ನೀಡಬಹುದಾಗಿದೆ. ಎಲೆಕ್ಟ್ರಾನಿಕ್ಸ್ ಉಪಕರಣಗಳು, ಆಟೋ ಮೊಬೈಲ್ಸ್, ಪೀಠೋಪಕರಣಗಳು, ಪೇಂಟಿಂಗ್‌ಗಳು, ಕಾರ್ಪೆಟ್‌ಗಳು, ಮಾಡ್ಯುಲರ್ ಕಿಚನ್‌ಗಳಂತಹ ಬ್ರ್ಯಾಂಡೆಡ್ ಉತ್ಪನ್ನಗಳನ್ನು ಪ್ರದರ್ಶಿಸುವ 100 ಕ್ಕೂ ಹೆಚ್ಚು ಮಳಿಗೆಗಳು ಇಲ್ಲಿವೆ. ಭಾರೀ ರಿಯಾಯಿತಿ ಮತ್ತು ಆಕರ್ಷಕ ಉಡುಗೊರೆಗಳ ಜೊತೆಗೆ, ವಿವಿಧ ಉತ್ಪನ್ನಗಳ ಮೇಲೆ ಅನೇಕ ಕೊಡುಗೆಗಳು ಲಭ್ಯವಿದೆ.

ಮೈಸೂರು ಮಾತ್ರವಲ್ಲದೆ ರಾಜ್ಯಾದ್ಯಂತ ಜನರಲ್ಲಿ ವಿಶ್ವಾಸಾರ್ಹ ಮೂಡಿಸಿರುವ 'ಗೃಹಶೋಭೆ'ಯಲ್ಲಿ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸಲಾಗುವುದು. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ 'ಗೃಹಶೋಭೆ' ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ. ಅದರಂತೆ ಮೈಸೂರಿನ ಜನರ ನಿರೀಕ್ಷೆಯಂತೆ 'ಗೃಹ ಶೋಭೆ' ಬೃಹತ್ ಮೇಳ ಆರಂಭವಾಗಿದ್ದು, ಮಕ್ಕಳು ಮನೋರಂಜನಾ ಚಟುವಟಿಕೆಗಳು, ವಿವಿಧ ಬಗೆಯ ಆಹಾರ ಖಾದ್ಯಗಳು, ಸಣ್ಣ ಕಂಪನಿ ಉತ್ಪನ್ನಗಳಿಂದ ಹಿಡಿದು ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳು ಒಂದೇ ಸೂರಿನಡಿ ದೊರೆಯಲಿವೆ ಎಂದು ಸೈಮನ್ ಎಕ್ಸಿಬಿಟರ್ಸ್ ನಿರ್ದೇಶಕ ಎಂ.ಎಸ್.ನಾಗಚಂದ್ರ ತಿಳಿಸಿದರು.

ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದವರಿಗೆ ಉಗ್ರ ಶಿಕ್ಷೆಯಾಗಲಿದೆ

ಅಡಿಷನಲ್ ಎಸ್ಪಿ ಡಾ. ಬಿ.ಎನ್.ನಂದಿನಿ ಎಚ್ಚರಿಕೆ

ಮೈಸೂರು, ಡಿ.15(ಆರ್‌ಕೆ)–ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯವೆಸಗಿದವರಿಗೆ ಕಾಯ್ದೆಯನ್ವಯ ಉಗ್ರ ಶಿಕ್ಷೆಯಾಗಲಿದೆ ಎಂದು ಅಡಿಷನಲ್ ಎಸ್ಪಿ ಬಿ.ಎನ್.ನಂದಿನಿ ಅವರು ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಮಹಿಳೆಯರಿಗೆ ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯ ತಡೆಯುವ ಸಂಬಂಧ ಜಾಗೃತಿ ಮೂಡಿಸುವ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಕಚೇರಿ, ಖಾಸಗಿ ಸಂಸ್ಥೆ, ಕಚೇರಿ, ಉದ್ದಿಮೆಗಳಲ್ಲಿ 10ಕ್ಕಿಂತ ಹೆಚ್ಚು ಮಂದಿ ಮಹಿಳೆಯರು ಕೆಲಸ ಮಾಡುತ್ತಿದ್ದರೆ ಅಲ್ಲಿ ಕಡ್ಡಾಯವಾಗಿ ಲೈಂಗಿಕ ದೌರ್ಜನ್ಯ ವಿಚಾರಣಾ ಸಮಿತಿ ಇರಬೇಕು. ಯಾವುದೇ ಮಹಿಳಾ ಉದ್ಯೋಗಿಗೆ ಅಂತಹ ಘಟನೆಗಳಾದಲ್ಲಿ ಸಮಿತಿ ಸದಸ್ಯರು ದೂರು ಸ್ವೀಕರಿಸಿ, ತೀವ್ರ ವಿಚಾರಣೆ ನಡೆಸಿ ಆರೋಪಿ ವಿರುದ್ಧ ಆಂತರಿಕ ಶಿಸ್ತು ಕ್ರಮ ಜರುಗಿಸಬಹುದಾಗಿದೆ ಎಂದು ತಿಳಿಸಿದರು.



ಅಲ್ಲದೇ, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ–2013ರ ಕಾಯ್ದೆಯನ್ನು ಜಾರಿಗೆ ತಂದಿದ್ದು, ಅದರನ್ವಯ ಯಾವುದೇ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯವಷ್ಟೇ ಅಲ್ಲದೇ, ಆಕೆಯ ಭಾವನೆಗೆ ಧಕ್ಕೆಯಾಗುವಂತೆ ವರ್ತಿಸಿ ಮನಸ್ಸಿಗೆ ಘಾಸಿ ಉಂಟು ಮಾಡಿದರೂ ಈ ಕಾಯ್ದೆಯಡಿ ಪ್ರಕರಣ ದಾಖಲಿಸಬಹುದಾಗಿದೆ ಎಂದು ಡಾ. ನಂದಿನಿ ಅವರು ನುಡಿದರು.

ದುರುಗುಟ್ಟಿಕೊಂಡು ನೋಡುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದೂ ಶಿಕ್ಷಾರ್ಹವಾಗಿರುವುದರಿಂದ ಐಪಿಸಿ ಸೆಕ್ಷನ್ ಅಡಿ ಪ್ರಕರಣ ದಾಖಲಿಸಬೇಕಾಗುತ್ತದೆ ಎಂದ ಅವರು, ಕೆಲವೊಮ್ಮೆ ಈ ಕಾಯ್ದೆ ದುರುಪಯೋಗವಾಗುವ ಸಾಧ್ಯತೆ ಇರುವುದರಿಂದ ವಿಚಾರಣೆ ನಡೆಸುವ ತನಿಖಾಧಿಕಾರಿಗಳು ಎಚ್ಚರಿಕೆಯಿಂದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ವರದಿ ಮಾಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಕೆಲಸ ಮಾಡುವ ಸ್ಥಳದಲ್ಲಿ ಮಹಿಳಾ ಸಹಪಾಠಿಗಳೊಂದಿಗೆ ಸೌಹಾರ್ದ ಮನೋಭಾವನೆಯಿಂದ ವರ್ತಿಸಿ ಕಚೇರಿ ಅಥವಾ ಉದ್ದಿಮೆಗಳಲ್ಲಿ ಉತ್ತಮ ವಾತಾವರಣ ಸೃಷ್ಟಿಸುವುದು ಒಳಿತು. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳು, ಆನ್‌ಲೈನ್ ಸಂಪರ್ಕಗಳಿಂದಾಗಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಈ ಕಾಯ್ದೆ ಬಗ್ಗೆ ಜಾಗೃತರಾಗಿರಬೇಕೆಂದು ಸಲಹೆ ನೀಡಿದರು.

ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅವರು ಅಧ್ಯಕ್ಷತೆ ವಹಿಸಿದ್ದ ವಿಚಾರ ಸಂಕಿರಣದಲ್ಲಿ ಶ್ರೀರಂಗಪಟ್ಟಣ ತಾಲೂಕು, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಡಾ. ಎನ್.ಪ್ರಭಾ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಪ್ರೊ. ಲೋಲಾಕ್ಷಿ, ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಕೆಎಲ್‌ಎನ್ ಮೂರ್ತಿ, ಪರೀಕ್ಷಾಂಗ ಕುಲಸಚಿವ ಕೆ.ಬಿ.ಪ್ರವೀಣ್ ಹಾಗೂ ಡೀನ್ (ಶೈಕ್ಷಣಿಕ) ಪ್ರೊ. ಎನ್.ಲಕ್ಷ್ಮಿ ಅವರು ಭಾಗವಹಿಸಿದ್ದರು.

ಯುವಕನ ಕತ್ತು ಕುಯ್ದು ಹತ್ಯೆ

ಮಂಡ್ಯ, ಡಿ.15– ಕ್ಷುಲ್ಲಕ ಕಾರಣಕ್ಕೆ ದುಷ್ಕರ್ಮಿಗಳು ಯುವಕನ ಕತ್ತು ಕುಯ್ದು ಹತ್ಯೆ ಮಾಡಿರುವ ಘಟನೆ ನಗರದ ಫ್ಯಾಕ್ಟರಿ ವೃತ್ತದ ಪಕ್ಕದಲ್ಲಿರುವ ಬಾರ್ ಅಂಡ್ ರೆಸ್ಟೋರೆಂಟ್ ಬಳಿ ಗುರುವಾರ ರಾತ್ರಿ ನಡೆದಿದೆ.



ಮದ್ದೂರು ತಾಲೂಕಿನ ಕಡಿಲುವಾಗಿಲು ಗ್ರಾಮದ ನಿವಾಸಿ ಗುರುವಿಲಾಸ್(35) ಹತ್ಯೆಗೊಳಗಾದವನು. ಬಾರ್‌ನಲ್ಲಿ ಮದ್ಯ ಕುಡಿದ ನಂತರ ಜೊತೆಯಲ್ಲಿದ್ದವರ ನಡುವೆ ಕ್ಷುಲ್ಲಕ ವಿಚಾರಕ್ಕೆ ಜಗಳ ಶುರುವಾಗಿ, ಇದೇ ವೇಳೆ ಗುರುವಿಲಾಸ್ ಹತ್ಯೆ ನಡೆದಿದೆ.

ವಿವರ: ಕಡಿಲುವಾಗಿಲು ಗ್ರಾಮದ ಗುರುಮೂರ್ತಿ, ಜಯಮ್ಮ ದಂಪತಿ ಪುತ್ರ ಗುರುವಿಲಾಸ್ ಮಂಡ್ಯದ ಸ್ವರ್ಣಸಂದ್ರ ಬಡಾವಣೆ ಯುವತಿಯೊಬ್ಬಳನ್ನು ಪ್ರೀತಿಸಿ ಕಳೆದ 8 ವರ್ಷಗಳ ಹಿಂದೆ ಮದುವೆಯಾಗಿದ್ದು, ಒಂದು ಹೆಣ್ಣು ಮಗು ಸಹ ಇದೆ. ಮದುವೆ ನಂತರ ಬೆಂಗಳೂರಿನಲ್ಲಿ ಕಾರು ಚಾಲನೆ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದ ಗುರು ಮತ್ತು ಆತನ ಪತ್ನಿ ನಡುವೆ ಹೊಂದಾಣಿಕೆ ಇರಲಿಲ್ಲ. ದಂಪತಿ ನಡುವೆ ಆಗಾಗ್ಗೆ ಕಲಹ ನಡೆಯುತ್ತಿತ್ತು. ಹೀಗಾಗಿ ಆಕೆ ಗುರುವಿಲಾಸ್‌ನನ್ನು ತೊರೆದು ತವರು ಮನೆ ಸೇರಿಕೊಂಡಿದ್ದಳು. ಗುರುವಿಲಾಸ್ ಸಹ ಮಂಡ್ಯದ ಬಸವನಗುಡಿಯಲ್ಲಿದ್ದ ಅಕ್ಕನ ಮನೆಗೆ ಮರಳಿದ್ದು, ಇದೀಗ ಟಾಟಾ ಏಸ್ ಚಾಲಕನಾಗಿ ಗೆಜ್ಜಲಗೆರೆ ಗಾರ್ಮೆಂಟ್ಸ್‌ಗೆ ನೌಕರರನ್ನು ಕೊರೆದೊಯ್ಯುವ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಗುರುವಾರ ಸಂಜೆ ಫ್ಯಾಕ್ಟರಿ ವೃತ್ತದಲ್ಲಿರುವ ಸಂತೃಪ್ತಿ ಫ್ಯಾಮಿಲಿ ರೆಸ್ಟೋರೆಂಟ್ ಪಕ್ಕದ ಸಿದ್ದಾರ್ಥ ಕೊಸ್ಟಲ್ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಹೋಗಿದ್ದು, ಜೊತೆಯಲ್ಲಿ ಈತನ ಪರಿಚಿತರು ಇದ್ದರು. ರಾತ್ರಿ ತನಕ ಕುಡಿದಿದ್ದು, ಜೊತೆಯಲ್ಲಿದ್ದವರ ನಡುವೆ ಜಗಳ ನಡೆದು ವಿಕೋಪಕ್ಕೆ ತಿರುಗಿದಾಗ ತಪ್ಪಿಸಿಕೊಳ್ಳಲು ಗುರುವಿಲಾಸ್ ಬಾರ್‌ನಿಂದ ಹೊರ ಓಡಿದ್ದು, ಅಟ್ಟಾಡಿಸಿ ಕೊಂಡು ಬಂದ ದುಷ್ಕರ್ಮಿಗಳು ಐಸಿಐಸಿಐ ಬ್ಯಾಂಕ್ ಬಳಿ ಚಾಕುವಿನಿಂದ ಬೆನ್ನಿಗೆ ಇರಿದು, ಕತ್ತು ಕುಯ್ದು ಹತ್ಯೆ ಮಾಡಿ ಪರಾರಿಯಾಗಿದ್ದಾರೆ.

ಪತ್ನಿ ವಿಚಾರವಾಗಿ ಕಡಿಲುವಾಗಿಲು ಗ್ರಾಮದಲ್ಲಿ ಇತ್ತೀಚೆಗೆ ಯುವಕನೊಬ್ಬನ ಮೇಲೆ ಗುರುವಿಲಾಸ್ ಹಲ್ಲೆ ಮಾಡಿದ್ದ. ಅಷ್ಟೇ ಅಲ್ಲದೆ ಇತ್ತೀಚಿನ ದಿನಗಳಲ್ಲಿ ರೌಡಿಗಳ ಸಹವಾಸ ಮಾಡಿದ್ದನು. ಗುರುವಿಲಾಸ್ ಹತ್ಯೆಗೆ ನಿಖರ ಕಾರಣವೇ ನೆಂಬುದು ಪೊಲೀಸರ ತನಿಖೆ ನಂತರ ಗೊತ್ತಾಗಬೇಕಿದೆ. ಪೂರ್ವ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮಿಮ್ಸ್ ಆಸ್ಪತ್ರೆಗೆ ರವಾನಿಸಿ ಬಳಿಕ ವಾರಸುದಾರರಿಗೆ ಶವವನ್ನು ಹಸ್ತಾಂತರಿಸಿ ದ್ದಾರೆ. ಈ ಸಂಬಂಧ ಪೂರ್ವ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿದ್ಯುತ್ ಸ್ಪರ್ಶ: ರೈತ ಸ್ಥಳದಲ್ಲೇ ಸಾವು

ಕೆ.ಆರ್.ಪೇಟೆ, ಡಿ.15– ವಿದ್ಯುತ್ ಸ್ಪರ್ಶದಿಂದ ರೈತನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಬೂಕನಕೆರೆ ಹೋಬಳಿ ಅರೆಬೂವನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಅರೆಬೂವನಹಳ್ಳಿ ಗ್ರಾಮದ ನಿವಾಸಿ ಮಾಳೇಗೌಡರ ಪುತ್ರ ಎ.ಎಂ.ಮಂಜುನಾಥ್(55) ಸಾವನ್ನಪ್ಪಿದವರು. ಈತ ಗ್ರಾಮದ ಎಲ್ಲೆಯಲ್ಲಿರುವ ತಮ್ಮ ಜಮೀನಿನಲ್ಲಿ ಹಸುಗಳಿಗೆ ಮೇವು ಕುಯ್ಯುತ್ತಿದ್ದ ವೇಳೆ ಟಿಸಿಯಿಂದ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ಸ್ಪರ್ಶವಾಗಿ ಮಂಜುನಾಥ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಮಸ್ಥರು ಹಾಗೂ ಮೃತ ರೈತನ ಸಂಬಂಧಿಕರು ಅಪಾರ ಸಂಖ್ಯೆಯಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿ, ಚೆಸ್ಕಾಂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರೈತ ಮುಖಂಡ ಎಂ.ವಿ.ರಾಜೇಗೌಡ ಮಾತನಾಡಿ, ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಕರ್ತವ್ಯ ಲೋಪದಿಂದಾಗಿ ಇಂತಹ ವಿದ್ಯುತ್ ಅವಘಡಗಳು ತಾಲೂಕಿನಲ್ಲಿ ಸಾಕಷ್ಟು ನಡೆದಿದ್ದು, ರೈತರು ತಮ್ಮ ಅಮೂಲ್ಯ ಜೀವವನ್ನು ಕಳೆದುಕೊಂಡಿದ್ದಾರೆ.

ಚೆಸ್ಕಾಂ ಅಧಿಕಾರಿಗಳು ಶಿಥಿಲಗೊಂಡಿರುವ ವಿದ್ಯುತ್ ಕಂಬ ಹಾಗೂ ತಂತಿಗಳನ್ನು ಬದಲಾಯಿಸದಿರುವ ಕಾರಣ ರೈತರು ಬಲಿಯಾಗುವಂತಾಗಿದೆ. ರೈತರ ಜೀವಕ್ಕೆ ಕೇವಲ 5 ಲಕ್ಷ ರೂ. ಬೆಲೆ ಕಟ್ಟುತ್ತಿರುವ ಚೆಸ್ಕಾಂ ಇಲಾಖೆ ಇನ್ನು ಮುಂದಾದರೂ ತಾಲೂಕಿನಾದ್ಯಂತ ಶಿಥಿಲಗೊಂಡಿರುವ ವಿದ್ಯುತ್ ಕಂಬಗಳನ್ನು ಬದಲಾಯಿಸಿ ರೈತರ ಜೀವ ಉಳಿಸಬೇಕು. ಇಲ್ಲದಿದ್ದರೇ ಚೆಸ್ಕಾಂ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

5 ಲಕ್ಷ ರೂ. ಚೆಕ್ ವಿತರಣೆ: ರೈತರ ಪ್ರತಿಭಟನೆಗೆ ಮಣಿದ ಚೆಸ್ಕಾಂ ಇಲಾಖೆ ಅಧಿಕಾರಿಗಳು ಮೃತ ರೈತ ಮಂಜುನಾಥ್ ಕುಟುಂಬಕ್ಕೆ 5 ಲಕ್ಷ ರೂಪಾಯಿಗಳ ಚೆಕ್ ವಿತರಣೆ ಮಾಡಿದರು. ಈ ಸಂದರ್ಭ ರೈತ ಮುಖಂಡರಾದ ನಾಗಣ್ಣ ಇತರರಿದ್ದರು.

ಪೌತಿ ಖಾತಾ ಆಂದೋಲನ


ಮಂಡ್ಯ, ಡಿ.15– ತಾಲೂಕಿನ ಹನಕೆರೆ ಗ್ರಾಪಂ ಆವರಣದಲ್ಲಿ ಕಂದಾಯ ಇಲಾಖೆಯಿಂದ ನಡೆದ ಪೌತಿ ಖಾತೆ ಆಂದೋಲನಕ್ಕೆ ತಹಸೀಲ್ದಾರ್ ಡಾ.ಶಿವಕುಮಾರ ಬಿರಾದರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಕುಟುಂಬದ ಮುಖ್ಯಸ್ಥರು, ಸದಸ್ಯರು ಮರಣ ಹೊಂದಿದ ಬಳಿಕ ಆರ್‌ಟಿಸಿ ಬದಲಾವಣೆಯಾಗದೇ ಸರ್ಕಾರದ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅದನ್ನು ಸರಿಪಡಿಸಲು ವಾರಕ್ಕೊಂದು ದಿನ ಗ್ರಾಪಂಗಳಿಗೆ ತೆರಳಿ ಪೌತಿ ಖಾತಾ ಆಂದೋಲನ ಹಮ್ಮಿಕೊಂಡಿರುವುದಾಗಿ ತಿಳಿಸಿದರು. ಇದೇ ವೇಳೆ ಪೌತಿ ಖಾತೆ ಸೇರಿದಂತೆ 50 ಅರ್ಜಿಗಳನ್ನು ಸ್ವೀಕರಿಸಲಾಯಿತು. ಸಾಮಾಜಿಕ ಭದ್ರತಾ ಯೋಜನೆಯ ಫಲಾನುಭವಿಗಳಿಗೆ ಪತ್ರ ನೀಡಲಾಯಿತು.

ಕೆಆರ್‌ಎಸ್‌ನಲ್ಲಿ ಹೂಳು, ಮಾಡರ್ನ್ ಸ್ಟ್ಯಾಂಡರ್ಡ್ ಪರಿಶೀಲಿಸಲು

ಜಲಾಶಯಕ್ಕೆ ತಜ್ಞರ ಕಳುಹಿಸಲು ಡಿಸಿಎಂ ಆದೇಶ

ಬೆಳಗಾವಿ/ಮಂಡ್ಯ, ಡಿ.15– ಕೆಆರ್‌ಎಸ್ ಜಲಾಶಯದಲ್ಲಿ ಹೂಳು ತುಂಬಿದೆಯೇ? ಮಾಡರ್ನ್ ಸ್ಟ್ಯಾಂಡರ್ಡ್‌ಗೆ ಅಣೆಕಟ್ಟೆ ಹೊಂದಿಕೆಯಾಗುವಂತಿದೆಯೇ? ಎಂಬುದನ್ನು ತಿಳಿಯಲು ತುರ್ತಾಗಿ ತಜ್ಞರ ತಂಡ ಕಳುಹಿಸಿ, ಅಧ್ಯಯನ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಉಪ ಮುಖ್ಯಮಂತ್ರಿ ಹಾಗೂ ನೀರಾವರಿ ಇಲಾಖೆ ಸಚಿವ ಡಿ.ಕೆ.ಶಿವಕುಮಾರ್ ಆದೇಶಿಸಿದ್ದಾರೆ.



ಬೆಳಗಾವಿ ಅಧಿವೇಶನದಲ್ಲಿ ಶಾಸಕರಾದ ಎ.ಬಿ. ರಮೇಶ್‌ಬಾಬು ಬಂಡಿಸಿದ್ದೇಗೌಡ ಹಾಗೂ ದಿನೇಶ್ ಗೂಳಿಗೌಡ ಅವರು ಸಲ್ಲಿಸಿದ ಮನವಿಗೆ ಸ್ಪಂದಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತಕ್ಷಣ ನೀರಾವರಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಈ ಕುರಿತು ಸೂಚನೆ ನೀಡಿದ್ದು, ತಜ್ಞರ ತಂಡ ಕಳಿಸಿ, ಅಧ್ಯಯನ ನಡೆಸಿ, ಸೂಕ್ತ ಕ್ರಮ ವಹಿಸುವಂತೆ ಆದೇಶಿಸಿದ್ದಾರೆ.

ಡ್ಯಾಂನಲ್ಲಿ ಈಗಲೂ 49.50 ಟಿಎಂಸಿ ನೀರು ಸಂಗ್ರಹವಾಗುತ್ತಿದೆಯೇ? ಸೀಪೇಜ್ ನಿರ್ವಹಣೆ, ಗೇಟ್ ಸುಸ್ಥಿತಿ ಸೇರಿ ಇನ್ನಿತರ ಅಂಶಗಳನ್ನು ಪರಿಶೀಲಿಸಬೇಕು. ಎಂಬುದಾಗಿ ಶಾಸಕರಾದ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ ಅವರು ಮನವಿಯಲ್ಲಿ ಪ್ರಸ್ತಾಪಿಸಿದ್ದರು. ಇದಕ್ಕೆ ಸ್ಪಂದಿಸಿದ ಡಿಸಿಎಂ ಡಿ.ಕೆ. ಶಿವಕುಮಾರ್ ಈ ಆದೇಶ ನೀಡಿದ್ದಾರೆ.

ಮನವಿಯಲ್ಲೇನಿದೆ: ಕಾವೇರಿ ಕನ್ನಡ ನಾಡಿನ ಜೀವನದಿಯಾಗಿದೆ. ಇಲ್ಲಿ ಕಟ್ಟಲಾದ ಅಣೆಕಟ್ಟೆ ಈ ಭಾಗದ ರೈತರಿಗೆ ಜೀವನ ನೀಡಿದೆ. ಮಂಡ್ಯ ಜಿಲ್ಲೆಯ ಕನ್ನಂಬಾಡಿ ಬಳಿ ಹೇಮಾವತಿ, ಲಕ್ಷ್ಮಣತೀರ್ಥ ನದಿಗಳ ಸಂಗಮ ಬಿಂದುವಿನಿಂದ ಕೆಳಗೆ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಜಲಾಶಯವೇ ಕನ್ನಂಬಾಡಿ ಕಟ್ಟೆ ಅಥವಾ ಕೃಷ್ಣರಾಜಸಾಗರ. ಇದು ಕೆಆರ್‌ಎಸ್ ಎಂದು ಸುಪ್ರಸಿದ್ಧವಾಗಿದೆ.

1911ರಲ್ಲಿ ಬ್ರಿಟಿಷರ ಕಾಲದಲ್ಲಿ ಅಣೆಕಟ್ಟೆ ನಿರ್ಮಾಣ ಕಾರ್ಯ ಪ್ರಾರಂಭವಾಗಿತ್ತು. 1932ರಲ್ಲಿ ಮೈಸೂರಿನ ಮಹಾರಾಜ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಪೂರ್ಣಗೊಂಡಿತು. ಶತಮಾನಕ್ಕೆ ಹತ್ತಿರವಾಗುತ್ತಿರುವ ದೇಶದ ಅತ್ಯಂತ ಪ್ರಮುಖ ಹಾಗೂ ಹಳೆಯ ಅಣೆಕಟ್ಟೆ ಇದಾಗಿದ್ದು, ಮಂಡ್ಯ ಜಿಲ್ಲೆಯ ವ್ಯವಸಾಯ, ಕುಡಿಯುವ ನೀರು, ಅಲ್ಲದೆ ಮೈಸೂರು, ಬೆಂಗಳೂರು ಮಹಾನಗರಗಳು, ಬೆಂಗಳೂರು, ಗ್ರಾಮಾಂತರ, ಮೈಸೂರು ಜಿಲ್ಲೆಗಳ ಕುಡಿಯುವ ನೀರಿಗೆ ಇದೇ ಅಣೆಕಟ್ಟೆ ಅವಲಂಬಿಸಲಾಗಿದೆ. ಇದರಿಂದ ಅಣೆಕಟ್ಟೆ ಸುರಕ್ಷತೆ, ಕಾರ್ಯ ನಿರ್ವಹಣಾ ಸಾಮರ್ಥ್ಯದ ಬಗ್ಗೆ ಪರಿಶೀಲಿಸಿ, ಸೂಕ್ತ ಮುನ್ನೆಚ್ಚರಿಕಾ ಕ್ರಮ ವಹಿಸುವ ಅಗತ್ಯವಿದೆ. ಅಲ್ಲದೇ ಅಣೆಕಟ್ಟೆ ನಿರ್ಮಾಣ ಕಾಲದಲ್ಲಿ "ಹೈ ಡ್ಯಾಂ ತಂತ್ರಜ್ಞಾನ" ಇರಲಿಲ್ಲ. ಇದರಿಂದ ಅಣೆಕಟ್ಟೆ ದೊಡ್ಡ ಗಟ್ಟಿ ಇಡೀ ಕಲ್ಲುಗಳಿಂದ ನಿರ್ಮಾಣವಾಗಿದೆ. ಹಾಗಾಗಿ ಪ್ರಸ್ತುತ ಆಧುನಿಕ ತಂತ್ರಜ್ಞಾನದೊಂದಿಗೆ ಅಣೆಕಟ್ಟೆ ಸುಭದ್ರಗೊಳಿಸಲು ಕ್ರಮ ವಹಿಸುವಂತೆ ಕೋರಲಾಗಿದೆ.

ಈ ಅಣೆಕಟ್ಟೆಯಲ್ಲಿ ಡ್ರೈನೇಜ್ ಗ್ಯಾಲರಿ ಇಲ್ಲದಿರುವುದರಿಂದ ಸೀಪೇಜ್ ನಿರ್ವಹಣೆ ಸರಿಯಾಗಿ ಆಗುತ್ತಿದೆಯೇ ಎಂಬ ಬಗ್ಗೆ ತಜ್ಞರಿಂದ ಪರೀಕ್ಷಿಸಿ ವರದಿ ಪಡೆದು, ತೊಂದರೆ ಇದ್ದರೆ, ಸರಿಪಡಿಸುವ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. ಅಣೆಕಟ್ಟೆಯಲ್ಲಿ ನೀರು ತುಂಬಿದಾಗ ಹೊರಬಿಡಲು ಬಳಸುವ ಗೇಟ್‌ಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ ಎಂದು ಕಾಲಕಾಲಕ್ಕೆ ಪರಿಶೀಲಿಸಬೇಕು ಎಂದು ಮನವಿ ಮಾಡಿದ್ದಾರೆ.

ಹ್ಯಾಂಗ್ ಮಾಡಿರುವ ಗೇಟ್‌ಗಳನ್ನು ಆಧುನಿಕ ತಂತ್ರಜ್ಞಾನಗಳೊಂದಿಗೆ ಬದಲಾಯಿಸುವ ಕೆಲಸವಾಗುತ್ತಿದೆ. ಈ ಕೆಲಸ ಸರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ಪರೀಕ್ಷಿಸಲು, ಡ್ರೈ ರನ್ ಮಾಡಿ, ಗೇಟ್‌ಗಳು ಒತ್ತಡ ತಡೆದುಕೊಳ್ಳಬಲ್ಲವೇ ಎಂಬುದನ್ನು ಪರಿಶೀಲಿಸಲು ತಂತ್ರಜ್ಞರ ತಂಡವನ್ನು ಕಳುಹಿಸಿಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಅಣೆಕಟ್ಟೆಯ ಕಾರ್ಯ ನಿರ್ವಹಣೆ, ಸುರಕ್ಷತೆಗೆ ಹೆಚ್ಚಿನ ಆದ್ಯತೆ ಕೊಡಬೇಕು. ಮಳೆಗಾಲದಲ್ಲಿ ಪ್ರವಾಹ ಬಂದಾಗ ಉಂಟಾಗುವ ಅನಾಹುತಗಳನ್ನು ತಪ್ಪಿಸಲು ಮುಂಚಿತವಾಗಿ ಯೋಜಿಸಿ, ಯೋಚಿಸಿ ಮುನ್ನೆಚ್ಚರಿಕಾ ಕ್ರಮವನ್ನು ವಹಿಸಬೇಕು. ಅಣೆಕಟ್ಟೆ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದೆಯೇ ಎಂದು ಸರ್ವೇ ಮಾಡಿ, ಹಾಗೇನಾದರೂ ಆಗಿದ್ದಲ್ಲಿ ತೆರವು ಮಾಡಲು ಕ್ರಮ ವಹಿಸಬೇಕು. ಈ ಭಾಗದ ಲಕ್ಷಾಂತರ ಕುಟುಂಬಗಳ ಜೀವನಾಧಾರವಾಗಿ ಈ ಅಣೆಕಟ್ಟೆ ಇರುವುದರಿಂದ ಸರ್ಕಾರ ಇದರ ಸುರಕ್ಷತೆ ಹಾಗೂ ಸುಸ್ಥಿತಿಯ ಬಗ್ಗೆ ಆದ್ಯತೆಯ ಮೇಲೆ ಗಮನ ಹರಿಸಬೇಕು ಎಂದು ಶಾಸಕದ್ವಯರು ಮನವಿ ಮಾಡಿದ್ದಾರೆ.

ಪುರಸಭೆ ಉಪ ಚುನಾವಣೆ: ಹಲವರಿಂದ ನಾಮಪತ್ರ ಸಲ್ಲಿಕೆ



ಪಾಂಡವಪುರ, ಡಿ.15– ಪಟ್ಟಣದ ಪುರಸಭೆಯ 2 ಮತ್ತು 9ನೇ ವಾರ್ಡ್ ಉಪ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾದ ಶುಕ್ರವಾರ ಹಲವು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.

2ನೇ ವಾರ್ಡ್: ಯಶ್ವಂತ್ ಕುಮಾರ್(ಜೆಡಿಎಸ್), ಮಧು(ಬಿಜೆಪಿ), ಬಿ.ಗೀತಾ (ಪಕ್ಷೇತರ), ಸ್ವಾಮಿ.ಜಿ (ಸರ್ವೋದಯ ಕರ್ನಾಟಕ–ಕಾಂಗ್ರೆಸ್), ಎನ್.ಪಿ. ರೂಪ(ಕೆಆರ್‌ಎಸ್ ಪಕ್ಷ), ಆರ್.ರಾಜೇಂದ್ರ(ಸರ್ವೋದಯ ಕರ್ನಾಟಕ–ಕಾಂಗ್ರೆಸ್) ನಾಮಪತ್ರ ಸಲ್ಲಿಸಿದ್ದಾರೆ.

9ನೇ ವಾರ್ಡ್: ಜ್ಯೋತಿಲಕ್ಷ್ಮಿ(ಜೆಡಿಎಸ್), ಎನ್. ಸೋಮಶೇಖರ್(ಬಿಜೆಪಿ), ಎಸ್.ರಾಜು (ಸರ್ವೋದಯ ಕರ್ನಾಟಕ–ಕಾಂಗ್ರೆಸ್), ಸಂತೋಷ್(ಸರ್ವೋದಯ ಕರ್ನಾಟಕ–ಕಾಂಗ್ರೆಸ್), ಜ್ಯೋತಿಲಕ್ಷ್ಮಿ(ಪಕ್ಷೇತರ) ನಾಮಪತ್ರ ಸಲ್ಲಿಸಿದರು.

ಪತ್ರಕರ್ತರಿಂದ ನಾಮಪತ್ರ ಸಲ್ಲಿಕೆ: ಪುರಸಭೆಯ 2ನೇ ವಾರ್ಡ್‌ನಿಂದ ಪತ್ರಕರ್ತ ಮಧು ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರೆ, 9ನೇ ವಾರ್ಡ್‌ನಿಂದ ಎಸ್.ರಾಜು ಸರ್ವೋದಯ ಕರ್ನಾಟಕ–ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಗೆಲ್ಲುವ ವಿಶ್ವಾಸ: ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ಮಲ್ಲೇಶ್ ಮಾತನಾಡಿ, ಪುರಸಭೆಯ 2 ಮತ್ತು 9ನೇ ವಾರ್ಡ್‌ನ ಜೆಡಿಎಸ್ ಸದಸ್ಯರು ನಿಧನರಾದ ಹಿನ್ನೆಲೆಯಲ್ಲಿ ಚುನಾವಣೆ ನಡೆಯುತ್ತಿದೆ. ಎರಡೂ ವಾರ್ಡ್‌ನಲ್ಲೂ ಜೆಡಿಎಸ್ ಬಲಿಷ್ಠವಾಗಿದೆ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಪಟ್ಟಣದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಜೊತೆಗೆ ವಾರ್ಡ್‌ನ ಹಿಂದಿನ ಸದಸ್ಯರು ಸಹ ವಾರ್ಡ್‌ನ ಅಭಿವೃದ್ಧಿಗಾಗಿ ಶ್ರಮಿಸಿದ್ದು, ಎರಡು ವಾರ್ಡ್‌ಗಳಿಂದಲೂ ಸಹ ಜೆಡಿಎಸ್ ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಟ್ಟು ಪದ್ಧತಿಯಲ್ಲಿ ನೀರು ಹರಿಸುವಂತೆ ಮನವಿ

ಶ್ರೀರಂಗಪಟ್ಟಣ, ಡಿ.15– ಬೆಳೆದು ನಿಂತಿರುವ ಬೆಳೆಗಳು ಹಾಗೂ ಕುಡಿಯುವ ನೀರಿಗಾಗಿ ಕಟ್ಟು ಪದ್ಧತಿಯಲ್ಲಿ ನೀರು ಹರಿಸುವಂತೆ ಭೂಮಿ ತಾಯಿ ಹೋರಾಟ ಸಮಿತಿ ಸದಸ್ಯರು ನೀರಾವರಿ ನಿಗಮದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಭೂಮಿ ತಾಯಿ ಹೋರಾಟ ಸಮಿತಿ ಮುಖಂಡ ಕೆ.ಎಸ್.ನಂಜುಂಡೇಗೌಡರ ನೇತೃತ್ವದಲ್ಲಿ ಕೆ.ಆರ್. ಸಾಗರ ಕಾವೇರಿ ನೀರಾವರಿ ನಿಗಮದ ಕಚೇರಿಗೆ ತೆರಳಿದ ಸದಸ್ಯರು, ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣ ಕುಸಿದಿದೆ. ಕಾವೇರಿ ನದಿ ಪಾತ್ರದಲ್ಲಿ ಬೆಳೆದು ನಿಂತಿರುವ ಬೆಳೆಗಳು, ಜನಜಾನುವಾರುಗಳಿಗೆ ಕುಡಿಯುವ ನೀರು ಬೇಕಾಗಿದೆ. ಹೀಗಾಗಿ ಅಗತ್ಯಕ್ಕೆ ಅನುಗುಣವಾಗಿ ಕಟ್ಟು ಪದ್ಧತಿಯಲ್ಲಿ ನೀರು ಹರಿಸುವಂತೆ ಮನವಿ ಮಾಡಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರ ಫಾರುಕ್ ಅಭು ಮಾತನಾಡಿ, ನೀರಿನ ಸಮಸ್ಯೆ ಕುರಿತು ಡಿ.19 ರಂದು ನೀರಾವರಿ ಸಲಹಾ ಸಮಿತಿ ಸಭೆ ನಡೆಯಲಿದ್ದು, ನೀರು ಹರಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಭೂಮಿ ತಾಯಿ ಹೋರಾಟ ಸಮಿತಿ ಅಧ್ಯಕ್ಷ ಬಿ.ಸಿ.ಕೃಷ್ಣೇಗೌಡ, ಮುಖಂಡರಾದ ಮಹದೇವಣ್ಣ, ನಾಗರಾಜು, ರವಿಲಕ್ಷ್ಮಣ, ರಮೇಶ್, ವಸಂತಕುಮಾರ್, ರಾಮಕೃಷ್ಣ, ರಾಮಚಂದ್ರು, ಸ್ವಾಮಿ, ವಿಷಕಂಠ ಸೇರಿದಂತೆ ಹಲವರಿದ್ದರು.

ಸಂಸದ ಸ್ಥಾನದಿಂದ ಪ್ರತಾಪ್‌ಸಿಂಹ ವಜಾಕ್ಕೆ ಆಗ್ರಹಿಸಿ ಸಹಿ ಸಂಗ್ರಹ



ಸಂಸದ ಸ್ಥಾನದಿಂದ ಪ್ರತಾಪ್‌ಸಿಂಹ ವಜಾಕ್ಕೆ ಆಗ್ರಹಿಸಿ ಸಹಿ ಸಂಗ್ರಹ

ಮೈಸೂರು, ಡಿ.15(ಜಿಎ)– ನೂತನ ಸಂಸತ್ ಭವನದ ಮೇಲೆ ದಾಳಿ ಮಾಡಿದವರಿಗೆ ಪಾಸ್ ನೀಡಿದ ಸಂಸದ ಪ್ರತಾಪಸಿಂಹ ಅವರನ್ನು ಸಂಸದ ಸ್ಥಾನದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ನಗರದ ಏಕಲವ್ಯ ವೃತ್ತದಲ್ಲಿ ಒಂದು ಕೈಯಲ್ಲಿ ಬಾಂಬ್, ಇನ್ನೊಂದು ಕೈಯಲ್ಲಿ ಸಂಸತ್ ಭವನದ ಪಾಸ್ ಹಿಡಿದು ಕೆಳಗೆ ದೇಶದ್ರೋಹಿ ಎಂಬ ಬರಹವಿರುವ ಪ್ರತಾಪಸಿಂಹ ಅವರ ಭಾವಚಿತ್ರ ಪ್ರದರ್ಶಿಸಿ ಸಹಿ ಸಂಗ್ರಹ ಮಾಡಲಾಯಿತು. ಈ ವೇಳೆ ಫ್ಲೆಕ್ಸ್ ತೆರವುಗೊಳಿಸಲು ಪಾಲಿಕೆ ಸಿಬ್ಬಂದಿ ಮುಂದಾಗಿದ್ದು ಸಿಬ್ಬಂದಿ ಜೊತೆ ಹಿಂದುಳಿದ ಜಾಗೃತಿ ವೇದಿಕೆ ಸದಸ್ಯರ ಮಾತಿನ ಚಕಮಕಿ ನಡೆಸಿದ ಘಟನೆ ನಡೆಯಿತು. ಪ್ರತಿಭಟನೆ ಮಧ್ಯೆಯೇ ಬ್ಯಾನರ್‌ಅನ್ನು ಪಾಲಿಕೆ ಸಿಬ್ಬಂದಿಗಳ ಮೂಲಕ ಪೊಲೀಸ್ ಇಲಾಖೆ ತೆರವುಗೊಳಿಸಿತು. ಈ ವೇಳೆ ಮಾತನಾಡಿದ ರಾಜ್ಯ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಸಂಸದ ಪ್ರತಾಪ್ ಸಿಂಹರನ್ನು ಸಂಸದ ಸ್ಥಾನದಿಂದ ವಜಾ ಮಾಡಿ ಬಂಧನಕ್ಕೆ ಒಳಪಡಿಸಿ ವಿಚಾರಣೆ ನಡೆಸಬೇಕು. ಸಿಬ್ಬಂದಿಗಳು ಪಾಸ್‌ಗಳನ್ನು ಮಾರಾಟ ಮಾಡಿದ್ದಾರೆ ಎಂಬ ಅವಮಾನವಿದ್ದು, ಅವರನ್ನು ವಿಚಾರಣೆಗೆ ಒಳಪಡಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ಜೆ.ಜೆ.ಆನಂದ್, ಆರ್.ಕೆ.ರವಿ, ಯೋಗೇಶ್ ಉಪ್ಪಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.



ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್. ಶಿವರಾಮು ವಿರುದ್ಧ ದೂರು ಸಲ್ಲಿಸಿದ ಬಿಜೆಪಿ ಮುಖಂಡರು

ಶಿವರಾಮ್ ವಿರುದ್ಧ ದೂರು

ಅನುಮತಿ ಪಡೆಯದೇ ಸಂಸದ ಪ್ರತಾಪಸಿಂಹ ವಿರುದ್ಧ ಸಹಿ ಸಂಗ್ರಹಣೆ ನೆಪದಲ್ಲಿ ಸಂಸದರ ಭಾವಚಿತ್ರ ವನ್ನು ಉಗ್ರಗಾಮಿಯ ರೀತಿ ಕೈಯಲ್ಲಿ ಬಾಂಬ್ ಹಿಡಿದಿರುವಂತೆ ಎಡಿಟ್ ಮಾಡಿ ಮೈಸೂರಿನಲ್ಲಿ ಕೋಮು ಗಲಭೆಗೆ ಪ್ರಚೋದಿಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಎನ್.ಆರ್. ಕ್ಷೇತ್ರದ ಮಾಜಿ ಅಧ್ಯಕ್ಷ ಆನಂದ್ ಅವರು ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು ವಿರುದ್ಧ ದೂರು ಸಲ್ಲಿಸಿದರು.

ಈ ಕುರಿತು ಮಾಧ್ಯಮಗಳೊಂದಿಗೆ ಆನಂದ್ ಮಾತನಾಡಿ, ಸಂಸದರ ವಿರುದ್ಧ ದ್ವೇಷ ಕಾರುತ್ತಿರುವುದು ಇದು ಹೊಸತೇನಲ್ಲ. ಆದರೆ ಈ ಬಾರಿ ಅತ್ಯಂತ ಹೇಯಕರವಾಗಿ ಬಿಂಬಿಸಿದ್ದಾರೆ. ಮೈಸೂರಿನವರು ಎಂಬ ವಿಶ್ವಾಸದ ಮೇಲೆ ಸಂಸದರು ಪಾಸ್ ನೀಡಿದ್ದಾರೆ ಹೊರತು ಇಂತಹ ಯಾವುದೇ ಕುಕೃತ್ಯಗಳಿಗೆ ಅವರು ಎಂದಿಗೂ ಬೆಂಬಲಿಸಿಲ್ಲ ಎಂದರು.

ಪ್ರತಾಪ್‌ಸಿಂಹ ಭಾವಚಿತ್ರವನ್ನು ವಿಕೃತವಾಗಿ ಎಡಿಟ್ ಮಾಡಿ ದೇಶದ್ರೋಹಿ ಎಂದು ಬರೆದು, ಜನಪ್ರತಿನಿಧಿಯನ್ನು ತೇಜೋವಧೆ ಮಾಡಿರುವುದು ಖಂಡನೀಯ. ಈ ಕೂಡಲೇ ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈ ವೇಳೆ ಬಿಜೆಪಿ ಹಿಂದುಳಿದ ವರ್ಗದ ನಗರ ಪ್ರಧಾನ ಕಾರ್ಯದರ್ಶಿ ಮುನಿರತ್ನ, ಎನ್.ಆರ್. ಕ್ಷೇತ್ರದ ಉಪಾಧ್ಯಕ್ಷರಾದ ಪದ್ಮನಾಭ, ಜಯಸಿಂಹ ಶ್ರೀಧರ್, ವಕೀಲರಾದ ಗೋಕುಲ್ ಗೋವರ್ಧನ್, ಹೇಮಂತ್ ಕುಮಾರ್, ಉಮೇಶ್, ಮನೋಜ್, ಸಂದೀಪ, ಧರ್ಮೇಂದ್ರ ಇದ್ದರು.

ಮಧುವನ ಬಳಿಯ ಪಾಳು ತೋಟದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಅಪರಿಚಿತನ ಶವ ಪತ್ತೆ

ಮೈಸೂರು, ಡಿ.15(ಎಸ್‌ಬಿಡಿ)– ನೇಣು ಬಿಗಿದ ಸ್ಥಿತಿಯಲ್ಲಿ ಅಪರಿಚಿತನ ಶವ ಮೈಸೂರಿನ ಮಧುವನ ಬಳಿಯ ಪಾಳುತೋಟದಲ್ಲಿ ಶುಕ್ರವಾರ ರಾತ್ರಿ ಪತ್ತೆಯಾಗಿದ್ದು, ಆತ ಸಾವನ್ನಪ್ಪಿ ಮೂರ್‍ನಾಲ್ಕು ದಿನಗಳಾಗಿರಬಹುದು ಎನ್ನಲಾಗಿದೆ.

ಮೈಸೂರು–ನಂಜನಗೂಡು ಹೆದ್ದಾರಿಗೆ ಹೊಂದಿಕೊಂಡಂತಿರುವ ಮಧುವನ ಬಳಿಯ ಖಾಸಗಿ(ಕೋಡೈಸ್ ಕಂಪನಿ) ತೋಟದಲ್ಲಿ ಸುಮಾರು 35–40 ವರ್ಷದ ವ್ಯಕ್ತಿಯ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಕೃಷ್ಣರಾಜ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಹುಡುಗನೊಬ್ಬ ತೋಟದೊಳಗಿದ್ದ ತಮ್ಮ ಹಸು ಹೊಡೆದುಕೊಂಡು ಬರಲೆಂದು ಹೋಗಿದ್ದಾಗ ಕೆಟ್ಟ ವಾಸನೆ ಬಂದಿದ್ದರಿಂದ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ. ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ಕೃಷ್ಣರಾಜ ಠಾಣೆ ಇನ್‌ಸ್ಪೆಕ್ಟರ್ ನಾಗೇಗೌಡರು ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಮರದ ಕೊಂಬೆಯಲ್ಲಿ ಕೊಳೆತ ಸ್ಥಿತಿಯಲ್ಲಿ ವ್ಯಕ್ತಿಯ ಶವ ಪತ್ತೆಯಾಗಿದೆ.

ಮರದ ಮೇಲೆ ಹತ್ತಿ ಕೊಂಬೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಕಾಡಿನಂತಿರುವ ಆ ಸ್ಥಳದಲ್ಲಿ ರಾತ್ರಿ ವೇಳೆ ಓಡಾಡುವುದೂ ಕಷ್ಟ. ಶವವನ್ನು ಮೈಸೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಲಾಗುತ್ತದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುವುದು ಎಂದು ಇನ್‌ಸ್ಪೆಕ್ಟರ್ ನಾಗೇಗೌಡರು ತಿಳಿಸಿದ್ದಾರೆ.

ವಿದ್ಯುತ್ ಜನ ಸಂಪರ್ಕ ಸಭೆ

ಮೈಸೂರು, ಡಿ.15– ನ.ರಾ ಮೊಹಲ್ಲಾ ವಿಭಾಗದ ವ್ಯಾಪ್ತಿಯ ಗ್ರಾಹಕರಿಗೆ ನ.ರಾ ಮೊಹಲ್ಲಾ, ಜ್ಯೋತಿನಗರ, ಕೇಂದ್ರ ಚಾಮುಂಡಿಪುರಂ ಹಾಗೂ ವರುಣ ಉಪವಿಭಾಗ ಕಚೇರಿಗಳಲ್ಲಿ ಜನಸಂಪರ್ಕ ಸಭೆ ನಡೆಯಲಿದೆ.

ಡಿ.18ರಂದು ಬೆಳಗ್ಗೆ 11 ಗಂಟೆಗೆ ನ.ರಾ ಮೊಹಲ್ಲಾ, ಮಧ್ಯಾಹ್ನ 3 ಗಂಟೆಗೆ ಜ್ಯೋತಿನಗರ, ಡಿ. 20 ರಂದು ಬೆಳಗ್ಗೆ 11 ಗಂಟೆಗೆ ಕೇಂದ್ರ, ಮಧ್ಯಾಹ್ನ 3 ಗಂಟೆಗೆ ಚಾಮುಂಡಿಪುರಂ ಹಾಗೂ ಡಿ. 22 ರಂದು ಬೆಳಗ್ಗೆ 11 ಗಂಟೆಗೆ ವರುಣ ಉಪವಿಭಾಗ ಕಚೇರಿಗಳಲ್ಲಿ ಜನಸಂಪರ್ಕ ಸಭೆ ನಡೆಯಲಿದ್ದು, ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳ ಬಹುದು ಎಂದು ನ.ರಾ.ಮೊಹಲ್ಲಾ ಚಾ.ವಿ.ಸ.ನಿ.ನಿ. ಕಾರ್ಯ ಮತ್ತು ಪಾಲನೆ ವಿಭಾಗದ ಪ್ರಕಟಣೆ ತಿಳಿಸಿದೆ.



ಕಾಂತರಾಜು ಆಯೋಗದ ವರದಿ ಬಿಡುಗಡೆಗೆ ಆಗ್ರಹಿಸಿ ಮುಂದಿನ ಜನವರಿ 21ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬೃಹತ್ ಸಮಾವೇಶದ ಹಿನ್ನೆಲೆಯಲ್ಲಿ ಶೋಷಿತ ಸಮುದಾಯಗಳ ಪೂರ್ವಭಾವಿ ಸಭೆ ಬೀದರ್‌ನಲ್ಲಿ ನಡೆಯಿತು. ಈ ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಹ್ಮಣ್ಯ, ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ ಮತ್ತಿತರರು ಭಾಗವಹಿಸಿದ್ದರು.

ಸಂಸತ್ ಭದ್ರತಾ ಲೋಪ ಹಿನ್ನಲೆ: ಸಂಸದ ಪ್ರತಾಪ್‌ಸಿಂಹರ ಭಾವಚಿತ್ರ ವಿಕೃತಗೊಳಿಸಿದ ಕಾಂಗ್ರೆಸಿಗರ ವಿರುದ್ಧ ದೂರು

ಮೈಸೂರು, ಡಿ.15(ಎಂಕೆ)– ಲೋಕಸಭಾ ಕಲಾಪದ ವೇಳೆ ದುಷ್ಕರ್ಮಿಗಳು ಒಳನುಗ್ಗಿ ದಾಂಧಲೆ ನಡೆಸಿದ ಪ್ರಕರಣ ಸಂಬಂಧ ಸಂಸದ ಪ್ರತಾಪ್ ಸಿಂಹ ಅವರನ್ನು ಸಾರ್ವಜನಿಕವಾಗಿ ಭಯೋತ್ಪಾದಕರೆಂದು ಬಿಂಬಿಸಿ, ಅವರ ಭಾವಚಿತ್ರಗಳನ್ನು ವಿಕೃತಗೊಳಿಸಿ ಪಕ್ಷಕ್ಕೆ ಹಾಗೂ ಕಾರ್ಯಕರ್ತರಿಗೆ ಮುಜುಗರ ತರುವ ಹಾಗೂ ಕೋಮು ಗಲಭೆಗೆ ಪ್ರಚೋದನೆ ನೀಡುತ್ತಿರುವ ಕಾಂಗ್ರೆಸ್‌ನ ಕೆಲ ಕಿಡಿಗೇಡಿಗಳ ವಿರುದ್ಧ ಪ್ರಕರಣ ದಾಖಲಿಸಿ, ಕಠಿಣ ಕ್ರಮಕೈಗೊಳ್ಳುವಂತೆ ಬಿಜೆಪಿ ನಗರ (ಜಿಲ್ಲಾ) ಯುವ ಮೋರ್ಚಾ ವತಿಯಿಂದ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರಿಗೆ ದೂರು ಸಲ್ಲಿಸಲಾಯಿತು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿಗೆ ಶುಕ್ರವಾರ ಭೇಟಿ ನೀಡಿದ ಬಿಜೆಪಿ ನಗರ (ಜಿಲ್ಲಾ) ಯುವ ಮೋರ್ಚಾ ಪದಾಧಿಕಾರಿಗಳು, ಸಂಸತ್ ಕಲಾಪದ ವೇಳೆ ದುಷ್ಕರ್ಮಿಗಳು ಒಳನುಗ್ಗಿ ದಾಂಧಲೆ ನಡೆಸಿದ ಪ್ರಕರಣವನ್ನು ಬಿಜೆಪಿ ಖಂಡಿಸುವುದಲ್ಲದೆ ತನಿಖೆಗೆ ಒತ್ತಾಯಿಸಿದೆ. ಆದರೆ ಪಾಸ್ ನೀಡಿದ್ದಾರೆಂಬ ಕಾರಣಕ್ಕೆ ಜನಪ್ರಿಯ ಸಂಸದರಾದ ಪ್ರತಾಪ್ ಸಿಂಹ ಅವರ ಭಾವಚಿತ್ರಕ್ಕೆ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದವರ ವೇಷ ಚಿತ್ರಿಸಿ, ಅವರ ಕೈಯಲ್ಲಿ ಮದ್ದು–ಗುಂಡು ಹಾಗೂ ಬಂದೂಕು ಇರುವಂತೆ ವಿನ್ಯಾಸಗೊಳಿಸಿ ಕೋಮು ಗಲಭೆಗೆ ಪ್ರಚೋದನೆ ನೀಡುತ್ತಿರುವ ಕಾಂಗ್ರೆಸ್‌ನ ಕೆಲ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಬಿಜೆಪಿ ನಗರ(ಜಿಲ್ಲಾ) ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್ ಕುಮಾರ್, ಸಂಸತ್ ಕಲಾಪದ ವೇಳೆ ಒಳನುಗ್ಗಿದ ದುಷ್ಕರ್ಮಿಗಳನ್ನು ಈಗಾಗಲೇ ಬಂಧಿಸಿದ್ದು, ತನಿಖೆ ನಡೆಸಲಾಗುತ್ತಿದೆ. ಆದರೆ ಅವರಿಗೆ ಪಾಸ್ ನೀಡಿದ್ದಾರೆ ಎಂಬ ಕಾರಣಕ್ಕೆ ಜನಪ್ರಿಯ ಸಂಸದರಾದ ಪ್ರತಾಪ್‌ಸಿಂಹ ಅವರ ಭಾವಚಿತ್ರವನ್ನು ಬಂದೂಕು ಹಿಡಿದಿರುವ ಭಯೋತ್ಪಾದಕರಂತೆ ಕಾಣುವ ರೀತಿಯಲ್ಲಿ ವಿಕೃತವಾಗಿ ವಿನ್ಯಾಸಗೊಳಿಸಿ ಸಾರ್ವಜನಿಕ ಸ್ಥಳದಲ್ಲಿಟ್ಟು ಸಹಿ ಸಂಗ್ರಹ ಕಾರ್ಯಕ್ರಮ ಮಾಡಿರುವ ಕಾಂಗ್ರೆಸ್‌ನ ಕೆಲ ಕಿಡಿಗೇಡಿ ಗಳ ಕೆಲಸ ಅತ್ಯಂತ ಖಂಡನೀಯ ಎಂದು ಕಿಡಿಕಾರಿದರು.

ಪೊಲೀಸ್ ಆಯುಕ್ತರಿಗೆ ದೂರು ನೀಡಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು



ಕಾಂಗ್ರೆಸ್‌ನವರ ನಂಟು..!: ಈ ಪ್ರಕರಣದ ತನಿಖಾ ಅಧಿಕಾರಿಗಳಿಗೆ ದೊರೆಯದ ಮಾಹಿತಿ ಮೈಸೂರಿನ ಕೆಲ ಕಾಂಗ್ರೆಸ್ ಮುಖಂಡರಿಗೆ ಸಿಗುತ್ತಿದೆ ಎಂದರೆ, ಇದರಲ್ಲಿ ಇವರದ್ದೇ ಕೈವಾಡವಿದೆ ಎಂಬ ಅನುಮಾನ ಮೂಡಿದೆ. ಪ್ರಕರಣದಲ್ಲಿ ಬಂಧಿತನಾಗಿರುವ ಉತ್ತರ ಪ್ರದೇಶದ ವ್ಯಕ್ತಿಗೆ ಟಿಎಂಸಿ ಪಕ್ಷದ ಹಿನ್ನಲೆ ಇದೆ ಎಂಬುದು ಈಗಾಗಲೇ ಬಹಿರಂಗವಾಗಿದ್ದು, ಟಿಎಂಸಿ ಇಂಡಿಯಾ ಮೈತ್ರಿ ಕೂಟದಲ್ಲಿರುವ ಒಂದು ಪಕ್ಷ. ಆಗಾಗಿ ಮೈಸೂರಿನ ಬಂಧಿತ ಆರೋಪಿ ಮನೋರಂಜನ್‌ಗೆ ಕಾಂಗ್ರೆಸ್ ನವರೇ ಸುಪಾರಿ ಕೊಟ್ಟು ಈ ಕೆಲಸ ಮಾಡಿಸಿದ್ದಾರಾ... ಎಂಬುದು ಕೂಡ ಮೇಲ್ನೋಟಕ್ಕೆ ಕಂಡುಬಂದಿದೆ. ಅಲ್ಲದೆ ಪತ್ರಿಕಾಗೋಷ್ಠಿ ನಡೆಸಿ ಬಂಧಿತ ಆರೋಪಿಗಳ ಎಲ್ಲಾ ಮಾಹಿತಿಯನ್ನು ಹೇಳುತ್ತಿರುವುದನ್ನು ನೋಡಿದರೆ ಮೈಸೂರಿನ ಕಾಂಗ್ರೆಸ್ ಮುಖಂಡರೇ ಈ ಪ್ರಕರಣದಲ್ಲಿ ಭಾಗಿ ಯಾಗಿದ್ದಾರೆ ಎಂಬುದು ಸ್ಪಷ್ಟವಾಗಿದೆ ಎಂದರು.

ಯಾವುದೆ ಸಂಬಂಧ ವಿಲ್ಲ: ಸಂಸದ ಪ್ರತಾಪ್ ಸಿಂಹ ಅವರು, ಕ್ಷೇತ್ರದ ಮತದಾರ ಎಂಬ ಕಾರಣಕ್ಕೆ ಪಾಸ್ ನೀಡಿದ್ದಾರೆಯೇ ಹೊರತು ಅನ್ಯ ಉದ್ದೇಶವಿರಲಿಲ್ಲ. ಲೋಕಸಭಾ ಭದ್ರತಾ ಲೋಪದಿಂದ ದುಷ್ಕರ್ಮಿಗಳು ಒಳನುಗ್ಗಿದ್ದಾರೆಯೇ ಹೊರತು ಸಂಸದ ಪ್ರತಾಪ್ ಸಿಂಹ ಅವರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ. ಮುಂಬರುವ ಲೋಕ ಸಭಾ ಚುನಾವಣೆ ಹಿನ್ನಲೆ ಅವರ ಕಾಲೆಳೆಯುವ ಕೆಲಸ ಮಾಡುತ್ತಿದ್ದಾರೆ. ಭ್ರೂಣ ಹತ್ಯೆ, ಐಟಿ ರೆಡ್, ಸಿಇಟಿಯಲ್ಲಿ ಅಕ್ರಮ ಸೇರಿದಂತೆ ಭ್ರಷ್ಟಾಚಾರದಿಂದ ಕೂಡಿರುವ ರಾಜ್ಯ ಸರ್ಕಾರ ತನ್ನ ಲೋಪ ಗಳನ್ನು ಮುಚ್ಚಿ ಹಾಕಲು ಈ ರೀತಿಯ ವಿಕೃತಿಗೊಳಿಸುವ ಕೆಲಸ ಮಾಡುತ್ತಿದೆ ಎಂದು ದೂರಿದರಲ್ಲದೆ ಸಾರ್ವಜನಿಕರು ಯಾವುದು ಸತ್ಯ–ಸುಳ್ಳು ಎಂಬುದನ್ನು ಅರಿತುಕೊಳ್ಳಬೇಕು ಎಂದು ಮನವಿ ಮಾಡಿದರು. ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಜೈಶಂಕರ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ್, ರೈತ ಮೋರ್ಚಾದ ಅಧ್ಯಕ್ಷ ದೇವರಾಜ, ಚಾಮರಾಜ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಸಚಿನ್‌ಗೌಡ, ಯುವ ಮೋರ್ಚಾ ಮುಖಂಡರುಗಳಾದ ಸಂತೋಷ್ ಕುಮಾರ್, ಕಾರ್ತಿಕ್ ಮರಿಯಪ್ಪ, ಪುನೀತ್ ಕುಮಾರ್, ಹೇಮಂತ್ ಗೌಡ, ಜೆಸಿಬಿ ರವಿ, ಪಡುವಾರಹಳ್ಳಿ ಯೋಗ, ಅನೂಜ್, ರಘು, ಅರುಣ್, ಅರ್ಜುನ್ ಕುಮಾರ್, ಹರೀಶ್ ಕುಮಾರ್ ಮತ್ತಿತರರಿದ್ದರು.

ಒಂದನೇ ಪುಟದಿಂದ

ಸಾಲದ ಬಡ್ಡಿ ಮನ್ನಾ

ರೈತರು ಮತ್ತು ರಾಜ್ಯ ಕಂಗಾಲಾಗಿತ್ತು, ಅಂತಹ ಸಂದರ್ಭದಲ್ಲೂ ತಾವು ನೀಡಿದ್ದ ಭರವಸೆಯನ್ನು ಈಡೇರಿಸಲಿಲ್ಲ. ಈ ಬಗ್ಗೆ ಪ್ರಶ್ನೆ ಮಾಡಿದರೆ ಹಣ ಮುದ್ರಿಸುವ ಯಂತ್ರ ಇಲ್ಲ ಎಂದು ಕಿಡಿಕಾರಿದ್ದರು. ಜೊತೆಗೆ ಖಜಾನೆಯಲ್ಲಿ ಹಣವಿಲ್ಲ ಎಂದು ತಿಳಿಸಿದ್ದರು.

ಆದರೆ, ಇಂದು ನಾವು ಭರವಸೆ ನೀಡದಿದ್ದರೂ ರೈತರಿಗೆ ಸಣ್ಣ ಪ್ರಮಾಣದಲ್ಲಿ ನೆರವಿಗೆ ಬಂದಿದ್ದೇವೆ, ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು. ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅಷ್ಟಸೂತ್ರಗಳನ್ನು ಘೋಷಿಸಿ, ನಮ್ಮ ಸರಕಾರ ಯಾವ ಪ್ರದೇಶವನ್ನೂ ತಾರತಮ್ಯದಿಂದ ನೋಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಡಿ.ಎಂ.ನಂಜುಂಡಪ್ಪ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿಯನ್ನು ಅಧ್ಯಯನ ಮಾಡಲು ನುರಿತ ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಹೈಪವರ್ ಕಮಿಟಿಯನ್ನು ರಚಿಸಲಾಗುವುದು ಎಂದರು. ವರದಿಯನ್ನಾಧರಿಸಿ ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮೂಲಕ ಇದುವರೆಗೆ 61,330 ಕೋಟಿ ರೂ. ಅನುದಾನ ಒದಗಿಸಿದೆ. ಸುಮಾರು 42,000 ಕೋಟಿ ರೂ. ಖರ್ಚು ಮಾಡಿದೆ. ನಂಜುಂಡಪ್ಪನವರ ವರದಿಯನ್ನಾಧರಿಸಿ ನೀಡಲಾಗುವ ವಿಶೇಷ ಅಭಿವೃದ್ಧಿ ಯೋಜನೆಯಡಿಯೇ 32,433.43 ಕೋಟಿ ರೂ. ಖರ್ಚು ಮಾಡಲಾಗಿದೆ. ಇದರ ಜೊತೆಯಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದಲೂ ಅನುದಾನಗಳನ್ನು ಒದಗಿಸಲಾಗಿದೆ. ಇಷ್ಟೆಲ್ಲಾ ಮಾಡಿದರೂ ಮಾನವ ಅಭಿವೃದ್ಧಿ ಸೂಚ್ಯಂಕವು ನಿರೀಕ್ಷಿತ ಮಟ್ಟದಲ್ಲಿ ಸುಧಾರಿಸುತ್ತಿಲ್ಲ. ಶಿಕ್ಷಣ, ಆರೋಗ್ಯ, ಆದಾಯ ಗಳಿಕೆ ಮುಂತಾದವುಗಳಲ್ಲಿ ಹಿನ್ನಡೆಯನ್ನು ಈ ಜಿಲ್ಲೆಗಳು ಅನುಭವಿಸುತ್ತಿವೆ. ವಿಶೇಷವಾಗಿ ನಂಜುಂಡಪ್ಪನವರ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿ ಅಧ್ಯಯನ ಮಾಡಲು ಖ್ಯಾತ ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಹೈಪವರ್ ಕಮಿಟಿಯನ್ನು ರಚಿಸಲಾಗುವುದು ಎಂದರು.

ಉತ್ತರ ಕರ್ನಾಟಕದಲ್ಲಿ ಕೈಗಾರಿಕೆ ಸ್ಥಾಪನೆ: ಉತ್ತರ ಕರ್ನಾಟಕದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆರ್ಥಿಕತೆಗೆ ಉತ್ತೇಜನ ನೀಡಲು ಹಾಗೂ ಸ್ಥಳೀಯರಿಗೆ ಉದ್ಯೋಗ ಒದಗಿಸುವ ಸಲುವಾಗಿ ಬೆಳಗಾವಿ ಸಮೀಪ ಸುಮಾರು 2,000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ, 500 ಎಕರೆ ಪ್ರದೇಶದಲ್ಲಿ ಫೌಂಡ್ರಿ ಕ್ಲಸ್ಟರ್ ಅನ್ನು ಸ್ಥಾಪಿಸಲಾಗುವುದು ಹಾಗೂ ಜಿಲ್ಲೆಯಲ್ಲಿ ಏರೋಸ್ಪೇಸ್ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ವಿಶೇಷ ಒತ್ತು ನೀಡಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಕ್ಲಸ್ಟರ್ ಸ್ಥಾಪಿಸಲಾಗುತ್ತಿದ್ದು, ಈಗಾಗಲೇ 19 ಘಟಕಗಳು 1255 ಕೋಟಿ ರೂ. ಬಂಡವಾಳ ಹೂಡಿಕೆ ಮಾಡುತ್ತಿದ್ದು, ಸುಮಾರು 2,450 ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ. ಧಾರವಾಡದ ಸಮೀಪ ಸುಮಾರು 3,000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ ಸ್ಥಾಪಿಸಲಾಗುತ್ತದೆ.

14 ಕ್ಲಿನಿಕ್‌ಗಳಿಗೆ ಬೀಗ

ಜಿಲ್ಲಾಧಿಕಾರಿಗಳು ತಾಲೂಕು ಹಾಗೂ ಮೈಸೂರು ನಗರ ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ರಚನೆ ಮಾಡಿದ್ದಾರೆ. ತಾಲೂಕು ಆರೋಗ್ಯಾಧಿಕಾರಿಗಳ ನೇತೃತ್ವದ ಟಾಸ್ಕ್‌ಫೋರ್ಸ್ ಈಗಾಗಲೇ ಆಯಾ ತಾಲೂಕಿನ ಆಸ್ಪತ್ರೆ ಹಾಗೂ ವೈದ್ಯರ ಕ್ಲಿನಿಕ್ ಗಳಿಗೆ ಪ್ರತಿದಿನ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದೆ. ಆಯುಷ್ ಅಧಿಕಾರಿ ಸೇರಿದಂತೆ 7 ಅಧಿಕಾರಿಗಳು ಹಾಗೂ ಸಿಬ್ಬಂದಿ ತಂಡ ಪರಿಶೀಲನೆ ನಡೆಸುತ್ತಿದೆ. ಈ ಸಂದರ್ಭದಲ್ಲಿ ಕೆಪಿಎಂಇ(ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ) ಪ್ರಕಾರ ಆಸ್ಪತ್ರೆ ಹಾಗೂ ಕ್ಲಿನಿಕ್ ನಡೆಸಲು ವೈದ್ಯಕೀಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ತೋರಿಸಬೇಕು ಎಂದು ತಿಳಿಸಿದರು.

ಮೊದಲು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಸುತ್ತಮುತ್ತಲು ಇರುವ ವೈದ್ಯಕೀಯ ಕ್ಲಿನಿಕ್‌ಗಳ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ತರುವಾಯ ತಾಲೂಕು ಕೇಂದ್ರದಿಂದ ಸಣ್ಣ ಗ್ರಾಮಗಳಿಗೂ ಭೇಟಿ ನೀಡಿ ಕ್ಲಿನಿಕ್‌ಗಳನ್ನು ಪರಿಶೀಲನೆ ಮಾಡಲಾಗುತ್ತಿದೆ ಎಂದರು. ಮೈಸೂರು, ತಿ.ನರಸೀಪುರ, ನಂಜನಗೂಡು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಹುಣಸೂರು, ಕೆ.ಆರ್.ನಗರ, ಸಾಲಿಗ್ರಾಮ, ಸರಗೂರು ತಾಲೂಕಿನಲ್ಲಿ ಟಾಸ್ಕ್ ಫೋರ್ಸ್ ಕಾರ್ಯಾಚರಣೆ ಕೈಗೊಂಡಿದೆ. ಕೆಪಿಎಂಇ ಕಾಯ್ದೆ ಪ್ರಕಾರ ವೈದ್ಯಕೀಯ ಪ್ರಮಾಣ ಪತ್ರ ಇದೆಯೇ ಎಂದು ಮೊದಲು ಪರಿಶೀಲನೆ ನಡೆಸಲಾಗುತ್ತಿದೆ. ತರುವಾಯ ಯಾವ ರೀತಿ ಔಷಧಿ ನೀಡಲಾಗುತ್ತಿದೆ ಎಂದು ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಡಾ.ಗೋಪಿನಾಥ್ ಹೇಳಿದರು.

ಕಾರ್ಯಾಚರಣೆ ವೇಳೆ ವೈದ್ಯಕೀಯ ಪ್ರಮಾಣ ಪತ್ರ ನವೀಕರಣ ಮಾಡಿಸಿಕೊಳ್ಳದ 14 ಕ್ಲಿನಿಕ್‌ಗಳಿಗೆ ಈಗಾಗಲೇ ಬೀಗ ಹಾಕಲಾಗಿದೆ. ಉಳಿದಂತೆ ಮೈಸೂರು ನಗರ ಪಾಲಿಕೆಯ 9 ವಲಯ ಕಚೇರಿಯಲ್ಲಿ ನೇಮಕಗೊಂಡಿರುವ ಟಾಸ್ಕ್‌ಫೋರ್ಸ್ ನಿನ್ನೆಯಿಂದ ಕಾರ್ಯಾಚರಣೆ ನಡೆಸುತ್ತಿದೆ. ಇದರಲ್ಲಿ ಯಾವುದೇ ವೈದ್ಯಕೀಯ ಪ್ರಮಾಣ ಪತ್ರ ಇಲ್ಲದ 4 ಕ್ಲಿನಿಕ್‌ಗಳನ್ನು ಪತ್ತೆ ಮಾಡಲಾಗಿದೆ. ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅವರ ಅನುಮತಿ ಪಡೆದು 4 ಕ್ಲಿನಿಕ್‌ಗಳಿಗೆ ಬೀಗ ಹಾಕಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಡಾ.ಗೋಪಿನಾಥ್ ಹೇಳಿದರು. ಆಸ್ಪತ್ರೆಗಳನ್ನು ಹೊರತುಪಡಿಸಿ ಸಣ್ಣ ಸಣ್ಣ ಕ್ಲಿನಿಕ್ ನಡೆಸುವ ವೈದ್ಯರು ಬಿಎಎಂಎಸ್, ಬಿಎಡಿಎಸ್, ಬಿಯುಎಂಎಸ್ ಸರ್ಟಿಫಿಕೇಟ್ ಪಡೆದಿರುವುದಾಗಿ ಹೇಳುತ್ತಿದ್ದಾರೆ. ಕೊಲ್ಕತ್ತಾ, ರಾಂಚಿ ಹಾಗೂ ದೆಹಲಿಯ ವೈದ್ಯಕೀಯ ಸಂಸ್ಥೆಗಳಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರ ತೋರಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು. ದೆಹಲಿ, ಕೊಲ್ಕತ್ತಾ ಹಾಗೂ ರಾಂಚಿಯಲ್ಲಿರುವ ವೈದ್ಯಕೀಯ ಸಂಸ್ಥೆಗಳಿಂದ ಪಡೆದಿರುವ ಸರ್ಟಿಫಿಕೇಟ್ ಬಗ್ಗೆ ಮಾಹಿತಿ ಕಲೆ ಹಾಕಿದರೆ ಯಾವುದೇ ವಿವರ ಸಿಗುತ್ತಿಲ್ಲ. ಇದರಿಂದ ಇಂತಹ ವೈದ್ಯರು ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರಗಳ ಕಾನೂನು ಮಾನ್ಯತೆ ತಿಳಿಯುವುದೇ ನಮಗೆ ದೊಡ್ಡ ಸವಾಲಾಗಿದೆ ಎಂದು ಡಾ.ಗೋಪಿನಾಥ್ ತಿಳಿಸಿದರು. ವೈದ್ಯಕೀಯ ಪ್ರಮಾಣ ಪತ್ರವಿಲ್ಲದ ಮೈಸೂರು ನಗರದ ನಾಲ್ಕು ಕ್ಲಿನಿಕ್‌ಗಳನ್ನು ಪತ್ತೆ ಮಾಡಲಾಗಿದೆ. ಇದರಲ್ಲಿ ಎರಡು ಕ್ಲಿನಿಕ್ ಗಳಿಗೆ ಅವರೇ ಬಾಗಿಲು ಹಾಕಿದ್ದು, ಇನ್ನೆರಡು ಕ್ಲಿನಿಕ್‌ಗಳನ್ನು ರಾಜಾರೋಷವಾಗಿ ತೆರೆದು ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅನುಮತಿ ದೊರೆತ ತಕ್ಷಣ ನಾಲ್ಕು ಕ್ಲಿನಿಕ್‌ಗಳಿಗೆ ಬೀಗ ಹಾಕಲಾಗುವುದು ಎಂದರು. ಮೈಸೂರು ನಗರ ಪಾಲಿಕೆಯ 9 ವಲಯ ಕಚೇರಿ ಹಾಗೂ ಆಯಾ ತಾಲೂಕುಗಳಲ್ಲಿ ಕಾರ್ಯಾಚರಣೆ ಚುರುಕಿನಿಂದ ನಡೆಯುತ್ತಿದೆ. ಜಿಲ್ಲಾಧಿಕಾರಿಗಳು ಸೂಚನೆ ನೀಡಿದಂತೆ ಈ ತಿಂಗಳಾಂತ್ಯದಲ್ಲಿ ಕಾರ್ಯಾಚರಣೆ ಪೂರ್ಣಗೊಳಿಸಲು ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದರು. ಈಗಾಗಲೇ ಬಾಗಿಲು ಹಾಕಿಸಿರುವ 14 ಕ್ಲಿನಿಕ್‌ನವರು ಕಾನೂನು ಕ್ರಮದಿಂದ ಪಾರಾಗಲು ಈ ತನಕ ರಾಜಕೀಯ ಪ್ರಭಾವ ಬೀರಿಲ್ಲ ಎಂದು ಡಾ.ಗೋಪಿನಾಥ್ ಸ್ಪಷ್ಟಪಡಿಸಿದರು.

6 ಅಧಿಕಾರಿಗಳಿಗೆ ಹಿಂಬಡ್ತಿ

ದ್ವಿತೀಯ ದರ್ಜೆ ಸಹಾಯಕ ಮಾದೇಶ್, ಈ ಹಿಂದೆ ಹನೂರು ಪಪಂನ ಹಿರಿಯ ಆರೋಗ್ಯ ನಿರೀಕ್ಷಕರಾಗಿದ್ದು, ಹಾಲಿ ಕೊಳ್ಳೇಗಾಲ ನಗರಸಭೆಯ ಹಿರಿಯ ಆರೋಗ್ಯ ನಿರೀಕ್ಷಕರಾಗಿರುವ ಎನ್.ಚೇತನ್‌ಕುಮಾರ್, ಈ ಹಿಂದೆ ಹನೂರು ಪಪಂ ಹಿರಿಯ ಅಭಿಯಂತರರಾಗಿದ್ದು, ಹಾಲಿ ಚಾಮರಾಜನಗರ ನಗರಸಭೆಯ ಕಿರಿಯ ಅಭಿಯಂತರರಾಗಿರುವ ಶಿವಶಂಕರ ಆರಾಧ್ಯ, ಈ ಹಿಂದೆ ಹನೂರು ಪಪಂನ ದ್ವಿತೀಯ ದರ್ಜೆ ಸಹಾಯಕಿಯಾಗಿದ್ದು, ಹಾಲಿ ಯಳಂದೂರು ಪಪಂನ ದ್ವಿತೀಯ ದರ್ಜೆ ಸಹಾಯಕಿಯಾಗಿರುವ ಶ್ರೀಮತಿ ಬಿ. ಜಯಲಕ್ಷ್ಮಿ, ಈ ಹಿಂದೆ ಹನೂರು ಪಪಂನ ಸ್ಯಾನಿಟರಿ ಸೂಪರ್‌ವೈಸರ್ ಆಗಿದ್ದು, ಹಾಲಿ ಕೊಳ್ಳೇಗಾಲ ನಗರಸಭೆಯಲ್ಲಿರುವ ಎಂ. ಮುನಿಯ ಮತ್ತು ಈ ಹಿಂದೆ ಹನೂರು ಪಪಂನ ಕರ ವಸೂಲಿಗಾರರಾಗಿದ್ದು, ಹಾಲಿ ಚಾಮರಾಜನಗರ ನಗರಸಭೆಯ ಕರ ವಸೂಲಿಗಾರನಾಗಿರುವ ನಂಜುಂಡಶೆಟ್ಟಿ ಅವರುಗಳನ್ನು ವೇತನ ಶ್ರೇಣಿಯ ಹುದ್ದೆಯ ಕೆಳಗಿನ ಹಂತಕ್ಕೆ ಇಳಿಸುವ ಮೂಲಕ ಹಿಂಬಡ್ತಿ ನೀಡಲಾಗಿದೆ.

ವಿವರ: ಹನೂರು ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ನಿಯಮಬಾಹಿರವಾಗಿ 54 ಖಾತೆಗಳನ್ನು ದಾಖಲಿಸಿ, ನಮೂನೆ 3 ಅನ್ನು ಸೃಷ್ಟಿಸಿ, ಇ–ಸ್ವತ್ತು ನೀಡಲಾಗಿದೆ ಎಂದು ಹನೂರಿನ ಹಿರಿಯ ಪತ್ರಕರ್ತರೊಬ್ಬರು ಚಾಮರಾಜನಗರದ ಹಿಂದಿನ ಜಿಲ್ಲಾಧಿಕಾರಿ ಕಾವೇರಿ ಅವರಿಗೆ ದಾಖಲೆಗಳ ಸಮೇತ ದೂರು ಸಲ್ಲಿಸಿದ್ದರು. ಈ ದೂರಿನನ್ವಯ ವಿಚಾರಣೆ ನಡೆಸಿದ ವೇಳೆ ಮೇಲ್ನೋಟಕ್ಕೆ ಅಕ್ರಮ ನಡೆದಿರುವುದು ತಿಳಿದುಬಂದ ಹಿನ್ನೆಲೆಯಲ್ಲಿ ಮುಖ್ಯಾಧಿಕಾರಿ ಮೂರ್ತಿ ಮತ್ತು ದ್ವಿತೀಯ ದರ್ಜೆ ಸಹಾಯಕಿಯಾಗಿದ್ದ ಜಯಲಕ್ಷ್ಮೀ ಅವರನ್ನು ಅಮಾನತುಗೊಳಿಸಿ ಉಳಿದ 5 ಮಂದಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಅವರ ಪೌರಾಡಳಿತ ಇಲಾಖೆಯ ನಿರ್ದೇಶಕರಿಗೆ ಸಲ್ಲಿಸಲಾಗಿತ್ತು. ಆದರೆ, ಮೂರ್ತಿಯವರು ಅಮಾನತು ಆದೇಶಕ್ಕೆ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದು ಹನೂರು ಪಪಂನ ಮುಖ್ಯಾಧಿಕಾರಿಯಾಗಿ ಮುಂದುವರೆದಿದ್ದರು. ಈ ಪಪಂನಲ್ಲಿ ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆದಿದೆ ಎಂಬುದು ಮೇಲ್ನೋಟಕ್ಕೆ ತಿಳಿದು ಬಂದ ಹಿನ್ನೆಲೆಯಲ್ಲಿ ಪೌರಡಾಳಿತ ನಿರ್ದೇನಾಲಯವು 2021ರ ಫೆಬ್ರವರಿ 5ರಲ್ಲಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿತ್ತು.

ವಿಚಾರಣಾಧಿಕಾರಿಗಳು ಸುದೀರ್ಘವಾಗಿ ವಿಚಾರಣೆ ನಡೆಸಿದಾಗ ಹನೂರು ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಅನ್ಯಕ್ರಾಂತವಾಗದ ಜಮೀನುಗಳಿಗೂ ವಸತಿ ಹಾಗೂ ವಾಣಿಜ್ಯ ನಿವೇಶನದ ಖಾತೆ ಮಾಡಿ, ಅದಕ್ಕೆ ಇ–ಸ್ವತ್ತುಗಳನ್ನು ನೀಡಿರುವುದು ಪತ್ತೆಯಾಗಿತ್ತು. ಅದರಲ್ಲೂ 53x35 ಅಡಿ ಮತ್ತು 60x50.75 ಅಡಿ ವಿಸ್ತೀರ್ಣದ ಜಮೀನು ಅನ್ಯಕ್ರಾಂತವಾಗದೇ ಇದ್ದು, ಏಕ ನಿವೇಶನ ನಕ್ಷೆಗೆ ಅನುಮೋದನೆಯೂ ಇಲ್ಲದಿದ್ದರೂ ಈ ಆಸ್ತಿಯನ್ನು ತೆರಿಗೆ ರಿಜಿಸ್ಟರ್‌ನಲ್ಲಿ ನಮೂದಿಸಿ ಹೊಸದಾಗಿ ಹಕ್ಕು ದಾಖಲಿಸಿ ನಮೂನೆ 3 ಅನ್ನು ನೀಡಲಾಗಿದ್ದು, ಇದೇ ಆಸ್ತಿಯನ್ನು ಕೆಲ ದಿನಗಳ ನಂತರ ಬೇರೊಬ್ಬರು ಕ್ರಯಕ್ಕೆ ಪಡೆದಿದ್ದು, ಈ ಆಸ್ತಿಯ ಸಂಬಂಧ ನಡೆದಿದ್ದ ಅಕ್ರಮಗಳನ್ನು ಮರೆಮಾಚಿ ಸಕ್ರಮಗೊಳಿಸಲು ಪ್ರತಿ ಹಂತದಲ್ಲಿಯೂ ಕಾನೂನು ಉಲ್ಲಂಘಿಸಲಾಗಿದೆ ಎಂಬುದು ದೃಢಪಟ್ಟಿತ್ತು. ಈ ಹಿನ್ನೆಲೆಯಲ್ಲಿ ಈ ಅಧಿಕಾರಿಗಳ ವಿರುದ್ಧ ಪೌರಾಡಳಿತ ಇಲಾಖೆ ನಿರ್ದೇಶಕರು ಡಿಸೆಂಬರ್ 4ರಂದು ಕ್ರಮ ಕೈಗೊಂಡಿದ್ದಾರೆ.

ಶೈಕ್ಷಣಿಕ ಮತ್ತು ಉದ್ಯಮಗಳ ನಡುವಿನ ಒಪ್ಪಂದ ಅನಿವಾರ್ಯ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್



ಮೈಸೂರು, ಡಿ.15(ಜಿಎ)–ಕಾರ್ಪೊರೇಟ್ ಪ್ರಪಂಚದ ಬೇಡಿಕೆಗಳೊಂದಿಗೆ ಶೈಕ್ಷಣಿಕ ಉದ್ದೇಶಗಳನ್ನು ಹೊಂದಿಸುವ ಮೂಲಕ ಶೈಕ್ಷಣಿಕ ಮತ್ತು ಉದ್ಯಮದ ನಡುವಿನ ಅಂತರವನ್ನು ಕಡಿಮೆ ಮಾಡಲು ಮೈಸೂರು ವಿಶ್ವವಿದ್ಯಾನಿಲದ ಸಮಾಜ ಕಾರ್ಯ ವಿಭಾಗವು ಬದ್ಧವಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಎನ್‌ಐಪಿಎಂ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪರ್ಸನಲ್ ಮ್ಯಾನೇಜ್‌ಮೆಂಟ್) ಮೈಸೂರು ಚಾಪ್ಟರ್ ಹಾಗೂ ಮೈಸೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ ಸಹಯೋಗದಲ್ಲಿ '21ನೇ ಶತಮಾನದ ಜ್ಞಾನ ಯುಗಕ್ಕೆ ಭವಿಷ್ಯದ ನಾಯಕರನ್ನು ರೂಪಿಸುವುದು' ವಿಷಯ ಕುರಿತು ಶುಕ್ರವಾರ ಏರ್ಪಡಿಸಿದ್ದ 'ಸ್ನೂನಾ– 2023' ವಿದ್ಯಾರ್ಥಿಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

21ನೇ ಶತಮಾನದಲ್ಲಿ ಶೈಕ್ಷಣಿಕ ಮತ್ತು ಉದ್ಯಮಗಳ ನಡುವಿನ ಒಪ್ಪಂದ ಪ್ರಯೋಜನಕಾರಿಯಲ್ಲ. ಆದರೆ ಅನಿವಾರ್ಯವಾಗಿದ್ದು, ಅದಕ್ಕಾಗಿ ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ ಪರಿಹಾರ, ಸಂವಹನ ಪ್ರಾವೀಣ್ಯತೆ, ಹೊಂದಿಕೊಳ್ಳುವಿಕೆ ಮತ್ತು ಸ್ಥಿತಿಸ್ಥಾಪಕತ್ವ, ತಾಂತ್ರಿಕ ಸಾಕ್ಷರತೆ ಮತ್ತು ನಾಯಕತ್ವ ಮತ್ತು ಭಾವನಾತ್ಮಕ ಬುದ್ಧಿವಂತಿಕೆ ಈ ಐದು ಕೌಶಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ತುಮಕೂರಿನ ರಾಮಕೃಷ್ಣ ವಿದ್ಯಾಕೇಂದ್ರದ ಸ್ವಾಮಿ ವೀರೇಶಾನಂದ ಸರಸ್ವತಿ ಅವರು ಮಾತನಾಡಿ, ನಮ್ಮ ಯಶಸ್ಸಿನ ಹಾದಿಯು ನೈತಿಕವಾಗಿರಬೇಕು. ಒಂದೇ ರಾತ್ರಿಯಲ್ಲಿ ಯಶಸ್ಸು ಗಳಿಸಲಾಗದು. ಈಗ ಸಾಧಕರು ಎನಿಸಿಕೊಳ್ಳುತ್ತಿರುವವರೆಲ್ಲರೂ ಬಹಳ ದಶಕಗಳ ಕಾಲ ಕಷ್ಟಪಟ್ಟಿದ್ದಾರೆ ಎನ್ನುವುದನ್ನು ಮರೆಯಬಾರದು. ಪ್ರಯಾಣಕ್ಕೆ ಸಿದ್ಧವಾಗದಿದ್ದರೆ ಗುರಿಯನ್ನು ಹೇಗೆ ತಲುಪುತ್ತೀರಿ? ಎಂದು ಪ್ರಶ್ನಿಸಿದರು.

ವೀರಪ್ಪನ್, ಹಿಟ್ಲರ್, ನೆಪೋಲಿಯನ್, ಅಲೆಗ್ಸಾಂಡರ್ ಕೂಡ ಜ್ಞಾನ ಹೊಂದಿದ್ದರು. ಅವರ ಅಂತ್ಯ ಏನಾಯಿತು? ಹಾಗಾಗಿಯೇ ಜ್ಞಾನದೊಂದಿಗೆ ಸದಾಶಯವೂ ಇರಬೇಕು. ನಮ್ಮ ಜ್ಞಾನವನ್ನು ಸದ್ವಿಚಾರಕ್ಕೆ ಬಳಸಿಕೊಂಡು ಸಮಾಜಕ್ಕೆ ಕೊಡುಗೆ ನೀಡಬೇಕು. ದೇಶದ ನಿರ್ಮಾಣದಲ್ಲಿ ಯುವಜನರ ಪಾತ್ರ ಬಹಳ ಮಹತ್ವದ್ದಾಗಿದೆ. ಈಗ, ಇಡೀ ಜಗತ್ತು ಭಾರತದ ಮಾತುಗಳನ್ನು ಕೇಳಿಸಿಕೊಳ್ಳುತ್ತಿದೆ. ಆದ್ದರಿಂದ, ಬಹಳಷ್ಟು ಅವಕಾಶಗಳಿವೆ. ಅವುಗಳನ್ನು ಯುವಕ, ಯುವತಿಯರು ಬಳಸಿಕೊಳ್ಳಬೇಕು. ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಗುರಿ ಹಾಕಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಅದರಿಂದ ಹಿಂದೆ ಸರಿಯಬಾರದು. ಗುರಿ ದೊಡ್ಡದಿರಬೇಕು. ಪರಿಶ್ರಮಕ್ಕೆ ಪರ್ಯಾಯವೇ ಇಲ್ಲ. ಪರಿಶ್ರಮವು ನಿಮ್ಮನ್ನು ಎತ್ತರಕ್ಕೆ ತೆಗೆದುಕೊಂಡು ಹೋಗುತ್ತದೆ ಎಂದು ತಿಳಿಸಿದರು.

ಎನ್‌ಐಪಿಎಂನ ರಾಷ್ಟ್ರೀಯ ಅಧ್ಯಕ್ಷ ಡಾ.ಎಂ.ಎಚ್. ರಾಜಾ, ಮಾತನಾಡಿ, ಎನ್‌ಐಪಿಎಂ ಮೊದಲ ಆವೃತ್ತಿಯನ್ನು ಬೆಂಗಳೂರಿನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು. ನಂತರ ಕೊರೊನಾ ಸಾಂಕ್ರಾಮಿಕ ರೋಗದಿಂದಾಗಿ ಆನ್‌ಲೈನ್‌ನಲ್ಲಿ ನಡೆಸಲಾಯಿತು ಮತ್ತು ಇಂದು ವಾರ್ಷಿಕ ಕಾರ್ಯಕ್ರಮದ ಐದನೇ ಆವೃತ್ತಿಯು ಮೈಸೂರಿನಲ್ಲಿ ನಡೆಯುತ್ತಿದ್ದು, ಇದು ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವಕ್ಕಾಗಿ ಹೆಸರುವಾಸಿಯಾಗಿದೆ ಎಂದರು.

ವಿದ್ಯಾರ್ಥಿಗಳ ರಾಷ್ಟ್ರೀಯ ಸಮ್ಮೇಳನದಿಂದ ಬಹಳಷ್ಟು ವಿದ್ಯಾರ್ಥಿಗಳಿಗೆ ಮೌಖಿಕ ಮತ್ತು ಲಿಖಿತ ಸಂವಹನ ಕೌಶಲ್ಯಗಳನ್ನು ಹೆಚ್ಚಿಸಲು ಸಹಕಾರಿಯಾಗಿದೆ ಎಂದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಡೆಯುತ್ತಿರುವ ಕ್ಷಿಪ್ರ ಪ್ರಗತಿಯೊಂದಿಗೆ ಬರುವ ಸಂಕೀರ್ಣ ಸವಾಲುಗಳಿಗೆ ನವೀನ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ಈ ವೇಳೆ ಕಾರ್ಪೊರೇಟ್ ಪ್ರಪಂಚದ ಬೇಡಿಕೆಗಳೊಂದಿಗೆ ಶೈಕ್ಷಣಿಕ ಅನ್ವೇಷಣೆಗಳನ್ನು ಹೊಂದಿಸುವಲ್ಲಿ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಮೈಸೂರು ವಿವಿ ಸಾಮಾಜಿಕ ಕಾರ್ಯ ವಿಭಾಗದ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು.

ವಿದ್ಯಾರ್ಥಿಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ರಾಜ್ಯ ವಿವಿಧ ಕಾಲೇಜುಗಳಿಂದ 500ಕ್ಕೂ ಅಧಿಕ ವಿದ್ಯಾರ್ಥಿಗಳು ವಿವಿಧ ತಜ್ಞರು ನಡೆಸಿಕೊಟ್ಟ ತಾಂತ್ರಿಕ ಸಂವಾದದಲ್ಲಿ ಭಾಗವಹಿಸಿ, ತಮ್ಮ ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಹಾಗೂ ಎನ್‌ಐಪಿಎಂ ಮಾಜಿ ಅಧ್ಯಕ್ಷರೂ ಆದ ಕುಲಪತಿ ಪ್ರೊ.ವೈ.ಎಸ್. ಸಿದ್ದೇಗೌಡ, ಎನ್‌ಐಪಿಎಂ ಮೈಸೂರು ಚಾಪ್ಟರ್‌ನ ಅಧ್ಯಕ್ಷ ಸಿ.ವಿ. ಶ್ರೀನಿವಾಸನ್, ಸಮಾಜಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಚಂದ್ರಮೌಳಿ, ಗೌರವ ಕಾರ್ಯದರ್ಶಿ ಎನ್.ದೇವರಾಜ, ಗೋಪಾಲಕೃಷ್ಣ ಶಾಸ್ತ್ರೀ ಉಪಸ್ಥಿತರಿದ್ದರು.

> ಶಿಕ್ಷಣ ತಜ್ಞರು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. 21ನೇ ಶತಮಾನದ ಜ್ಞಾನಯುಗಕ್ಕೆ ಭವಿಷ್ಯದ ನಾಯಕರನ್ನು ರೂಪಿಸಲು ಮೈಸೂರು ವಿವಿಯು ಎನ್‌ಐಪಿಎಂಗೆ ಎಲ್ಲಾ ರೀತಿ ಸಹಕಾರ ನೀಡಲಿದೆ. ವಿದ್ಯಾರ್ಥಿಗಳು ಜ್ಞಾನ ಯುಗದಲ್ಲಿ ಅಭಿವೃದ್ಧಿ ಹೊಂದಲು ಅಗತ್ಯವಿರುವ ಕೌಶಲ್ಯಗಳೊಂದಿಗೆ ಸಜ್ಜುಗೊಳಿಸಲು ಶೈಕ್ಷಣಿಕ ಮತ್ತು ಉದ್ಯಮದ ನಡುವಿನ ಅಂತರವನ್ನು ಕಡಿಮೆ ಮಾಡಲು ಒಟ್ಟಾಗಿ ಶ್ರಮಿಸೋಣ.
> -ಪ್ರೊ.ಎನ್.ಕೆ.ಲೋಕನಾಥ್,
> ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ

ವಿದ್ಯಾರ್ಥಿ ಮುಖಂಡನ ವಿರುದ್ಧ ಅಪಪ್ರಚಾರ ಖಂಡಿಸಿ ಎಸ್‌ಎಫ್‌ಐ ಪ್ರತಿಭಟನೆ



ಮೈಸೂರು, ಡಿ.15(ಜಿಎ)–ಸಂಸತ್ ಭವನದ ಮೇಲೆ ನಡೆದ ದಾಳಿಯನ್ನು ದುರುಪಯೋಗ ಮಾಡಿಕೊಂಡು ವಿದ್ಯಾರ್ಥಿ ಮುಖಂಡ ವಿಜಯ್ ಕುಮಾರ್ ಮತ್ತು ವಿದ್ಯಾರ್ಥಿ ಸಂಘಟನೆಯನ್ನು ಗುರಿ ಮಾಡಿ ಸಾಮಾಜಿಕ ಜಾಲ ತಾಣಗಳಲ್ಲಿ ಸುಳ್ಳು ಸುದ್ದಿ ಹರಡಿಸುತ್ತಿರುವುದನ್ನು ಖಂಡಿಸಿ, ಜಾಲತಾಣಗಳಲ್ಲಿ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿ, ಭಾರತೀಯ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾಗೂ ಪ್ರಗತಿಪರರಿಂದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಡಿ.13ರಂದು ಸಂಸತ್ ಭವನದ ವೀಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದವರು ಸ್ಮೋಕ್ ಬಾಂಬ್ ದಾಳಿ ಮಾಡಿರುವುದು ಖಂಡನೀಯ. ಆದರೆ, ಈ ಪ್ರಕರಣದಲ್ಲಿ ನಮ್ಮ ಸಂಘಟನೆಯನ್ನು ಎಳೆದು ತರಲಾಗುತ್ತಿದೆ. ದಾಳಿಯನ್ನು ದುರುಪಯೋಗ ಮಾಡಿಕೊಂಡು ನಮ್ಮ ಸಂಘಟನೆಯ ಜಿಲ್ಲಾಧ್ಯಕ್ಷ ಟಿ.ಎಸ್.ವಿಜಯ್ ಕುಮಾರ್ ಅವರ ಹಳೆ ಫೋಟೋ ಬಳಸಿ ಇವನೇ ಮನೋರಂಜನ್ ಎಂದು ಬಿಂಬಿಸಲಾಗುತ್ತಿದೆ. ವಿಜಯ್ ಕುಮಾರ್ ಅವರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಈ ಘಟನೆಗೂ ನಮ್ಮ ಸಂಘಟನೆಗೂ ಯಾವುದೇ ಸಂಬಂಧವಿಲ್ಲ. ಪೊಲೀಸರು ಈ ಕೂಡಲೇ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಭೀಮನಗೌಡ, ಜಿಲ್ಲಾಧ್ಯಕ್ಷ ವಿಜಯ್ ಕುಮಾರ್, ಮುಖಂಡರಾದ ಶಿವಕುಮಾರ್, ದರ್ಶನ್, ವೀರಭದ್ರ, ರೈತ ಸಂಘಟನೆಯ ಜಗದೀಶ್ ಸೂರ್ಯ, ಚಂದ್ರಶೇಖರ್, ಕಾರ್ಮಿಕ ಮುಖಂಡರಾದ ಜಯರಾಂ, ಕೆ.ಬಸವರಾಜ್, ಜಗನ್ನಾಥ್, ಉಗ್ರ ನರಸಿಂಹೇಗೌಡ, ಬಸವಂತ್ಯ, ಬಲಾರಂ, ರಾಜೇಂದ್ರ, ಸುಬ್ರಹ್ಮಣ್ಯ, ಲೀಲಾವತಿ, ಮೆಹಬೂಬ್, ನವೀನ್ ಕುಮಾರ್, ಕೃಷ್ಣಪ್ಪ ಪಾಲ್ಗೊಂಡಿದ್ದರು.

ರೈಲ್ವೆ ಪಿಂಚಣಿ ಅದಾಲತ್‌ನಲ್ಲಿ 19 ಪ್ರಕರಣ ಇತ್ಯರ್ಥ



ಮೈಸೂರು, ಡಿ.15(ಆರ್‌ಕೆ)–ನೈರುತ್ಯ ರೈಲ್ವೆ ಮೈಸೂರು ವಿಭಾಗವು ಇಂದು ನಡೆಸಿದ ಪಿಂಚಣಿ ಅದಾಲತ್‌ನಲ್ಲಿ 19 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು.

ಮೈಸೂರಿನ ವಿಭಾಗೀಯ ರೈಲ್ವೇ ವ್ಯವಸ್ಥಾಪಕಿ ಶಿಲ್ಪಿ ಅಗರ್‌ವಾಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಪಿಂಚಣಿ ಅದಾಲತ್‌ನಲ್ಲಿ 30 ನಿವೃತ್ತ ರೈಲ್ವೇ ನೌಕರರು ಉಪಸ್ಥಿತರಿದ್ದು, ಆ ಪೈಕಿ 22 ಮಂದಿ ಪಿಂಚಣಿ ಸಂಬಂಧ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿ, ಬಗೆಹರಿಸುವಂತೆ ಮನವಿ ಮಾಡಿಕೊಂಡರು.

ಪ್ರತಿಯೊಬ್ಬರ ದೂರು ಅರ್ಜಿಗಳನ್ನು ಪರಿಶೀಲಿಸಿ ಅಧಿಕಾರಿಗಳ ಮೂಲಕ 19 ಪ್ರಕರಣಗಳನ್ನು ಸ್ಥಳದಲ್ಲೇ ಇತ್ಯರ್ಥಗೊಳಿಸಿದ ಶಿಲ್ಪಿ ಅಗರ್‌ವಾಲ್ ಅವರು, ಉಳಿದ ದೂರುಗಳ ಬಗ್ಗೆ ಕಚೇರಿ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಶೀಘ್ರ ಪರಿಹಾರ ಕಲ್ಪಿಸುವುದಾಗಿ ಭರವಸೆ ನೀಡಿದರು. ರೈಲ್ವೇ ಇಲಾಖೆಯು ಪ್ರಯಾಣಿಕರ ಸ್ನೇಹಿಯಾಗಿ ಕೆಲಸ ಮಾಡುತ್ತಿದ್ದು, ಅನೇಕ ಸೌಲಭ್ಯಗಳನ್ನು ಕಲ್ಪಿಸುತ್ತಿರುವಂತೆಯೇ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾದವರಿಗೆ ನಿಯಮಾನುಸಾರ ಸಲ್ಲ ಬೇಕಾದ ಎಲ್ಲಾ ಸೌಲಭ್ಯ ಒದಗಿಸಲು ಬದ್ಧವಾಗಿದೆ. ಇಲಾಖೆಯಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಪಿಂಚಣಿ ಸಂಬಂಧಿಸಿದಂತೆ ವಿಳಂಬವಾಗಬಹುದು. ಆದರೆ ತೊಂದರೆಯಾಗುವುದಿಲ್ಲ ಎಂದು ಅವರು ನಿವೃತ್ತ ನೌಕರರಿಗೆ ಅಭಯ ನೀಡಿದರು.

ರೈಲ್ವೆ ಇಲಾಖೆ, ಬ್ಯಾಂಕ್, ವಿಮಾ ಕಂಪನಿ ಅಧಿಕಾರಿಗಳು ಪಿಂಚಣಿದಾರರ ಸಂದೇಹ ಮತ್ತು ಸಮಸ್ಯೆಗಳನ್ನು ಪರಿಹರಿಸಬೇಕು. ಕೇವಲ ಅದಾಲತ್‌ನಲ್ಲಿ ಮಾತ್ರ ಇತ್ಯರ್ಥವಾಗಲೆಂದು ಕಾಯದೇ ದೂರು ಬಂದ ತಕ್ಷಣ ಪರಿಶೀಲಿಸಿ ಪರಿಹಾರೋಪಾಯಗಳನ್ನು ಒದಗಿಸಬೇಕೆಂದು ಶಿಲ್ಪಿ ಅಗರ್‌ವಾಲ್ ತಿಳಿಸಿದರು.

ಮೈಸೂರಲ್ಲಿ ಈ ವರ್ಷದ 11 ತಿಂಗಳಲ್ಲಿ 2553 ಮಂದಿಗೆ ಆನ್‌ಲೈನ್ ವಂಚನೆ; 233 ಪ್ರಕರಣಗಳಷ್ಟೇ ದಾಖಲು



ಸುಲಭವಾಗಿ ಹಣ ಗಳಿಸುವ ಅತಿಯಾಸೆಯುಳ್ಳವರೇ ಆನ್‌ಲೈನ್ ವಂಚನೆ ಬಲಿಪಶುಗಳು!

ಗಣೇಶ್ ಎ.

ಮೈಸೂರು, ಡಿ.15–ಮಾಹಿತಿ ತಂತ್ರಜ್ಞಾನ ಬಳಕೆಯಿಂದ ವಂಚನೆಯ ಜಾಲ ಬೃಹದಾಕಾರವಾಗಿ ಬೆಳೆದಿದೆ. ಮೈಸೂರು ನಗರದಲ್ಲಿ ಈ ವರ್ಷ ನವೆಂಬರ್ ಕೊನೆಯವರೆಗೆ 2553 ಮಂದಿ ಈ ವಂಚಕರ ಬಲೆಗೆ ಬಿದ್ದು, ಕೋಟ್ಯಾಂತರ ರೂ. ಕಳೆದುಕೊಂಡಿದ್ದಾರೆ. ಆದರೆ ಎಫ್‌ಐಆರ್ ಆಗಿರುವುದು ಮಾತ್ರ 233 ಪ್ರಕರಣಗಳು.

ವಿಚಿತ್ರವೆಂದರೆ ಸೈಬರ್ ವಂಚಕರಿಂದ ಹಣ ಕಳೆದುಕೊಂಡಿರುವವರ ಪೈಕಿ ಶೇ.10ಕ್ಕಿಂತ ಕಡಿಮೆ ಜನರು ಮಾತ್ರ ಎಫ್‌ಐಆರ್ ದಾಖಲಿಸಿದ್ದಾರೆ. ಸೈಬರ್ ಕ್ರೈಂ ಠಾಣೆಗೆ ಲಭ್ಯವಾಗಿರುವ ದಾಖಲಾತಿಯ ಪ್ರಕಾರ 2553 ಮಂದಿ ವಂಚನೆಗೊಳಗಾಗಿದ್ದಾರೆಯಾದರೂ, ಕೇವಲ 233 ಪ್ರಕರಣ ಮಾತ್ರ ದಾಖಲಾಗಲು ಕಾರಣವೇನು ಎಂಬುದು ತಿಳಿಯದಾಗಿದೆ.

ಈ ಹಿಂದೆ ವಂಚಕರು ಮೊಬೈಲ್‌ಗೆ ಕರೆ ಮಾಡಿ ಎಟಿಎಂ ಕಾರ್ಡ್ ವಿವರ ಹಾಗೂ ಓಟಿಪಿ ಪಡೆದು ಬ್ಯಾಂಕ್ ಖಾತೆಯಲ್ಲಿದ್ದ ಹಣ ಅಕ್ರಮವಾಗಿ ಡ್ರಾ ಮಾಡಿಕೊಳ್ಳುವ ಮೂಲಕ ವಂಚಿಸುತ್ತಿದ್ದರು. ಆದರೆ ಈ ಸಂಬಂಧ ಜನರಲ್ಲಿ ಉಂಟಾದ ಜಾಗೃತಿ ಹಾಗೂ ಸೈಬರ್ ಕ್ರೈಂ ಪೊಲೀಸರು ತಂತ್ರಜ್ಞಾನವನ್ನು ಬಳಸಿ ವಂಚಕರನ್ನು ಪತ್ತೆ ಹಚ್ಚಲು ಆರಂಭಿಸಿದ್ದರಿಂದ ಈ ವಂಚಕರು ತಮ್ಮ ವಂಚನೆ ಶೈಲಿಯನ್ನು ಬದಲಾಯಿಸಿಕೊಂಡಿದ್ದಾರೆ.

ವಿಚಿತ್ರವೆಂದರೆ ಸೈಬರ್ ಕ್ರೈಂ ವಂಚಕರಿಗೆ ಬಲಿಯಾಗುತ್ತಿರುವುದು ವಿದ್ಯಾವಂತರು. ಅದರಲ್ಲೂ ಮಾಹಿತಿ ತಂತ್ರಜ್ಞಾನದಲ್ಲಿ ಪದವಿ ಪಡೆದಿರುವವರೇ ಹೆಚ್ಚು. ಅಲ್ಲದೇ ನಿರುದ್ಯೋಗ ಪದವೀಧರರು ಈ ವಂಚನೆಗೆ ಬಲಿಯಾಗುತ್ತಿದ್ದಾರೆ. ಮತ್ತೊಂದು ವಿಶೇಷವೆಂದರೆ ಹಲವು ಟೆಕ್ಕಿಗಳು ಕೈತುಂಬ ಸಂಬಳ ಪಡೆಯುತ್ತಿದ್ದರೂ, ಕಡಿಮೆ ಅವಧಿಯಲ್ಲಿ ಹೆಚ್ಚು ಲಾಭ ಗಳಿಸಬಹುದು ಎಂಬ ವಂಚಕರ ಮಾಯಾಜಾಲದ ಮಾತುಗಳಿಗೆ ಮರುಳಾಗಿ ಹಣ ಕಳೆದುಕೊಳ್ಳುತ್ತಿದ್ದಾರೆ. ಸೈಬರ್ ಕ್ರೈಂ ವಂಚಕರು, ವಿದ್ಯಾರ್ಥಿಗಳು ಹಾಗೂ ಗೃಹಿಣಿಯರನ್ನೂ ಬಿಟ್ಟಿಲ್ಲ.

ಪ್ರತೀ ದಿನ ಕೋಟ್ಯಾಂತರ ರೂ. ವಂಚನೆ ಮಾಡುತ್ತಿರುವ ಈ ಸೈಬರ್ ಕ್ರೈಂ ವಂಚಕರ ಜಾಲ ಕಾರ್ಯ ನಿರ್ವಹಿಸುತ್ತಿರುವುದು ಹೊರ ರಾಜ್ಯ ಹಾಗೂ ಹೊರ ದೇಶಗಳಲ್ಲಿ. ಪ್ರಮುಖವಾಗಿ ದೆಹಲಿ, ರಾಜಾಸ್ಥಾನ ಹಾಗೂ ಉತ್ತರ ಪ್ರದೇಶದ ಗಡಿ ಭಾಗ ಈ ವಂಚಕರ ಕೇಂದ್ರ ಸ್ಥಾನವಾಗಿದೆ ಎಂದು ಸೈಬರ್ ಕ್ರೈಂ ಪೊಲೀಸರು ಹೇಳುತ್ತಿದ್ದಾರೆ. ಎಲ್ಲೋ ದೂರದಲ್ಲಿ ಕುಳಿತು ಅನಾಯಾಸವಾಗಿ ವಂಚನೆ ಎಸಗುತ್ತಿರುವುದನ್ನು ಪತ್ತೆ ಹಚ್ಚುವುದೇ ಪೊಲೀಸರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ದಾಖಲಾಗುವ ಸೈಬರ್ ಕ್ರೈಂ ಪ್ರಕರಣಗಳಲ್ಲಿ ಶೇ.5ರಷ್ಟು ಕೂಡ ಪತ್ತೆಯಾಗುತ್ತಿಲ್ಲ. ಕೆಲವೇ ಕೆಲವು ಪ್ರಕರಣಗಳಲ್ಲಿ ಹಣ ಕಳೆದುಕೊಂಡವರಿಗೆ ಅದು ವಾಪಸ್ಸಾಗಿದೆ.

ವಂಚನೆ ಹೇಗೆ?: ಸಾಮಾಜಿಕ ಜಾಲ ತಾಣಗಳಾದ ವಾಟ್ಸಾಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮತ್ತು ಟೆಲಿಗ್ರಾಂ ಸೈಬರ್ ಕ್ರೈಂ ವಂಚಕರ ಬಹು ದೊಡ್ಡ ಅಸ್ತ್ರಗಳು. ಈ ಸಾಮಾಜಿಕ ಜಾಲ ತಾಣಗಳ ಮೂಲಕ ಪಾರ್ಟ್ ಟೈಂ ಜಾಬ್ ಇರುವುದಾಗಿ ಸಂದೇಶವನ್ನು ಅಪ್‌ಲೋಡ್ ಮಾಡಿರುತ್ತಾರೆ. ಅದರಲ್ಲಿ ದಿನಕ್ಕೆ 3 ರಿಂದ 5 ಸಾವಿರ ರೂ. ಗಳಿಸಬಹುದು ಎಂದು ಆಮಿಷವನ್ನು ಒಡ್ಡಲಾಗಿರುತ್ತದೆ. ಸಾಮಾಜಿಕ ಜಾಲ ತಾಣಗಳನ್ನು ಹೆಚ್ಚಾಗಿ ಬಳಸುವುದು ವಿದ್ಯಾವಂತರು ಎಂಬುದು ವಿಶೇಷ. ಈ ಪಾರ್ಟ್ ಟೈಂ ಜಾಬ್ ಸಂದೇಶದ ಲಿಂಕ್ ಮೇಲೆ ಕ್ಲಿಕ್ ಮಾಡಿದ ತಕ್ಷಣ ಪೇಜ್‌ವೊಂದು ತೆರೆದುಕೊಳ್ಳುತ್ತದೆ. ಹಣ ಗಳಿಸಬೇಕಾದರೆ ಬಹಳ ಕಷ್ಟಪಡಬೇಕಾದ ಅಗತ್ಯವೇನಿಲ್ಲ. ಕೆಲವು ಹೋಟೆಲ್‌ಗಳಿಗೆ 5 ಸ್ಟಾರ್‌ಗಳನ್ನು ಒತ್ತುವುದು, ಕೆಲವು ವೀಡಿಯೋಗಳನ್ನು ಶೇರ್ ಮತ್ತು ಲೈಕ್ ಮಾಡುವುದು, ಇಷ್ಟು ಮಾಡಿದರೆ ಸಾಕು, ಹೆಚ್ಚಿನ ಮೊತ್ತದ ಕಮಿಷನ್ ದೊರೆಯುತ್ತದೆ ಎಂದು ನಮೂದಿಸಿರುವುದನ್ನು ಕಂಡು ಮುಂದುವರೆದರೆ ಪ್ರಾರಂಭದಲ್ಲಿ ಸಣ್ಣ ಮೊತ್ತದ ಹೂಡಿಕೆ ಮಾಡಿಸಿಕೊಂಡು ಅದಕ್ಕೆ ಕಮಿಷನ್ ಕೂಡ ನೀಡಲಾಗುತ್ತದೆ. ಉದಾಹರಣೆಗೆ ಸಾವಿರ ರೂ. ಹೂಡಿಕೆ ಮಾಡಿದ್ದರೆ ಕೆಲವೇ ಕೆಲವು ನಿಮಿಷಗಳಲ್ಲಿ 500 ರೂ. ಕಮಿಷನ್ ಜಮೆ ಮಾಡಲಾಗುತ್ತದೆ. ನಂತರ ಅವರನ್ನು ಟೆಲಿಗ್ರಾಂ ಗ್ರೂಪ್‌ವೊಂದಕ್ಕೆ ಸೇರಿಸಿ ಅವರಿಗೆ ಪ್ರತ್ಯೇಕವಾದ ಅಕೌಂಟ್‌ವೊಂದನ್ನು ಕ್ರಿಯೇಟ್ ಮಾಡಿಕೊಡಲಾಗುತ್ತದೆ. ಮುಂದಿನ ದಿನಗಳಲ್ಲಿ ಹಣ ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದ ತಕ್ಷಣ ಟೆಲಿಗ್ರಾಂ ಗ್ರೂಪ್‌ನಲ್ಲಿ ಕ್ರಿಯೇಟ್ ಆಗಿರುವ ಅಕೌಂಟ್‌ಗೆ ಕಮಿಷನ್ ಸೇರಿರುವುದಾಗಿ ತೋರಿಸಲಾಗುತ್ತದೆ. ಅದನ್ನು ನೋಡಿದವರು ಥಟ್ಟನೆ ಮರುಳಾಗುತ್ತಾರೆ. ಹೆಚ್ಚೆಚ್ಚು ಹಣ ಹೂಡಿಕೆ ಮಾಡಿ ಟಾಸ್ಕ್ ಪೂರೈಸುತ್ತಾರೆ. ಉದಾಹರಣೆಗೆ ಟೆಲಿಗ್ರಾಂ ಗ್ರೂಪ್‌ನಲ್ಲಿರುವ ಅಕೌಂಟ್‌ನಲ್ಲಿ ನಾವು 10 ಸಾವಿರ ರೂ. ಹೂಡಿಕೆ ಮಾಡಿದ್ದರೆ, ಕಮಿಷನ್ ಸೇರಿ 15 ಸಾವಿರ ರೂ. ತೋರಿಸುತ್ತದೆ. ಈ ಆಮಿಷಕ್ಕೆ ಬಲಿಯಾಗುವವರು ದೊಡ್ಡ ಮೊತ್ತದ ಹಣವನ್ನು ಹೂಡಿಕೆ ಮಾಡುತ್ತಾರೆ. ನಂತರ ತಾವು ಕಡಿಮೆ ಅವಧಿಯಲ್ಲಿ ಲಕ್ಷಾಂತರ ರೂ. ಕಮಿಷನ್ ಪಡೆದಿದ್ದೇವೆ ಎಂಬ ಖುಷಿಯಲ್ಲಿ ಟೆಲಿಗ್ರಾಂ ಗ್ರೂಪ್ ಅಕೌಂಟ್‌ನಲ್ಲಿರುವ ಹಣ ಡ್ರಾ ಮಾಡಲು ಹೋದರೆ ಅದು ಸಾಧ್ಯವಾಗುವುದೇ ಇಲ್ಲ. ಈ ಸಂದರ್ಭದಲ್ಲಿ ವಂಚಕರೊಂದಿಗೆ ಸಂವಹನ ನಡೆಸಿದರೆ ಮತ್ತಷ್ಟು ಹಣ ಹೂಡಿಕೆ ಮಾಡಿದರೆ ಮಾತ್ರ ಡ್ರಾ ಮಾಡಲು ಸಾಧ್ಯ ಎಂದು ಮತ್ತೆ ಆಫರ್ ನೀಡುತ್ತಾರೆ. ಕೆಲವರು ತಮ್ಮ ಬಳಿ ಹಣವಿಲ್ಲದಿದ್ದರೂ ಸಾಲ–ಸೋಲ ಮಾಡಿ ಹಣ ಹೂಡಿಕೆ ಮಾಡಿದ ನಂತರವೂ ಅವರ ಹಣವನ್ನು ಡ್ರಾ ಮಾಡಲು ಸಾಧ್ಯವಾಗುವುದಿಲ್ಲ. ಕೊನೆಗೆ ತಾವು ಮೋಸ ಹೋಗಿರುವುದು ಮನವರಿಕೆಯಾದ ನಂತರ ಪೊಲೀಸ್ ಠಾಣೆಗೆ ಹೋಗಿ ದೂರು ನೀಡುತ್ತಾರೆ.

ಅಲ್ಲದೇ ಮೊಬೈಲ್‌ಗಳಿಗೆ ಸಾಮಾನ್ಯ ಮೆಸೇಜ್ ರವಾನಿಸುವ ಮೂಲಕವೂ ವಂಚನೆ ಮಾಡಲಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಿಮ್ಮ ಖಾತೆಗೆ ಒಂದು ಲಕ್ಷ ರೂ. ಜಮೆ ಆಗಿದೆ. ಈ ಲಿಂಕ್ ಅನ್ನು ಕ್ಲಿಕ್ ಮಾಡಿ ಹಣ ಡ್ರಾ ಮಾಡಿಕೊಳ್ಳಬಹುದು ಎಂಬ ಸಂದೇಶ ಮೊಬೈಲ್‌ಗೆ ರವಾನಿಸಲಾಗುತ್ತದೆ. ಅದನ್ನು ನಂಬಿ ಕ್ಲಿಕ್ ಮಾಡಿದ ನಂತರ ನಿಮ್ಮ ಕೈವೈಸಿಯನ್ನು ಪಡೆದು ಬ್ಯಾಂಕ್ ಖಾತೆಯಿಂದ ಹಣ ಎಗರಿಸಲಾಗುತ್ತದೆ. ಆದರೆ ಇಂತಹ ವಂಚನೆಗೆ ಬಲಿಯಾಗುವವರು ಕಡಿಮೆ ಸಂಖ್ಯೆಯಲ್ಲಿದ್ದಾರೆ ಎಂಬುದು ಸೈಬರ್ ಕ್ರೈಂ ಅಪರಾಧಗಳ ದಾಖಲೆಯಿಂದ ತಿಳಿದು ಬಂದಿದೆ.

ಸೈಬರ್ ಕ್ರೈಂ ಬಗ್ಗೆ ಪೊಲೀಸರು ಎಷ್ಟೇ ಜಾಗೃತಿ ಮೂಡಿಸುತ್ತಿದ್ದರೂ ಅತಿಯಾಸೆಗೆ ಬಲಿಯಾಗುತ್ತಿರುವ ವಿದ್ಯಾವಂತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಸೈಬರ್ ಕ್ರೈಂ ವಂಚಕರೂ ನಾನಾ ರೀತಿಯ ವಂಚನೆಗಳ ಮೂಲಕ ಕೋಟ್ಯಾಂತರ ರೂ. ಕುಳಿಸುತ್ತಿದ್ದಾರೆ.



> ಇತ್ತೀಚೆಗೆ ವಂಚಕರು ಐಎಎಸ್, ಐಪಿಎಸ್ ಅಧಿಕಾರಿಗಳ ನಕಲಿ ಫೇಸ್‌ಬುಕ್ ಅಕೌಂಟ್ ಅನ್ನು ಕ್ರಿಯೇಟ್ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಫ್ರೆಂಡ್ ಲಿಸ್ಟ್‌ನಲ್ಲಿರುವವರಿಗೆ ಸಂದೇಶ ರವಾನಿಸುವ ಮೂಲಕ ವಂಚಿಸಲಾರಂಭಿಸಿದ್ದಾರೆ. ನಮಗೆ ಅಧಿಕಾರಿಯ ಫೇಸ್‌ಬುಕ್ ಅಕೌಂಟ್‌ನಿಂದ ಫ್ರೆಂಡ್ ರಿಕ್ವೆಸ್ಟ್ ಬಂದ ತಕ್ಷಣ ಖುಷಿಯಾಗಿ ಅದನ್ನು ಅಕ್ಸೆಪ್ಟ್ ಮಾಡುತ್ತೇವೆ. ನಂತರ ಮೆಸೆಂಜರ್‌ನಲ್ಲಿ ಚಾಟ್ ಮಾಡುವ ವಂಚಕರು ನಮ್ಮ ಮೊಬೈಲ್ ನಂಬರ್ ಅನ್ನು ಕೇಳಿ ಪಡೆಯುತ್ತಾರೆ. ಕೊಟ್ಟ ತಕ್ಷಣ 'ಮಿಲಿಟರಿಯಲ್ಲಿರುವ ನಮ್ಮ ಸ್ನೇಹಿತರು ಫರ್ನೀಚರ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಅವರಿಗೆ ನಿಮ್ಮ ನಂಬರ್ ಅನ್ನು ಕೊಟ್ಟಿರುತ್ತೇನೆ' ಎಂದು ತಿಳಿಸುತ್ತಾರೆ. ನಂತರ ಅಪರಿಚಿತ ವ್ಯಕ್ತಿ ನಮಗೆ ಕರೆ ಮಾಡಿ ಕೇವಲ ಫರ್ನೀಚರ್ ಮಾತ್ರವಲ್ಲ, ಕಾರು, ದ್ವಿಚಕ್ರ ವಾಹನ, ವಾಷಿಂಗ್ ಮೆಷಿನ್, ಫ್ರಿಡ್ಜ್ ಒಳಗೊಂಡಂತೆ ಎಲ್ಲಾ ವಸ್ತುಗಳನ್ನೂ ನಾವು ನಂಬಲು ಸಾಧ್ಯವಾಗದಷ್ಟು ಕಡಿಮೆ ಬೆಲೆಗೆ ಕೊಡುವುದಾಗಿ ತಿಳಿಸುತ್ತಾನೆ. ವಾಟ್ಸಾಪ್ ಮೂಲಕ ವಸ್ತುಗಳ ಫೋಟೋವನ್ನೂ ಕಳುಹಿಸುತ್ತಾನೆ. ನೀವು ಐಎಎಸ್ ಅಥವಾ ಐಪಿಎಸ್ ಅಧಿಕಾರಿಯ ಸ್ನೇಹಿತರಾಗಿರುವುದರಿಂದ ಕಡಿಮೆ ಬೆಲೆಗೆ ಕೊಡುವುದಾಗಿ ಹೇಳುತ್ತಾನೆ. ಇದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರೆ, ಮಿಲಿಟರಿಯವರಿಗೆ ಸಂಪೂರ್ಣ ತೆರಿಗೆ ವಿನಾಯ್ತಿಯೊಂದಿಗೆ ವಸ್ತುಗಳು ದೊರೆಯುತ್ತವೆ ಎಂಬ ಭರವಸೆ ಹುಟ್ಟಿಸುತ್ತಾನೆ. ಅದು ಮಾತ್ರವಲ್ಲ, ನೀವು ಹಣ ವರ್ಗಾವಣೆ ಮಾಡಿ ಸಾಕು, ವಸ್ತುಗಳು ನಿಮ್ಮ ಮನೆ ಬಾಗಿಲಿಗೇ ತಲುಪಿಸುತ್ತೇನೆ ಎಂದೂ ಹೇಳುತ್ತಾನೆ. ಐಎಎಸ್ ಅಥವಾ ಐಪಿಎಸ್ ಅಧಿಕಾರಿಯ ಸ್ನೇಹಿತನಾಗಿರುವ ಆತ ಮೋಸ ಮಾಡಲಾರ ಎಂಬ ನಂಬಿಕೆಯೊಂದಿಗೆ ಹಣ ವರ್ಗಾವಣೆ ಮಾಡಿ ಮೋಸ ಹೋಗಿರುವವರು ಹಲವು ಮಂದಿ.

> ಒಟ್ಟಾರೆ ಸೈಬರ್ ಕ್ರೈಂ ವಂಚಕರಿಗೆ ಬಲಿಯಾಗುತ್ತಿರುವವರು ಬಹುತೇಕ ಮಂದಿ ಭಾರೀ ವಿದ್ಯಾವಂತರು, ಬುದ್ಧಿವಂತರೇ! ಕೆಲವು ಸರ್ಕಾರಿ ಅಧಿಕಾರಿಗಳೂ ಕೂಡ ಹಣದಾಸೆಗಾಗಿ ಸೈಬರ್ ಕ್ರೈಂ ವಂಚಕರ ಬಲೆಗೆ ಬಿದ್ದು, ಲಕ್ಷಾಂತರ ರೂ. ಕಳೆದುಕೊಂಡಿದ್ದಾರೆ. ಇದೇ ವರ್ಷ ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವೊಂದರಲ್ಲಿ ವ್ಯಕ್ತಿಯೊಬ್ಬರು ಬರೋಬ್ಬರಿ 2.17 ಕೋಟಿ ರೂ.ಗಳನ್ನು ಕಳೆದುಕೊಂಡಿದ್ದಾರೆ.

ಮೈಸೂರು ಮಿತ್ರ ಶನಿವಾರ 16 ಡಿಸೆಂಬರ್ 2023

ಎಲ್ಲೆಡೆ ಅರೆಭಾಷೆ ದಿನಾಚರಣೆ ಜರುಗಲಿ

ಭಾಗಮಂಡಲ ಗ್ರಾಪಂ ಅಧ್ಯಕ್ಷ ಕಾಳನ ರವಿ ಆಶಯ



ಮಡಿಕೇರಿ, ಡಿ.15–ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಹಲವು ಭಾಗಗಳಲ್ಲಿ ಅರೆಭಾಷೆ ಮಾತನಾಡುವವರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಗ್ರಾಮೀಣ ಪ್ರದೇಶದಲ್ಲೂ 'ಅರೆಭಾಷೆ ದಿನಾಚರಣೆ' ಆಯೋಜಿಸುವಂತಾಗಬೇಕು ಎಂದು ಭಾಗಮಂಡಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಕಾಳನ ರವಿ ಹೇಳಿದರು.

ನಗರದ ಗೌಡ ಸಮಾಜ ಸಭಾಂಗಣದಲ್ಲಿ ಶುಕ್ರವಾರ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಕೊಡಗು ಗೌಡ ಸಮಾಜಗಳ ಒಕ್ಕೂಟ ಮತ್ತು ಜಿಲ್ಲೆಯ ಗೌಡ ಸಮಾಜ–ಸಂಘಟನೆಗಳ ಸಹಯೋಗದಲ್ಲಿ ನಡೆದ 'ಅರೆಭಾಷೆ ದಿನಾಚರಣೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕನ್ನಡ ಉಪ ಭಾಷೆಯಾದ ಅರೆಭಾಷೆಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಮನೆಗಳಲ್ಲಿ ಮಾತನಾಡುವಂತಾಗಬೇಕು. ಇದರಿಂದ ಮಕ್ಕಳಿಗೆ ಭಾಷೆ ಕಲಿಸಲು ಸಾಧ್ಯವಾಗಲಿದೆ. ಭಾಗಮಂಡಲ ವ್ಯಾಪ್ತಿಯಲ್ಲಿ ಶೇ.75ಕ್ಕೂ ಹೆಚ್ಚು ಜನರು ಅರೆಭಾಷೆ ಮಾತನಾಡುವವರು ವಾಸಿಸುತ್ತಿದ್ದಾರೆ. ಅರೆಭಾಷೆ ದಿನವನ್ನು ಹಬ್ಬದ ರೀತಿ ಆಚರಿಸುವಂತಾಗಬೇಕು ಎಂದರು. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಕೊಲ್ಯದ ಗಿರೀಶ್ ಮಾತನಾಡಿ, ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸ್ಥಾಪನೆಗೆ ಹಲವರು ಶ್ರಮಿಸಿದ್ದಾರೆ. ಅರೆಭಾಷೆ, ಸಂಸ್ಕೃತಿ, ಸಾಹಿತ್ಯವನ್ನು ಬೆಳೆಸುವತ್ತ ಒತ್ತು ನೀಡಿ ಕಾರ್ಯಕ್ರಮವನ್ನು ತಮ್ಮ ಅವಧಿಯಲ್ಲಿ ಆಯೋಜಿಸಲಾಗಿತ್ತು ಎಂದು ತಿಳಿಸಿದರು.

ಅರೆಭಾಷೆ ವಿಶಿಷ್ಟ ಮಾತೃ ಹೃದಯ ಭಾಷೆಯಾಗಿದ್ದು, ಈ ಭಾಷೆಯ ಅಸ್ತಿತ್ವ ಉಳಿಸುವಂತಾಗಬೇಕು. ಸಾಂಸ್ಕೃತಿಕ ಸಮಾವೇಶಗಳು, ಸಾಹಿತ್ಯ ಸಮ್ಮೇಳನಗಳು, ಹೀಗೆ ಹಲವು ಕಾರ್ಯಕ್ರಮಗಳನ್ನು ಹೊರ ಜಿಲ್ಲೆಗಳಲ್ಲೂ ಆಯೋಜಿಸಿ ಅರೆಭಾಷೆ ಬೆಳವಣಿಗೆಗೆ ಶ್ರಮಿಸಲಾಗಿತ್ತು. ಹಿಂಗಾರು ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುವ ನಿಟ್ಟಿನಲ್ಲಿ 'ಸಂಪಾದಕೀಯ ಸಲಹಾ ಸಮಿತಿ' ರಚಿಸಿ ಹೊರ ತರುವಂತಾಗಬೇಕು ಎಂದು ಸಲಹೆ ಮಾಡಿದರು. ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಲಕ್ಷ್ಮೀ ನಾರಾಯಣ ಕಜೆಗದ್ದೆ ಮಾತನಾಡಿ, ಅರೆಭಾಷೆ ಬೆಳವಣಿಗೆಗೆ ಪ್ರತಿಯೊಬ್ಬರೂ ಅರೆಭಾಷೆ ಮಾತಾಡುವ ಜೊತೆಗೆ, ಓದುವ ಮತ್ತು ಬರೆಯುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಲೇಖನ, ಕಥೆ, ಕವನ, ಬರೆಯುವ ಮೂಲಕ ಅರೆಭಾಷೆ ಬೆಳವಣಿಗೆಗೆ ಮುಂದಾಗಬೇಕಿದೆ. 'ಸಾಹೇಬ್ರು ಬಂದವೆ' ನಾಟಕವನ್ನು ಹಲವು ಕಡೆ ಪ್ರದರ್ಶಿಸುವ ಮೂಲಕ ಅರೆಭಾಷೆ ಮಹತ್ವ ತಿಳಿಸುವಲ್ಲಿ ಸಹಕಾರಿಯಾಯಿತು ಎಂಬುದನ್ನು ಮರೆಯುವಂತಿಲ್ಲ. ಅರೆಭಾಷೆಯಲ್ಲಿ ವಿಡಂಬನೆ, ಹಾಸ್ಯ, ಗಂಭೀರತೆ ಮತ್ತಿತರ ಪ್ರಯೋಗಗಳು ಈ ನಾಟಕದಲ್ಲಿ ಕಾಣಬಹುದು ಎಂದರು.

ನಿವೃತ್ತ ಪೊಲೀಸ್ ಅಧೀಕ್ಷಕ ಚೊಕ್ಕಾಡಿ ಅಪ್ಪಯ್ಯ, ಕೊಡಗು ಗೌಡ ಸಮಾಜದ ಅಧ್ಯಕ್ಷ ಪೇರಿಯನ ಜಯಾನಂದ, ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಅಂಬೆಕಲ್ ನವೀನ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಚಿನ್ನಸ್ವಾಮಿ, ಕೊಡಗು ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಅಮೆ ದಮಯಂತಿ ಮಾತನಾಡಿದರು.

ಕೊಡಗು ಗೌಡ ಮಹಿಳಾ ಒಕ್ಕೂಟದ ಉಪಾಧ್ಯಕ್ಷೆ ಬೈತಡ್ಕ ಜಾನಕಿ ಬೆಳ್ಯಪ್ಪ, ಕುದುಪಜೆ ರೋಹಿಣಿ, ಪೇರಿಯನ ಮುತ್ತಮ್ಮ ನಾರೋಲನ ಭಾಗೀರಥಿ, ಬಾರನ ಶೋಭಾ, ಮೂಲೆಮಜಲು ಅಮಿತಾ, ಕಟ್ರತನ ಲಲಿತ ಐಯ್ಯಣ್ಣ, ಬೈಮನ ಜ್ಯೋತಿ, ರಿಜಿಸ್ಟ್ರಾರ್ ಚಿನ್ನಸ್ವಾಮಿ, ವಿನೋದ್ ಮೂಡಗದ್ದೆ, ಕೊಡಗು ಗೌಡ ಸಮಾಜಗಳ ಒಕ್ಕೂಟ ಮತ್ತು ಕೊಡಗು ಗೌಡ ವಿದ್ಯಾಸಂಘದ ಕಾರ್ಯದರ್ಶಿ ಪೇರಿಯನ ಉದಯ್ ಕುಮಾರ್ ಇದ್ದರು.

ಇದೇ ವೇಳೆ ಕೊಡಗು ಗೌಡ ಮಹಿಳಾ ಒಕ್ಕೂಟದ ಸದಸ್ಯರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಬೈತಡ್ಕ ಜಾನಕಿ ಬೆಳ್ಯಪ್ಪ ಅರೆಭಾಷೆ ದಿನಾಚರಣೆ ಮಹತ್ವದ ಕುರಿತು ಹಾಡು ಹಾಡಿದರು. ಪ್ರೇಮ ರಾಘವಯ್ಯ ಮತ್ತು ರೇವತಿ ರಮೇಶ್ ನಾಡಗೀತೆ ಹಾಡಿದರು.

> ಅರೆಭಾಷೆ ಅಕಾಡೆಮಿ ಸ್ಥಾಪನೆಗೆ ಎಲ್ಲರೂ ಶ್ರಮಿಸಿದ್ದಾರೆ. ಅರೆಭಾಷೆಯನ್ನು ಮುಂದಿನ ಜನಾಂಗಕ್ಕೂ ತಿಳಿಸುವ ನಿಟ್ಟಿನಲ್ಲಿ ಅರೆಭಾಷೆ ಮಾತನಾಡುವಂತಾಗಬೇಕು. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಕಾರ್ಯ ಚಟುವಟಿಕೆಗೆ ಕೊಡಗು ಗೌಡ ಸಮಾಜಗಳ ಒಕ್ಕೂಟ ಎಲ್ಲಾ ಸಹಕಾರ ನೀಡುತ್ತಿದೆ. ಇದರಿಂದ ಹಲವು ಕಾರ್ಯಕ್ರಮಗಳ ಆಯೋಜನೆಗೆ ಸಹಕಾರಿಯಾಗಿದೆ.
>
> -ಸೂರ್ತಲೆ ಆರ್.ಸೋಮಣ್ಣ, ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ

ಡಿ.18, ಗನ್ ಕಾರ್ನಿವಲ್ ತೋಕ್ ನಮ್ಮೆ ಆಚರಣೆ

ಮಡಿಕೇರಿ, ಡಿ.15–ವಿಶ್ವ ಸಂಸ್ಥೆಯ ಜಾಗತಿಕ ಅಲ್ಪಸಂಖ್ಯಾತ ಜನಾಂಗಗಳ ಹಕ್ಕುಗಳ ದಿನದ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ 14ನೇ ವರ್ಷದ 'ಗನ್ ಕಾರ್ನಿವಲ್ ತೋಕ್ ನಮ್ಮೆ'ಯನ್ನು ಡಿ.18ರಂದು ನಾಪೋಕ್ಲುವಿನ ಕೊಳಕೇರಿಯ ನೂರಂಬದ ನಾಡ್‌ನಲ್ಲಿ ಆಚರಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ಜನಪದೀಯ ಹಬ್ಬವಾಗಿ ತೋಕ್ ನಮ್ಮೆಯನ್ನು ಉತ್ಸಾಹದಿಂದ ಆಚರಿಸುವ ಮೂಲಕ ಕೋವಿ ಹೊಂದುವ ಕೊಡವರ ಹಕ್ಕನ್ನು ಪ್ರತಿಪಾದಿಸಲಾಗುವುದು. ಕೊಳಕೇರಿಯ ನೂರಂಬದ ನಾಡ್‌ನಲ್ಲಿರುವ ರಮ್ಮಿ ನಾಣಯ್ಯ ಹಾಗೂ ರೀನಾ ನಾಣಯ್ಯ ಅವರ ಕಾವೇರಿ ಎಸ್ಟೇಟ್‌ನ ನದಿ ದಂಡೆಯಲ್ಲಿ ನಮ್ಮೆ ನಡೆಯಲಿದ್ದು, ಕೋವಿಗಳನ್ನು ಸಾಂಪ್ರದಾಯಿಕ ಹೂವುಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಗುವುದು. ನಂತರ ಮಕ್ಕಳು, ಮಹಿಳೆಯರು ಹಾಗೂ ಪುರುಷರಿಗೆ ಗುಂಡು ಹಾರಿಸುವ ಸ್ಪರ್ಧೆ ನಡೆಯಲಿದೆ.

ನಮ್ಮೆಯಲ್ಲಿ ಹೆಚ್ಚು ಬಂದೂಕುಗಳನ್ನು ಪ್ರದರ್ಶಿಸುವುದರಿಂದ ಪ್ರತಿಯೊಬ್ಬರು ಬಂದೂಕು ಸಹಿತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ಕಾರ್ಯಕ್ರಮದಲ್ಲಿ ಕಲೆ, ಶಿಲ್ಪ ಕಲೆ, ಕೊಡವ ಸಾಹಿತ್ಯ, ಪತ್ರಿಕೋದ್ಯಮ, ಸಮಾಜಿಕ, ಶಿಕ್ಷಣ, ಕೃಷಿ, ಉದ್ಯಮಶೀಲತೆ ಮುಂತಾದ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರಿಗೆ 'ಕೊಡವ ವಿಭೂಷಣ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಬಂದೂಕು ಕೊಡವ ಜನಾಂಗದ ಧಾರ್ಮಿಕ–ಜನಾಂಗೀಯ ಸಂಸ್ಕಾರವಾಗಿದೆ. ಗತಕಾಲದ ಶ್ರೀಮಂತ ಭಂಡಾರವಾಗಿದೆ. ಇದೇ ಕಾರಣಕ್ಕೆ ಪ್ರಸ್ತುತದಲ್ಲಿ ಮತ್ತು ಭವಿಷ್ಯದಲ್ಲೂ ಈ ನಮ್ಮ ಹಕ್ಕು ಮುಂದುವರಿಯುತ್ತದೆ. ಕೊಡವರಿಗೆ ಬಂದೂಕನ್ನು ಹೊಂದಲು ವಿನಾಯಿತಿ ನೀಡಲಾಗಿದೆ. ಸ್ವಾತಂತ್ರ್ಯ ಪಡೆದ ನಂತರ, ಭಾರತೀಯ ಶಸ್ತ್ರಾಸ್ತ್ರ ಕಾಯ್ದೆಯಡಿ ಗನ್ ವಿನಾಯಿತಿ ಹಕ್ಕು ಅಸ್ತಿತ್ವದಲ್ಲಿದೆ. ಈ ಪ್ರಾಚೀನ ಹೆಮ್ಮೆಯನ್ನು ರಕ್ಷಿಸಿ, ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು ಎನ್ನುವ ಉದ್ದೇಶದಿಂದ ಸಿಎನ್‌ಸಿ ಸಂಘಟನೆ ತೋಕ್ ನಮ್ಮೆಯನ್ನು ಸಾರ್ವತ್ರಿಕವಾಗಿ ಆಚರಿಸಿಕೊಂಡು ಬರುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಾಪ್‌ಸಿಂಹ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಕುಶಾಲನಗರ, ಡಿ.15–ಸಂಸತ್ ಭವನದ ಕಲಾಪಕ್ಕೆ ನುಗ್ಗಿ ಕೋಲಾಹಲ ಸೃಷ್ಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದ ಪ್ರತಾಪ್ ಸಿಂಹ ವಿರುದ್ಧ ಇಲ್ಲಿನ ಬ್ಲಾಕ್ ಕಾಂಗ್ರೆಸ್ ಸಮಿತಿಯ ಕಾರ್ಯಕರ್ತರು ಶುಕ್ರವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿ ಆವರಣದಿಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಮೆರವಣಿಗೆ ನಡೆಸಿ, ನಂತರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೆಲಕಾಲ ರಸ್ತೆ ಸಂಚಾರ ತಡೆ ನಡೆಸಿ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ತನ್ನ ಬೆಂಬಲಿಗರ ಕಿಡಿಗೇಡಿತನದಿಂದ ಸಂಸತ್‌ನಲ್ಲಿ ಭದ್ರತಾ ವೈಫಲ್ಯಕ್ಕೆ ಕಾರಣವಾದ ಪ್ರತಾಪ್ ಸಿಂಹ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ವಿ.ಪಿ.ಶಶಿಧರ್ ಮಾತನಾಡಿ, ಸಂಸತ್‌ಗೆ ಸೂಕ್ತ ಭದ್ರತೆ ಕಲ್ಪಿಸಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ವಿಫಲರಾಗಿದ್ದಾರೆ. ಮೋದಿ ಅವರ ಕನಸಿನ ಸಂಸತ್‌ನ ಘನತೆಗೆ ಚ್ಯುತಿ ತರುವಂತಹ ಕೃತ್ಯ ನಡೆದಿದೆ. ಈ ಬಗ್ಗೆ ಕೊಡಗು–ಮೈಸೂರು ಜನತೆ ಎಚ್ಚೆತ್ತುಕೊಳ್ಳಬೇಕು. ಆಗಂತುಕರಿಗೆ ಪಾಸ್ ನೀಡಿ ಜಗತ್ತಿನ ಮುಂದೆ ಭಾರತ ತಲೆತಗ್ಗಿಸುವಂತಹ ಕೃತ್ಯಕ್ಕೆ ಪರೋಕ್ಷವಾಗಿ ಕಾರಣವಾದ ಪ್ರತಾಪ್ ಸಿಂಹ ಅವರನ್ನು ಸಂಸತ್ ಸ್ಥಾನದಿಂದ ಕೂಡಲೇ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಪುರಸಭೆ ಸದಸ್ಯರಾದ ಶೇಖ್ ಖಲೀಮುಲ್ಲಾ, ಎಂ.ಕೆ.ದಿನೇಶ್, ಕಾರ್ಮಿಕ ಘಟಕದ ಟಿ.ಪಿ.ಹಮೀದ್, ಶಿವಶಂಕರ್, ಕೆಪಿಸಿಸಿ ಸದಸ್ಯ ನಟೇಶ್‌ಗೌಡ, ಪ್ರಮುಖರಾದ ರಜಾಕ್, ಫಿಲೋಮಿನಾ, ನವೀನ್, ರಂಜನ್, ಪ್ರಕಾಶ್, ಆದಂ, ನಾರಾಯಣ್, ಮುಸ್ತಾಫ ಮತ್ತಿತರರು ಇದ್ದರು.

ಸಾರ್ವಜನಿಕರಿಂದ ದೂರು ಸ್ವೀಕಾರ

ಗೋಣಿಕೊಪ್ಪ, ಡಿ.15–ಪೊನ್ನಂಪೇಟೆ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಮಡಿಕೇರಿ ಲೋಕಾಯುಕ್ತ ಅಧಿಕಾರಿ ಪವನ್ ಕುಮಾರ್ ಸಾರ್ವಜನಿಕರಿಂದ ದೂರು ಸ್ವೀಕರಿಸಿದರು. ಇದೇ ವೇಳೆ ಕುಂದ ಗ್ರಾಮದ ಚೇಂದಿರ ವನಿತಾ ಅಪ್ಪಣ್ಣ, ತಮ್ಮ ತೋಟಕ್ಕೆ ತೆರಳದಂತೆ ರಸ್ತೆಯಲ್ಲಿ ಗುಂಡಿ ತೋಡಲಾಗಿದೆ. ಇದರಿಂದ ವೃದ್ಧ ದಂಪತಿ ಮನೆಗೆ ತೆರಳಲು ದಾರಿ ಇಲ್ಲದಂತಾಗಿದೆ ಎಂದು ಲೋಕಾಯುಕ್ತ ಅಧಿಕಾರಿಗಳ ಗಮನ ಸೆಳೆದರು. ನಂತರ ಸ್ಥಳ ಪರಿಶೀಲನೆ ನಡೆಸುವಂತೆ ಪೊನ್ನಂಪೇಟೆ ತಾಲೂಕು ತಹಸೀಲ್ದಾರ್ ಎನ್.ಎಸ್.ಪ್ರಶಾಂತ್ ಹಾಗೂ ತಾಪಂ ಕಾರ್ಯನಿರ್ವಹಣಾಧಿಕಾರಿ ಕೊಣಿಯಂಡ ಅಪ್ಪಣ್ಣ ಅವರಿಗೆ ಲೋಕಾಯುಕ್ತರು ಸೂಚನೆ ನೀಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಯತಿರಾಜ್, ಪಂಚಾಯತ್ ರಾಜ್ ಇಂಜಿನಿಯರ್ ವಿ.ಕೆ.ಮಹದೇವ್, ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕಿ ಎಂ.ಕೆ.ದೀನಾ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಿ.ಪಿ.ಕವಿತ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಜೆ.ಬಿ.ಆಶಾ ಇದ್ದರು.

ರಾಜಕೀಯ ಪಕ್ಷಗಳಿಗೆ ಸಮಾನತೆ ಬದ್ಧತೆ ಬೇಕು



ವಿರಾಜಪೇಟೆ, ಡಿ.15–ಸಂವಿಧಾನಕ್ಕೆ ಅರ್ಥ ಬರಬೇಕಾದರೆ ದೇಶದ ರಾಜಕೀಯ ಪಕ್ಷಗಳಿಗೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಸ್ಪಷ್ಟ ಬದ್ಧತೆ ಇರಬೇಕಾಗಿದೆ ಎಂದು ಹೆಚ್.ಡಿ.ಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಸಿ.ಪುಟ್ಟರಾಜು ಅಭಿಪ್ರಾಯ ವ್ಯಕ್ತಪಡಿಸಿದರು.

ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸಾ ಕೋಶ (ಐಕ್ಯೂಎಸಿ) ಹಾಗೂ ಎಸ್‌ಸಿ–ಎಸ್‌ಟಿ ಸೆಲ್ ವತಿಯಿಂದ ಏರ್ಪಡಿಸಿದ್ದ ಸಂವಿಧಾನ ದಿನಾಚರಣೆ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಪರಿನಿರ್ವಾಣ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾಜಿಕ ಮತ್ತು ಆರ್ಥಿಕ ಧ್ಯೇಯಗಳನ್ನು ಈಡೇರಿಸಿಕೊಳ್ಳಲು ಸಾಂವಿಧಾನಿಕ ಮಾರ್ಗಗಳಲ್ಲದೆ ಬೇರೆ ದಾರಿಯಿಲ್ಲ. ಆದ್ದರಿಂದ ಇವುಗಳ ಈಡೇರಿಕೆಗೆ ಸಾಂವಿಧಾನಿಕ ವಿಧಾನಗಳನ್ನು ಅನುಸರಿಸಬೇಕು ಎಂದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿರಾಜಪೇಟೆ ಪುರಸಭೆ ಸದಸ್ಯ ಕೆ.ಹೆಚ್.ಮುಹಮ್ಮದ್ ರಾಫಿ, ಡಾ.ಬಿ.ಆರ್.ಅಂಬೇಡ್ಕರ್ ಜಗತ್ತಿಗೆ ಮಾದರಿಯಾದ ಸಂವಿಧಾನವನ್ನು ದೇಶಕ್ಕೆ ನೀಡಿದ ಮಹಾನ್ ವ್ಯಕ್ತಿಯಾಗಿದ್ದಾರೆ. ಅವರು ರಚಿಸಿದ ಅತ್ಯಂತ ಮೌಲ್ಯಯುತ ಮತ್ತು ವಿಶಿಷ್ಟ ಸಂವಿಧಾನ ಹೊಂದಿದ ನಾವುಗಳು ಹೆಮ್ಮೆ ಪಡಬೇಕಾಗಿದೆ ಎಂದು ತಿಳಿಸಿದರು.

ವಿರಾಜಪೇಟೆ ಸಂತ ಅನ್ನಮ್ಮ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಹೆಚ್.ಆರ್.ಅರ್ಜುನ್, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಸಿ.ದಯಾನಂದ ಮಾತನಾಡಿದರು. ಐಕ್ಯೂಎಸಿ ಸಂಚಾಲಕ ಪಿ.ಎನ್.ನಾಗರಾಜ್ ಮೂರ್ತಿ, ಎಸ್‌ಸಿ, ಎಸ್‌ಟಿ ಘಟಕದ ಸಂಚಾಲಕ ರುದ್ರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ.ಬಸವರಾಜ್, ಆರ್.ಮಂಜುನಾಥ್, ಅಜಿತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಅಯ್ಯಪ್ಪ ದೇವಸ್ಥಾನದಲ್ಲಿ ಪೂಜೆ

ನಾಪೋಕ್ಲು, ಡಿ.15–ಸಮೀಪದ ಚೋನಾಕೆರೆ ಮಲ್ಲಂಗೋಟು ಶ್ರೀ ಅಯ್ಯಪ್ಪ ಶಾಸ್ತಾವು ದೇವಸ್ಥಾನದ ವಾರ್ಷಿಕ ಮಹಾಪೂಜೆ ಮತ್ತು ವಾರ್ಷಿಕ ಮಹಾಸಭೆ ಡಿ.16ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಹೆಚ್ಚಿನ ಭಕ್ತರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ತೀರ್ಥ ಪ್ರಸಾದ ಸ್ವೀಕರಿಸುವಂತೆ ದೇವಾಲಯ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ಲಾಸ್ಟಿಕ್ ನಿಷೇಧ ಪಾಲನೆ ಅರಿವು



ಗುಂಡ್ಲುಪೇಟೆ, ಡಿ.15– ಪಟ್ಟಣದಲ್ಲಿ ಶುಕ್ರವಾರ ಪುರಸಭೆ ವತಿಯಿಂದ ಕಡ್ಡಾಯ ಪ್ಲಾಸ್ಟಿಕ್ ನಿಷೇಧ ಪಾಲಿಸುವಂತೆ ಅರಿವು ಮೂಡಿಸಲಾಯಿತು.

ಪುರಸಭೆ ಮುಖ್ಯಾಧಿಕಾರಿ ವಸಂತ ಕುಮಾರಿ ನೇತೃತ್ವದಲ್ಲಿ ಪಟ್ಟಣದ ಅಂಗಡಿಗಳು, ಹೋಟೆಲ್‌ಗಳು ಹಾಗೂ ಬೀದಿಬದಿ ವ್ಯಾಪಾರಿಗಳು ಸೇರಿದಂತೆ ಸಾರ್ವಜನಿಕರಿಗೆ ಏಕ ಬಳಕೆ ಪ್ಲಾಸ್ಟಿಕ್ ನಿಷೇಧವನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ನೀರಿನ ಮಿತ, ಮರುಬಳಕೆ, ಘನತ್ಯಾಜ್ಯ ವಿಲೇವಾರಿ ಕುರಿತು ಜಾಗೃತಿ ಮೂಡಿಸಲಾಯಿತು.

ತ್ಯಾಜ್ಯ ನಿರ್ವಹಣೆ ನಿಯಮ ಪ್ರಕಾರ ಏಕ ಬಳಕೆ ಪ್ಲಾಸ್ಟಿಕ್ ತಯಾರಿಕೆ, ಆಮದು, ಸಂಗ್ರಹಣೆ, ವಿತರಣೆ, ಮಾರಾಟವನ್ನು ನಿಷೇಧಿಸಲಾಗಿದೆ. ಆದ್ದರಿಂದ ಸಾರ್ವಜನಿಕರು ಹಾಗೂ ವರ್ತಕರು ಆದೇಶವನ್ನು ಪಾಲನೆ ಮಾಡುವ ಮೂಲಕ ಪುರಸಭೆಗೆ ಸಹಕಾರ ನೀಡಬೇಕು ಎಂದು ಸೂಚನೆ ನೀಡಲಾಯಿತು.

ಇದೇ ಸಂದರ್ಭದಲ್ಲಿ ಬೇಕರಿ, ಟೀ ಕ್ಯಾಂಟೀನ್, ಕಿರಾಣಿ ಅಂಗಡಿಗಳಿಗಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳು ಜಪ್ತಿ ಮಾಡಿ, ಮಾಲೀಕರಿಗೆ ದಂಡ ವಿಧಿಸಲಾಯಿತು. ಹಿರಿಯ ಆರೋಗ್ಯ ನಿರೀಕ್ಷಕ ಗೋಪಿ, ಕಂದಾಯ ವಸೂಲಿಗಾರ ಪುಟ್ಟಸ್ವಾಮಿ ಸಿಬ್ಬಂದಿ ಇದ್ದರು.

ಚಾ.ನಗರ: ಜಾನಪದ ಕಲಾ ಪ್ರದರ್ಶನಕ್ಕೆ ಚಾಲನೆ

• ಬೀದಿನಾಟಕ ಮೂಲಕ ಆರೋಗ್ಯ ಅರಿವು • ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿಕೆ



ಚಾಮರಾಜನಗರ, ಡಿ.15–ರಾಷ್ಟ್ರೀಯ ಆರೋಗ್ಯ ಯೋಜನೆಯ ಕಾರ್ಯಕ್ರಮಗಳ ಕುರಿತು ಜನಜಾಗೃತಿ ಮೂಡಿಸುವ ಜಾನಪದ ಕಲಾ ಪ್ರದರ್ಶನಕ್ಕೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಶುಕ್ರವಾರವ ಚಾಲನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಜಿಲ್ಲಾದ್ಯಂತ ಒಂದು ವಾರ ನಡೆಯಲಿರುವ ಜಾನಪದ ಕಲಾ ಪ್ರದರ್ಶನಕ್ಕೆ ಮೂಲಕ ಚಾಲನೆ ನೀಡಲಾಯಿತು.

ನಂತರ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಾನಪದ ಕಲಾ ಪ್ರದರ್ಶನ ಒಂದು ವಾರದ ಐಇಸಿ ಕಾರ್ಯಕ್ರಮಕ್ಕೆ ಸೀಮಿತವಾಗದೇ ನಿರಂತರವಾಗಿ ಆರೋಗ್ಯ ಕಾರ್ಯಕ್ರಮಗಳ ಅರಿವನ್ನು ಬೀದಿನಾಟಕ ಹಾಗೂ ಜಾಗೃತಿ ಗೀತೆಗಳ ಮೂಲಕ ಕಲಾವಿದರು ಜಿಲ್ಲೆಯ ಪ್ರತಿ ಮನೆ ಮನೆಗೂ ತಲುಪಿಸಬೇಕು. ಜಿಲ್ಲೆಯಲ್ಲಿ ಅದಿವಾಸಿ ಜನರು, ಮಹಿಳೆಯರು ಮತ್ತು ಮಕ್ಕಳಿಗೆ ಆರೋಗ್ಯದ ಬಗ್ಗೆ ಕಾಳಜಿ ಮೂಡಿಸುವುದು ಅತ್ಯಾವಶ್ಯಕವಾಗಿದೆ ಎಂದರು.

ಕ್ಷಯರೋಗ ಹಾಗೂ ಆಶಾಕಿರಣ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯಾದ್ಯಂತ ಆಯ್ಕೆಯಾಗಿರುವ ಜಿಲ್ಲೆಗಳಲ್ಲಿ ಚಾಮರಾಜನಗರವು ಒಂದಾಗಿದೆ. ಅಲ್ಲದೆ, ಸಿಕಲ್‌ಸೆಲ್ ಅನಿಮೀಯಾ ಕಾಯಿಲೆ ನಿಯಂತ್ರಣದ ಕುರಿತು ಗಮನ ಹರಿಸಲಾಗುತ್ತಿದೆ. ತಾಯಿ ಕಾರ್ಡ್ ಸೇರಿದಂತೆ ಇತರೆ ಯೋಜನೆಗಳು ಜನರಿಗೆ ಮುಕ್ತವಾಗಿ ಸಿಗುವಂತಹ ವಾತಾವರಣ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಆರೋಗ್ಯ ಸಮಸ್ಯೆಗಳು ಎದುರಾಗುವ ಮೊದಲೇ ಸಮಸ್ಯೆಗಳು ಕಾಣಿಸಿಕೊಳ್ಳದಂತೆ ಜನರು ಎಚ್ಚರ ವಹಿಸಬೇಕು. ಗುಣಮಟ್ಟದ ಆರೋಗ್ಯ ನೀಡುವುದೇ ಜಾನಪದ ಕಲಾ ಪ್ರದರ್ಶನದ ಮುಖ್ಯ ಉದ್ದೇಶವಾಗಿದೆ. ಆರೋಗ್ಯದ ಅರಿವು ಮೂಡಿಸುವ ಬೀದಿನಾಟಕ ಹಾಗೂ ಜಾಗೃತಿ ಗೀತೆಗಳು ಹೆಚ್ಚು ಜನರ ಮನ ಮುಟ್ಟುವಂತಾಗಬೇಕು. ಜನರು ಸಹ ಕಲಾ ಪ್ರದರ್ಶನದ ಅರ್ಥ ಮಾಡಿಕೊಂಡು ಆರೋಗ್ಯದ ಬಗ್ಗೆ ಹೆಚ್ಚಿನ ಅರಿವು ಹೊಂದಬೇಕು. ಈ ನಿಟ್ಟಿನಲ್ಲಿ ಕಂದಾಯ ಇಲಾಖೆ ಹಾಗೂ ಎಲ್ಲಾ ಗ್ರಾಮ ಪಂಚಾಯಿತಿಗಳು ಆರೋಗ್ಯ ಇಲಾಖೆಗೆ ಸಹಕಾರ ನೀಡಬೇಕು ಎಂದರು.

ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ರಾಜೇಶ್‌ಕುಮಾರ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ರವಿಕುಮಾರ್, ಸಹಾಯಕ ಆಡಳಿತಾಧಿಕಾರಿ ಲಿಂಗರಾಜು, ಹಿರಿಯ ವೈದ್ಯಾಧಿಕಾರಿ ಡಾ.ಗಿರಿ ಜಾಂಬ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ದುಶ್ಯಂತ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಚೇತನ ಕಲಾವಾಹಿನಿ ತಂಡದ ಮುಖ್ಯಸ್ಥ ಸಿದ್ದರಾಜು ಇತರರು ಇದ್ದರು.

> ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಜಾನಪದ ಕಲಾ ಪ್ರದರ್ಶನಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಚಾಲನೆ ದೊರೆಯುತ್ತಿದೆ. ಹೆಣ್ಣು ಭ್ರೂಣ ಹತ್ಯೆ ತಡೆ, ತಾಯಿ ಮತ್ತು ಮಕ್ಕಳ ಆರೋಗ್ಯ, ಸ್ವಚ್ಛತೆ, ಕ್ಷಯ ಮುಕ್ತ, ಮಲೇರಿಯಾ ಮುಕ್ತ ಭಾರತ ಮಾಡುವ ನಿಟ್ಟಿನಲ್ಲಿ ಎಲ್ಲಾ ಆರೋಗ್ಯ ಕಾರ್ಯಕ್ರಮಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.
>
> -ಡಾ.ಚಿದಂಬರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಹೊಂಗನೂರು ಗ್ರಾಪಂ ಪಿಡಿಓ ಅಮಾನತು

ಚಾಮರಾಜನಗರ, ಡಿ.15–ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ತಾಲೂಕಿನ ಹೊಂಗನೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಈ.ಬಾಲಗಂಗಾಧರ್ ಅವರನ್ನು ಅಮಾನತುಗೊಳಿಸಲಾಗಿದೆ.

ಬಾಲಗಂಗಾಧರ್ ಅವರಿಗೆ ಹೊಂಗನೂರು ಗ್ರಾಪಂಗೆ ಪಂಚಾಯತ್ ರಾಜ್ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಸ್ಥಳ ನಿಯುಕ್ತಿಗೊಸಲಾಗಿತ್ತು. ನಂತರ ಇವರು ಡಿ.6ರಂದು ತಾಲೂಕು ಪಂಚಾಯಿತಿ ಕಚೇರಿಯಲ್ಲಿ ವರದಿ ಮಾಡಿಕೊಂಡಿದ್ದರು. ಆದರೆ, ನ.18ರಿಂದ ಡಿ.5ರವರೆಗೆ ಕರ್ತವ್ಯಕ್ಕೆ ಹಾಜರಾಗದೆ ನಿರ್ಲಕ್ಷ್ಯತೆ ತೋರಿದ್ದಾರೆ. ಅನುಮತಿ ಪಡೆಯದೆ ಕರ್ತವ್ಯಕ್ಕೆ ಗೈರಾಗಿದ್ದು, ಮೇಲಧಿಕಾರಿಗಳ ಆದೇಶ ಉಲ್ಲಂಘಿಸಿದ್ದಾರೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿ ನೀಡಿದ ವರದಿ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ ಬಾಲಗಂಗಾಧರ್ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಕಾವೇರಿ ಹೋರಾಟಕ್ಕೆ 101 ದಿನ



ಚಾಮರಾಜನಗರ, ಡಿ.15–ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ನಗರದಲ್ಲಿ ನಿರಂತರವಾಗಿ ನಡೆಸುತ್ತಿರುವ ಪ್ರತಿಭಟನೆ ಶುಕ್ರವಾರ 101 ದಿನ ಪೂರೈಸಿದ್ದು, ಇಂದು ಭುವನೇಶ್ವರಿ ವೃತ್ತದ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳಾರತಿ ಮಾಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ಉದ್ಯಾನದ ಮುಂಭಾಗ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ನೀರು ನಿರ್ವಹಣಾ ಮಂಡಳಿ ರದ್ದಾಗುವ ತನಕ ಕರ್ನಾಟಕಕ್ಕೆ ನ್ಯಾಯ ಸಿಗೋಲ್ಲ. ಅದನ್ನು ರದ್ದುಪಡಿಸಬೇಕು. ರಾಜ್ಯ ಸರ್ಕಾರ ತಮಿಳುನಾಡಿಗೆ ಬಿಟ್ಟಿರುವ ನೀರನ್ನು ತಕ್ಷಣ ನಿಲ್ಲಿಸಬೇಕು. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ರಾಜ್ಯಕ್ಕೆ ನ್ಯಾಯ ಒದಗಿಸಿಕೊಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದ ಹುಂಡಿ ರಾಜು, ಚಾ.ವೆಂ. ರಾಜ್‌ಗೋಪಾಲ್, ಗು.ಪುರುಷೋತ್ತಮ, ಚಾ.ರಾ.ಕುಮಾರ್, ಲಿಂಗರಾಜು, ಚಾ.ಸಿ.ಸಿದ್ದರಾಜು, ಮಂಜು, ವೀರಭದ್ರ, ರಾಜಪ್ಪ ಇತರರು ಭಾಗವಹಿಸಿದ್ದರು.

ಇಂದು ಸಂಚಿ ಹೊನ್ನಮ್ಮ ಸೇವಾ ಪ್ರಶಸ್ತಿ ಪ್ರದಾನ

ಯಳಂದೂರು, ಡಿ.15–ರಾಜ್ಯದ ವಿವಿಧ ಕ್ಷೇತ್ರಗಳ 6 ಮಹಿಳಾ ಸಾಧಕಿಯರಿಗೆ ರಾಜ್ಯ ಮಟ್ಟದ ಸಂಚಿ ಹೊನ್ನಮ್ಮ ಸೇವಾ ಪ್ರಶಸ್ತಿಯನ್ನು ಡಿ.16ರಂದು ನೀಡಲಾಗುವುದು ಎಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಜಿಲ್ಲಾಧ್ಯಕ್ಷ ಡಾ.ಎಂ.ಮಹೇಶ್ ಚಿಕ್ಕಲ್ಲೂರು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ, ಜನಪರ ಸಾಹಿತ್ಯ ಪರಿಷತ್ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಡಿ.16ರಂದು ಪಟ್ಟಣದ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ಸಂಚಿ ಹೊನ್ನಮ್ಮ ರಾಜ್ಯ ಮಟ್ಟದ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಬಾಲರಾಜು, ಕಸಾಪ ತಾಲೂಕು ಅಧ್ಯಕ್ಷ ಯರಿಯೂರು ನಾಗೇಂದ್ರ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೊಂಡೇಗೌಡ, ಪ್ರಧಾನ ಕಾರ್ಯದರ್ಶಿ ಸೋಮಣ್ಣ, ತಾಲೂಕು ಕೇಂದ್ರ ಸಾಹಿತ್ಯ ವೇದಿಕೆ ಅಧ್ಯಕ್ಷೆ ಪಿ.ಪ್ರೇಮ ಹಾಜರಿದ್ದರು.

ತೆರಿಗೆ ವಸೂಲಾತಿ ಆಂದೋಲನಕ್ಕೆ ಚಾಲನೆ

ಯಳಂದೂರು, ಡಿ.15–ಪಟ್ಟಣದ ನಿವಾಸಿಗಳು ನೀರು, ಆಸ್ತಿ ತೆರಿಗೆ, ಅಂಗಡಿ ಪರವಾನಗಿ, ಇ–ಸ್ವತ್ತು ಸೇರಿದಂತೆ ಇತರೆ ತೆರಿಗೆ ಹಾಗೂ ಕಂದಾಯ ಪಾವತಿಸಿದರೆ ಸರ್ಕಾರದ ಸೌಲಭ್ಯ ಪಡೆಯಲು ಸಹಕಾರಿಯಾಗಲಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಹೇಶ್ ಕುಮಾರ್ ತಿಳಿಸಿದರು

ಪಟ್ಟಣದಲ್ಲಿ ತೆರಿಗೆ ವಸೂಲಾತಿ ಆಂದೋಲನಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಪಟ್ಟಣ ವ್ಯಾಪ್ತಿ 11 ವಾರ್ಡ್‌ಗಳಿಗೂ ಪಪಂ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ, ಕುಡಿಯುವ ನೀರು, ಚರಂಡಿ, ಆಸ್ತಿ ಬದಲಾವಣೆ, ಇ–ಸ್ವತ್ತು, ಅಂಗಡಿ ಪರವಾನಗಿ ಸೇರಿದಂತೆ ಹಲವು ವರ್ಷಗಳಿಂದ ಬಾಕಿ ಉಳಿಸಿಕೊಂಡಿರುವುದರಿಂದ ಪಪಂಗೆ ಆದಾಯದ ಮೂಲವಿಲ್ಲದೇ ಸಾಕಷ್ಟು ಅಭಿವೃದ್ಧಿಗಳಿಗೆ ತೊಂದರೆಯಾಗುತಿದೆ ಎಂದರು.

ಈ ಬಗ್ಗೆ ಪಟ್ಟಣದಲ್ಲಿ ವಿಶೇಷವಾಗಿ ಆಂದೋಲನ ನಡೆಸಿ, ಮನೆ ಬಳಿಗೆ ತೆರಳಿ ಸಮಸ್ಯೆ ಪರಿಹರಿಸುವ ಮೂಲಕ ಅಗತ್ಯ ದಾಖಲಾತಿಗಳೊಂದಿಗೆ ಕಾಲ ಕಾಲಕ್ಕೆ ಸರ್ಕಾರದ ತೆರಿಗೆಗಳನ್ನು ಪಾವತಿಸಬೇಕು. ಸತತ 1 ತಿಂಗಳು ಆಂದೋಲನ ನಡೆಸುತ್ತಿದ್ದು, ನಿವಾಸಿಗಳು ತೆರಿಗೆಗಳನ್ನು ಕಡ್ಡಾಯವಾಗಿ ಪಾವತಿಸುವ ಮೂಲಕ ಪಟ್ಟಣದ ಅಭಿವೃದ್ಧಿಗಳಿಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯರಾದ ಮಹೇಶ್, ರವಿ, ಸಿಬ್ಬಂದಿ ಬಸವಣ್ಣ, ಲಕ್ಷ್ಮೀ, ವಿಜಿ, ಮಲ್ಲಿಕಾರ್ಜುನ, ನಂಜುಂಡ ಇತರರು ಹಾಜರಿದ್ದರು.



ವೀರಪ್ಪನ್ ಸಹಚರ ಜ್ಞಾನಪ್ರಕಾಶ್ ನಿಧನ

ಹನೂರು, ಡಿ.15–ಕಾಡುಗಳ್ಳ ವೀರಪ್ಪನ್ ಸಹಚರರಾಗಿದ್ದ ಜ್ಞಾನಪ್ರಕಾಶ್ (69) ಅನಾರೋಗ್ಯದಿಂದ ಶುಕ್ರವಾರ ರಾತ್ರಿ ಸ್ವಗ್ರಾಮ ತಾಲೂಕಿನ ಸಂದನಪಾಳ್ಯದಲ್ಲಿ ನಿಧನರಾದರು.

ಮೃತರು ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಶನಿವಾರ ಸಂದನಪಾಳ್ಯದಲ್ಲಿ ಕ್ರಿಶ್ಚಿಯನ್ ಸಂಪ್ರದಾಯದಂತೆ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. 1993ರ ಪಾಲಾರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಜ್ಞಾನಪ್ರಕಾಶ್, ಅನಾರೋಗ್ಯದ ಕಾರಣ ಕಳೆದ ಡಿ.20ರಂದು ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದರು. ಪಾಲಾರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ವೀರಪ್ಪನ್, ಸೈಮನ್, ಬಿಲವೇಂದ್ರನ್, ಮೀಸೆಕಾರ ಮಾದಯ್ಯ ಅವರೊಂದಿಗೆ ಜ್ಞಾನಪ್ರಕಾಶ್ ಭಾಗಿಯಾಗಿದ್ದರು ಎಂದು ಮೈಸೂರಿನ ಟಾಡಾ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿತ್ತು. ಆದರೆ, ಸುಪ್ರಿಂಕೋರ್ಟ್ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಪರಿವರ್ತಿಸಿ ತೀರ್ಪು ನೀಡಿತ್ತು ಮೂರು ವರ್ಷಗಳ ಹಿಂದೆ ಶ್ವಾಸಕೋಶ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಜ್ಞಾನಪ್ರಕಾಶ್ ಜಾಮೀನಿನ ಮೇಲೆ ಬಿಡುಗಡೆಯಾಗಿ ಸಂದನಪಾಳ್ಯದಲ್ಲಿ ವಾಸವಿದ್ದರು.

ಮುದ್ದುಮಲ್ಲಪ್ಪ ನಿಧನ



ಗುಂಡ್ಲುಪೇಟೆ, ಡಿ.15–ತಾಲೂಕಿನ ಚಿಕ್ಕತುಪ್ಪೂರು ಗ್ರಾಮದ ನಿವಾಸಿ ಮುದ್ದುಮಲ್ಲಪ್ಪ (84) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಚಿಕ್ಕತುಪ್ಪೂರು ಮೈಸೂರುಮಿತ್ರ ಪ್ರತಿನಿಧಿ ಎಂ.ಮಲ್ಲು ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿತು.

ಸಂತಾಪ: ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಸೋಮಶೇಖರ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
40x60
West Facing
Vijayanagar
4th Stage, 1st Phase.
Brokers Excuse
9663002275

ಸೈಟುಗಳು ಮಾರಾಟಕ್ಕಿದೆ
30x40, 20x30, ದಟ್ಟಗಳ್ಳಿ 30x50 ಆದಿತ್ಯ ಸರ್ಕಲ್ ಹತ್ತಿರ 40x60 Site Rs.60 Lakhs 30x40 ಸೈಟು N/E ಕಾರ್ನರ್ 28 ಲಕ್ಷ ಬೋಗಾದಿ ರಿಂಗ್ ರಸ್ತೆ, ಹಳೆ ಮನೆ/ ಹೊಸಮನೆ ಸೈಟು ಮಾರುವವರು / ಕೊಳ್ಳುವವರು
ಬಸನಶಂಕರಿ ರಿಯಲ್ ಎಸ್ಟೇಟ್
9945042875

S.K. Construction
ನಿಮ್ಮ ಕನಸು ನಮ್ಮ ನನಸು ವಿಜಯನಗರ 4ನೇ ಹಂತದಲ್ಲಿ Muda Approved ಸೈಟ್‌ನಲ್ಲಿ ಉತ್ತಮ ಗುಣಮಟ್ಟದಲ್ಲಿ ನಾವೇ ಲೋನ್ ಮಾಡಿಸಿ 20x30, 2BHK-36 ಲಕ್ಷ, 30x40, 2BHK- 74 ಲಕ್ಷ 3D ಎಲಿವೇಶನ್ ಸಹಿತ ಮನೆ ಕಟ್ಟಿಕೊಡುತ್ತೇವೆ.
7892008440

ಮುಡಾ ಸೈಟು ಮಾರಾಟಕ್ಕಿದೆ
ಚಿತ್ರವನ ರೆಸಾರ್ಟ್ ಹಿಂಭಾಗ (ರಿಂಗ್ ರಸ್ತೆ ಸಮೀಪ)ದ ಕಳಲವಾಡಿ ಗ್ರಾಮದಲ್ಲಿ 30x40 ಅಳತೆಯ ಮುಡಾ ಸೈಟು ಮಾರಾಟಕ್ಕಿದೆ.
8151897867

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 8,000/- per month. For evening: (Male only). 6.30 pm to 11.30 pm. Salary: Rs. 8,000/- per month.
7349337469, 9448525072

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಪಂಪ್–ಕ್ಯಾಷಿಯರ್ ಹುದ್ದೆಗೆ ಪುರುಷರು/ಮಹಿಳೆಯರು ಅನುಭವಿಗಳಿಗೆ ಮೊದಲ ಆದ್ಯತೆ ಖುದ್ದಾಗಿ ಸಂಪರ್ಕಿಸಿ
ಶ್ರೀ ಸರ್ವೀಸ್ ಸ್ಟೇಷನ್
ಸರಸ್ವತಿಪುರಂ ಮೈಸೂರು

WANTED PROOF READER
for Regional languages like Kannada, Telugu, Tamil, Hindi, Mathsbook Translated From English
Professional Linguists Preferred
7892124313

ಮುಡಾ ಕಾರ್ನರ್ ಸೈಟ್
ಈಸ್ಟ್ ಫೇಸಿಂಗ್, 1124 ಚದರಡಿ ಏರ್ ಪೋರ್ಟ್ ಹಿಂಭಾಗದ ರಸ್ತೆ, ಜ್ಞಾನಭಾರತಿ ಲೇಔಟ್ ಚದುರಡಿಗೆ 3000 ರೂ.
ಡೈರೆಕ್ಟ್ ಓನರ್
6362639387

ಸಾಲ/LOANS
* House / Site Purchase Loan
* Construction Loan
* Mortgage Loan (Muda, Corporation & Revenue)

7760598705

HOUSE FOR SALE
Vijayanagar 4th stg
3 BHK Duplex New House, MUDA, E/F Door, Near Marimallappa School, Price - 84 Lakhs/1.55 Cr
8660105902

WANTED
ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ಸಂಬಳ: 10,000 + Incentive.
ಆಸಕ್ತಿ ಇದ್ದವರು ಸಂಪರ್ಕಿಸಿ:
Mob: 98450 28614

AFFIDAVIT
I, L. Neetha Jagannath, W/o Sri Chinnappa K.M, aged about 41 years, residing at 173, 10th Cross, 3rd Stage, Gokulam, Mysuru, Karnataka-570 002, do hereby solemnly affirm that in my Aadhaar Card my name is mentioned as Neetha Jagannath but by oversight in my Passport my name is wrongly mentioned as Neetha Jaganath, I am swearing this affidavit to furnish the same to the passport authorities, so as to get my name rectified as Neetha Jagannath in my Passport bearing No. T9392377, this is vide affidavit sworn before Notary S. Pavithra.
Date: 11-12-2023, Place: Mysuru

Sites for Sale at Vijayanagar 4th Stage
MUDA Site, All West Facing
20x30, Price 46 Lakhs
30x45, Price 85 Lakhs
40x60, 40 ft Road, Price 1.20 Cr
8660105902

Star Solar

JUST Easy EMI 19,499/- 200 Ltr
5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರನ್ನು ಸರ್ವೀಸ್ ಮಾಡಿಕೊಡಲಾಗುವುದು.
Old system Exchange offer available
Manufacturing: Belawadi Industrial Sub, Mysore
9945616293 / 9449966293

HOUSE FOR LEASE
In Dattagalli 20x30 South
Required Female Office Asst. in Rajarajeshwari Nagar
8792245013

S.K. Construction
ಕಡಿಮೆ ಬೆಲೆಗೆ ಮಾರು ಹೋಗಬೇಡಿ ಉತ್ತಮ ಗುಣಮಟ್ಟಕ್ಕೆ ಬೆಲೆಕೊಡಿ, ಇಂಜಿನಿಯರಿಂಗ್ Plan-3D ಎಲಿವೇಶನ್ ಸಹಿತ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಹೊಸ ಮನೆ ಮಾಡಿಕೊಡುತ್ತೇವೆ.
9620528490

HOUSE FOR LEASE
Newly built 2 BHK independent house, fully furnished with solar @ Lalithadri Nagar, Near Ring Road, Behind Indian Oil Petrol Bunk.
Mob: 9964414484

ನಿವೇಶನ ಮಾರಾಟಕ್ಕಿದೆ
ಮುಡಾ ಅನುಮೋದಿತ ಗುರುರಾಜ ಬಡಾವಣೆ ಸಿದ್ಧಾರ್ಥ ನಗರ, ಮೈಸೂರು. ಪೂರ್ವ ದಿಕ್ಕಿನ ಪೂರ್ವ ಪಶ್ಚಿಮ 50 ಅಡಿ ಉತ್ತರ ದಕ್ಷಿಣ 40 ಅಡಿ ಅಳತೆಯ ನಿವೇಶನ
9900655615
9880479678

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

DTCP SITES FOR SALE
DTCP Sites
Rs. 699 per sq.ft.,
Near Jayapura, H.D. Kote Road, Mysore.
9590491194, 9606783264

ಮನೆ ಮಾರಾಟಕ್ಕಿದೆ
30x40 ಕಾರ್ನರ್, Ground 1st & 2nd ಟೀಚರ್ ಲೇಔಟ್, ರಾಜ್‌ಕುಮಾರ್ ರಸ್ತೆ, ಪಾರ್ಕ್ ಎದುರು, With Bore
32x40, Ground 1st & 2nd ಆಲನಹಳ್ಳಿ, ಲೇಔಟ್, ಸಿದ್ಧಾರ್ಥನಗರ ಹತ್ತಿರ
6363624003

NEW HOUSE FOR SALE
40x60 East Facing
4 Bed Rooms (All Attached)
As per Vasthu Duplex
60 ft Road,
At 1st Main, 1st Stage, Vijayanagar, mysore
Price-3.6 Crs (Slightly Negotiable)
9606160320

ಮನೆ ಬಾಡಿಗೆಗೆ/ಭೋಗ್ಯಕ್ಕೆ ಇದೆ
ಶ್ರೀರಾಂಪುರ ಯುನಿವರ್ಸಿಟಿ ಬಡಾವಣೆ ಎದುರು ಗಾಯತ್ರಿ ಬಡಾವಣೆಯಲ್ಲಿ 1 ಬೆಡ್ ರೂಂ ಮತ್ತು 2 ಬೆಡ್ ರೂಂ ಇರುವ ಮನೆ ಅಂಗಡಿ ಮಳಿಗೆ ಭೋಗ್ಯ/ಬಾಡಿಗೆಗೆ ಇದೆ
9110848989
9448092818

Alpha School of Fashion Design, Mysore

Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE

ADMISSION OPEN
*HOSTEL AND PG AVAILABLE
Alpha School of Fashion Design No.66/2, Manandavadi Road, Near Ring Road Signal Junction, Sriramapura, Mysore
782 993 7469

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ತ್ರರಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 BANGALORE 9343142258

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ
ಅಡುಗೆ ಕೆಲಸ ಮಾಡಿಕೊಂಡು ಅಲ್ಲೇ ಉಳಿದುಕೊಳ್ಳಲು, ಚಿಕ್ಕ ಕುಟುಂಬ ಬೇಕಾಗಿದೆ. ಇರಲು ಮನೆ + ESI+PF ಇರುತ್ತದೆ.
ಸ್ಥಳ: ದಾಸನಕೊಪ್ಪಲು, ಬೋಗಾದಿ. ಜಿಯಾ:
9845920613

FOR SALE
20X30 (South)
ಸಾತಗಳ್ಳಿ 2ನೇ ಹಂತ
Site No.4635
9448043116
9449802116

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಆಫೀಸ್, ಶೋರೂಂ, ಕಂಪನಿಗಳಿಗೆ 7th, 10th, PUC, ITI, Diploma, Any Degree pass, fail ಆದವರು Production, Helper, Packing, Data Entry, HR Admin, Cashier ಇತ್ಯಾದಿ ಕೆಲಸಗಳಿಗೆ ಯುವಕ / ಯುವತಿಯರು ಬೇಕಾಗಿದ್ದಾರೆ. ಸಂಬಳ: 15,000 ರಿಂದ 48,000 (ಇಎಸ್ಐ/ಪಿಎಫ್+ಓಟಿ).
9916641959, 9035143190

FOR SALE
1) 30x40, 30x50 near Defence Apartment, Kote Road, 60 feet road. (2) 6, 10, 20 guntas farm land @ KRS backwater. (3) 30x40 Narasipura Road. (4) S/Commercial 40x60 Satagalli. (5) 40x70 house Vidyaranyapuram. (6) 30x40 Jnanabharathi Layout, JP Nagar. 30x45 N, Kuvempunagar. New and old house city surrounding.
PRAKRUTHI PROPERTIES
9538690359, 9035990359

WANTED
TELECALLERS
Male - 5 Nos.
Female : 10 Nos.
Tamil language need.
Salary 11K to 13K.
S.H. Meghana, HR
Mob: 7829803426

WANTED
1) Security Guards (Male)
2) Housekeeper (Male / Female)
9844235981, 9739199355

Document Lost
Mohammed Mansoor, D.No. EWS 35, 2nd Cross, Udayagiri, Mysore-570 019, I lost my original home position copy in Rajiv Nagar, Position copy details EWS Door No. 1160.
Finders please contact:
Mob: 7899919637

OFFICE FOR RENT
2500 sqft @ Belvatta Ring Road, RBI Gate Mysore
9980111264
7899659901

ತಕ್ಷಣ ಕೆಲಸ
ಮೈಸೂರಿನ ಹೆಸರಾಂತ ಹೆಲ್ ಕೇರ್ ಸಂಸ್ಥೆಗೆ ಮಹಿಳೆಯರು, ಪುರುಷರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ, ಊಟ ವಸತಿಯೊಂದಿಗೆ ಸಂಬಳ 12,000 ರಿಂದ 18,000 ಇರುತ್ತದೆ. (ಸರ್ಕಾರಿ ನೊಂದಾಯಿತಾ ಸಂಸ್ಥೆ)
9739292222, 9035113222

ಹೊಸ ಮನೆ ಮಾರಾಟಕ್ಕಿದೆ
20x30 ಡೂಪ್ಲೆಕ್ಸ್ 3 BHK, ಪೂರ್ವ ದಿಕ್ಕು, ಶ್ರೀ ವಿನಾಯಕ ಗಾರ್ಡನ್ ಸಿಟಿ, ಸೆಂಟ್ ಜೋಸೆಫ್ ಸ್ಕೂಲ್ ಹತ್ತಿರ, ಇಲವಾಲ.
ಬೆಲೆ: 65 ಲಕ್ಷ. Negotiable.
9739257030, 7892127234

Blue Bell Flat for Sale
3 BHK, 1525 sq.ft. Rs. 88 Lakhs. (Nego) at Vijayanagar 3rd Stage, Mysuru. Happy Town Layout, DTCP site for sale, 30x31 Rs. 1000/- sq.ft. (Nego) at Manuganahalli Checkpost, Bilikere N/F.
8050257887, 9036665888

ಬೇಕಾಗಿದ್ದಾರೆ
ಅಡುಗೆಗೆ ಮತ್ತು ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಊಟ ಮತ್ತು ವಸತಿ ಉಚಿತ. ಸಂಪರ್ಕಿಸಿ:
9611736458, 7795267413

WANTED
Divya Deepa Charitable Trust, Mysuru needs BE / MSW / M.Sc. / B.Sc. / B.Com. / BBA / PUC, Science candidates to work in the field of Education / Children welfare / Admin / Environment.
Rs. 15K to 25K + food & accommodation.
Mob: 9341369901, 9538499901, 8088586087
divyadeepa.trust@gmail.com
www.divyadeepatrust.org

WANTED
ಟೆಕ್ನಿಷಿಯನ್ ಹುಡುಗರು
ಐಟಿಐ ಎಲೆಕ್ಟ್ರಿಕಲ್ಸ್ ಆದವರಿಗೆ ಆದ್ಯತೆ
ದ್ವಿಚಕ್ರ ವಾಹನ ಹೊಂದಿರಬೇಕು
ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು
98808 28999

ಭೋಗ್ಯಕ್ಕೆ ಹೊಸ ಮನೆ ಬೇಕಾಗಿದೆ
ಸರಸ್ವತಿಪುರಂ/ಕುವೆಂಪುನಗರದಲ್ಲಿ 2BHK/3BHK ಹೊಸ ಮನೆ ಭೋಗ್ಯಕ್ಕೆ/ಬಾಡಿಗೆಗೆ ಕೂಡಲೇ ಬೇಕಾಗಿದೆ. ಸಂಪರ್ಕಿಸಿ:
6366829117

ಬೇಕಾಗಿದ್ದಾರೆ /Wanted
ಮೈಸೂರಿನ ಕಾಳಿದಾಸ ರೋಡ್‌ನಲ್ಲಿ ಪಂಚವಟಿ ಸರ್ಕಲ್ ಹತ್ತಿರ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ (1) ಸೌತ್ ಅಸಿಸ್ಟೆಂಟ್ (ಸಹಾಯಕ) Cutting, Grinding (2) Tandoori Roti ತಂದೂರಿ ರೋಟಿ ಮಾಡುವ (3) ಕೌಂಟರ್ Counter (4) Waiter ವೇಟರ್‌ಗೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
7338392631

FOR RENT ONE SHOP No. 3
Rent Rs. 3000/-
Advance Rs. 30,000/-
Mysuru Vidyaranyapuram, 4th Main, 27th Cross, Corner No. 894/A, West facing. Measuring 10x10 Ft. available near Sterling Theatre.
9448872684, 9900079871

ಸೋಲಾರ್ ವಾಟರ್ ಹೀಟರ್ Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

PART TIME JOBS
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
9148733213

ಕೆಲಸಕ್ಕೆ ಬೇಕಾಗಿದ್ದಾರೆ
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ. ಸಮಯ: ಬೆಳಿಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ. ಸಂಬಳ 15,000. ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆಯ ವರೆಗೆ ಸಂಬಳ 12,000. Part time ಮಧ್ಯಾಹ್ನ 3 ಗಂಟೆ ಯಿಂದ ರಾತ್ರಿ 8.30 ರವರೆಗೆ ಸಂಬಳ 7,000. ಸಂಪರ್ಕಿಸಿ:
Mob: 8861221755
ಸ್ಥಳ: ಡಾ॥ ರಾಜ್‌ಕುಮಾರ್ ರಸ್ತೆ, ತ್ರಿವೇಣಿ ಸರ್ಕಲ್ ಹತ್ತಿರ

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

WANTED STAFF NURSE (FEMALE)
FOR DIAGNOSTIC CENTRE
Siddhartha Nagara, Mysuru
8105358682

ಸೈಟುಗಳು ಮಾರಾಟಕ್ಕಿದೆ
ಜೆ.ಪಿ.ನಗರದಲ್ಲಿ ಮುಡಾ ಅನುಮೋದನೆಯ
30x40 W/F-2
30x40 E/F-1
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9743660797

neem BOND PLATINUM

PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

ಹೊಸ ಮನೆ ಮಾರಾಟಕ್ಕಿದೆ
ಇಲವಾಲ ಬೈಪಾಸ್ ರಸ್ತೆ, ಸೆಂಟ್ ಜೋಸೆಫ್ ಸ್ಕೂಲ್, N.J. Hospital ಆಚಾರ್ಯ ವಿದ್ಯಾಕುಲ ಹತ್ತಿರ 30x40 ಅಳತೆಯ ಉತ್ತರ ದಿಕ್ಕಿನ 2 ಬಿಹೆಚ್‌ಕೆ ಅಟ್ಯಾಚಡ್ ಬಾತ್‌ರೂಂ, ಫುಲ್ ಫರ್ನಿಷಡ್ ಮತ್ತು ಬೋರ್‌ವೆಲ್ ಇರುವಂತಹ MUDA Approved.
ನಂಜುಂಡಸ್ವಾಮಿ (Ex-Army)
9483862050, 7795316995

20X30 ಮನೆ ಭೋಗ್ಯಕ್ಕೆ ಬೇಕಾಗಿದೆ
SBM Layout Bogadi ರೂಪ ನಗರ Railway Layout ಶಾರದಾದೇವಿ ನಗರ ಸುತ್ತ ಮುತ್ತ (Please Contact)
9448208625
9591419411

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಕೈಗಾರಿಕಾ ಪ್ರದೇಶ ಕೂರ್ಗಳ್ಳಿ, ಮೇಟಗಳ್ಳಿ, ಹೆಬ್ಬಾಳು, ದಟ್ಟಗಳ್ಳಿ, ಜನತಾನಗರ ಬೋಗಾದಿ ಇಲ್ಲಿ ಕೆಲಸ ಮಾಡಲು, ಸೆಕ್ಯೂರಿಟಿ ಗಾರ್ಡ್, Helper, CNC Mechine Operatore, Computer Data Entry Operatore, Telecaller ಕೆಲಸ ಮಾಡಲು ವಿದ್ಯಾಭ್ಯಾಸ 7th Pass, 10th, PUC & Any Degree ITI, Deploma ಪಾಸ್ & ಫೇಲ್ ಬೇಕಾಗಿದ್ದಾರೆ ESI & PF ಸೌಲಭ್ಯ ವಿದೆ.
ವೇತನ : 12000 ರಿಂದ 18000 ವರೆಗೆ
9036461347, 9108180329

ಮನೆ ಬಾಡಿಗೆಗಿದೆ
30x40 ಅಳತೆ ಪೂರ್ವಕ್ಕೆ ಬಾಗಿಲು 2BHK ಗ್ರೌಂಡ್ ಫ್ಲೋರ್ ನೀರು, ಸೋಲಾರ್, ವಾಲ್ ಡ್ರೋಬ್ ವ್ಯವಸ್ಥೆ ಇರುತ್ತದೆ. ಮನೆ ನಂ.4, ಶಿಕ್ಷಕರ ಬಡಾವಣೆ ಡಾ॥ ರಾಧಾಕೃಷ್ಣನಗರ ರಾಜ್‌ಕುಮಾರ್ ರಸ್ತೆ, ಸಸ್ಯಹಾರಿಗಳಿಗೆ ಮಾತ್ರ, ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9035085532, 9901259464

HOUSE FOR RENT
(Ground Floor)
20x30 2 BHK
Ramakrishnagara, Near Saibaba Temple, Mysore
(Vegetarians Only)
9423961569
8308889656

ಬೇಕಾಗಿದ್ದಾರೆ
ಬಟ್ಟೆ ಅಂಗಡಿಗೆ ಹುಡುಗರು ಬೇಕಾಗಿದ್ದಾರೆ
ಬೆಳಿಗ್ಗೆ 10.0 ರಿಂದ ರಾತ್ರಿ 9.30ವರೆಗೆ
9972654740

WE ARE HIRING URGENTLY!
1) Any Qualification,
2) Language Required, (Hindi, Malayalam, Tamil, Telugu), Any Two Language Needed
3) Salary Plus Incentive
4) For more Details contact below no

9742290479
9901269622

LIFE PARTNER ಆಗಲು ವಿಚ್ಛೇದಿತೆಗೆ ವರ ಬೇಕಾಗಿದ್ದಾರೆ.
Beautiful ಲಿಂಗಾಯತ Age: 38/5.3 hieght, M.Sc, PHD, Ass Professor Salary:80,000/- ಇರುವಂತಹ ವಿದ್ಯಾವಂತೆ, ಸಿರಿವಂತೆ ವಿಚ್ಛೇದಿತೆ ವಧುವಿಗೆ 2ನೇ ಸಂಬಂಧಕ್ಕೆ ವಿಧುರ/ವಿಚ್ಛೇದಿತ/ನೌಕರಸ್ಥ/ವಿದ್ಯಾವಂತ ವರ ಬೇಕಾಗಿದ್ದಾರೆ.
ಯಾವುದೇ ಜಾತಿಯ ಅಭ್ಯಂತರವಿಲ್ಲ/ ಮಕ್ಕಳಿದ್ದರೂ ಪರವಾಗಿಲ್ಲ (ಸರಳ ವಿವಾಹಕ್ಕೆ ಆದ್ಯತೆ)
ಮೈಸೂರು: 9480385742

SITE'S FOR SALE
MUDA & DTCP APPROVED LAYOUT'S 20X30, 30X40 & 30X50, T.Narasipura Road Bogadi Road & Yelawala. Contact
TEJAS GROUPS
9980771029

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16000 ರಿಂದ 20000ವರೆಗೆ
6366141518, 9845010281

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್ ಕೆಲಸಕ್ಕೆ ಕ್ಯಾಷಿಯರ್ ಮತ್ತು ಸಹಾಯಕರು ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯ ಇರುತ್ತದೆ.
ಸ್ಥಳ – ಹಿನಕಲ್ ಮೈಸೂರು
9538811425

WANTED HOUSE FOR LEASE
2 BHK house in 30x40 Preferred : Vijayanagar, Hebbal Vantikoppal, J.L.Puram, Saraswathipuram
Brokers Excuse
9901821508

STUDY HUB TUITION CLASSES
1st TO 8th
ALL SUBJECTS
* Projector Based Clasess
* Individual Attention
* Regular Test and Evaluation
* Small batches

ADMISSION OPEN
206, Behind sharadadevinagara Circle Busstand, Mysore
9611707493

SITE FOR SALE
60X40 W/F Anandanagar
60x40 S/F Bapuji Badavane
30x40 S/F Anandanagar
9449322258

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ:
6361740552
Lady Receptionist ಬೇಕಾಗಿದ್ದಾರೆ

ಬಾಡಿಗೆಗೆ
ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿ Ground Floorನಲ್ಲಿ 600 ಚ.ಅಡಿಯಷ್ಟು ಸ್ಥಳಾವಕಾಶವಿರುತ್ತದೆ. Tuition Coaching Center office/ Clinic ನಡೆಸಲು ಸೂಕ್ತವಾಗಿರುತ್ತದೆ.
8105751169
9620607138

2BHK FLAT FOR RENT
at Premier Red Wood Apartment, Lalitha Mahal Road, Semi Furnished
9480343691

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಖರ್ಜೂರ ದ್ರಾಕ್ಷಿ ಮುಂತಾದ ಡ್ರೈ ಫ್ರೂಟ್ಸ್ ದೊರೆಯುತ್ತದೆ.
(5 ಕಿ.ಮೀ. ವರೆಗೂ ಉಚಿತ ಡೆಲಿವರಿ)
ಸಂಪರ್ಕಿಸಿ: ರಾಜ್‌ಗುರು ಡ್ರೈ ಫ್ರೂಟ್ಸ್ ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ (ಹೂಟಗಳ್ಳಿ)
2) ಸೆಕ್ಯೂರಿಟಿ ಗಾರ್ಡ್ಸ್ (ಹೂಟಗಳ್ಳಿ, ಬಂಬೂಬಜಾರ್, ಕುವೆಂಪುನಗರ & ಸಿದ್ಧಾರ್ಥನಗರ)
3) ಹೌಸ್ ಕೀಪಿಂಗ್–ಹುಡುಗರು, ಹಿನಕಲ್

ESI ಮತ್ತು PF ಸೌಲಭ್ಯವಿರುತ್ತದೆ
9739166772

ಸೈಟು ಮಾರಾಟಕ್ಕಿದೆ
ಸುವರ್ಣನಗರ ಬೋಗಾದಿ
30x40 S/F
30x50 W/F
9742421313
9945779947

WANTED
Sales Assistant for Billing Petrol Diesel & Gas for Vehicles at Petrol Bunk at Mysore City Cashier Plus Helper Preference PUC & Above Salary as per Qualification
9901120389
9844002226

RS CONSTRUCTION
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ ಇಂದೇ ಸಂಪರ್ಕಿಸಿ
9538575009
7019151884

A TO Z WE-BUY
WE-BUY-HOUSE HOLD ARTICLES OLD FURNITURES, ELECTRIC ITEMS UPS, BATTERY, OLD GENERATOR OLD VESSELS AND SCRAP ITEMS
Call: Anand
9900945675

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಅಧಿಕ ಲಾಭದ ಆಮಿಷವೊಡ್ಡಿ ಇಬ್ಬರಿಗೆ ಆನ್‌ಲೈನ್‌ನಲ್ಲಿ ಲಕ್ಷಾಂತರ ರೂ. ವಂಚನೆ



ಮೈಸೂರು, ಡಿ.15–ಹಣ ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದರೆ ದುಪ್ಪಟ್ಟು ಹಣ ಸಿಗಲಿದೆ ಎಂದು ಆಮಿಷವೊಡ್ಡಿ ಮೈಸೂ ರಿನ ಇಬ್ಬರಿಗೆ ಲಕ್ಷಾಂತರ ರೂ.ಗಳನ್ನು ಆನ್‌ಲೈನ್ ಮೂಲಕ ವಂಚಿಸಲಾಗಿದೆ. ಕೆ.ಆರ್.ಮೊಹಲ್ಲಾದ ಬಸವೇಶ್ವರ ರಸ್ತೆ ನಿವಾಸಿ ಎಂ.ಭರತ್(30) ಅವರಿಗೆ 7506848271 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಆನ್‌ಲೈನ್ ಜಾಬ್ ಬಗ್ಗೆ ತಿಳಿಸಿದ್ದು, ಇನ್‌ಸ್ಟಾ ಗ್ರಾಂನಲ್ಲಿ ಸೆಲೆಬ್ರಿಟಿಗಳ ಖಾತೆಗಳನ್ನು ಲೈಕ್ ಮತ್ತು ಫಾಲೋ ಮಾಡುವ ಟಾಸ್ಕ್ ನೀಡಿದ್ದಾರೆ. ಮೊದಲ ಬಾರಿ 300 ರೂ.ಗಳನ್ನು ಭರತ್ ಖಾತೆಗೆ ಜಮೆ ಮಾಡಲಾಗಿದೆ. ನಂತರ ಹಣ ಹೂಡಿಕೆ ಮಾಡಿ ಟಾಸ್ಕ್ ಪೂರೈಸಿದರೆ ಮತ್ತಷ್ಟು ಹಣ ಸಿಗುತ್ತದೆ ಎಂದು ತಿಳಿಸಿದ ಮೇರೆಗೆ ಭರತ್ ಹಣ ಹೂಡಿಕೆ ಮಾಡಿದ್ದಾರೆ. ಒಮ್ಮೆ 5 ಸಾವಿರ ರೂ. ಹಾಗೂ ಮತ್ತೊಮ್ಮೆ 18 ಸಾವಿರ ರೂ.ಗಳನ್ನು ಭರತ್ ಖಾತೆಗೆ ವಂಚಕರು ಜಮೆ ಮಾಡಿದ್ದಾರೆ. ನಂತರ ಹಂತ ಹಂತವಾಗಿ ಭರತ್ 1.59 ಲಕ್ಷ ರೂ. ಹೂಡಿಕೆ ಮಾಡಿ ವಂಚನೆಗೊಳಗಾಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಬನ್ನಿಮಂಟಪ ಕೆಎಸ್‌ಆರ್‌ಟಿಸಿ ಕ್ವಾರ್ಟರ್ಸ್‌ನಲ್ಲಿ ವಾಸವಿರುವ ಗೃಹಿಣಿ ಸಾವಿತ್ರಿಬಾಯಿ (37) ಎಂಬುವರಿಗೆ ಟಾಸ್ಕ್ ಮಾಡಿದರೆ ಹಣ ಡಬ್ಬಲ್ ಆಗುತ್ತದೆ ಎಂಬ ಜಾಹೀರಾತು ಅವರ ಟೆಲಿಗ್ರಾಂ ಖಾತೆಯಲ್ಲಿ ಕಂಡು ಬಂದಿದೆ. ಅದನ್ನು ನಂಬಿದ ಸಾವಿತ್ರಿಬಾಯಿ, ಹಂತ ಹಂತವಾಗಿ 5,25,500 ರೂ. ಹೂಡಿಕೆ ಮಾಡಿ ವಂಚನೆಗೊಳಗಾಗಿದ್ದಾರೆ. ಇವೆರಡೂ ಪ್ರಕರಣಗಳೂ ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.



ಅರಣ್ಯ ಸಂಚಾರಿ ದಳದಿಂದ ಮೂವರ ಬಂಧನ; ಶ್ರೀಗಂಧ ವಶ

ಮೈಸೂರು, ಡಿ.15–ಮೈಸೂರಿನ ಪೊಲೀಸ್ ಅರಣ್ಯ ಸಂಚಾರ ದಳದ ಸಿಬ್ಬಂದಿ 308.550 ಕೆಜಿ ಶ್ರೀಗಂಧ ವಶಪಡಿಸಿಕೊಂಡು ಉತ್ತರಕನ್ನಡ ಜಿಲ್ಲೆಯ ರಿಯಲ್ ಎಸ್ಟೇಟ್ ಉದ್ಯಮಿ ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ.

ಉತ್ತರಕನ್ನಡ ಜಿಲ್ಲೆಯ ಶಿರಸಿ ಪಟ್ಟಣದ ರಿಯಲ್ ಎಸ್ಟೇಟ್ ಉದ್ಯಮಿ ರಾಘವೇಂದ್ರ ಗುಡಿಗಾರ್(45), ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕು ತಾವನಾಡಿ ಗ್ರಾಮದ ಸಚಿನ್ ಎಂ.ಗುಡಿಗಾರ್ (34) ಮತ್ತು ಮೈಸೂರಿನ ರಾಜೇಂದ್ರನಗರ ನಿವಾಸಿ ನಾರಾಯಣ ಅಲಿಯಾಸ್ ಸತ್ಯ(37) ಬಂಧಿತರು.

ವಿವರ: ಪೊಲೀಸ್ ಅರಣ್ಯ ಸಂಚಾರ ದಳದ ಸಬ್ ಇನ್ಸ್‌ಪೆಕ್ಟರ್ ಆರ್.ಲಕ್ಷ್ಮಿ ಅವರಿಗೆ ಬಂದ ಖಚಿತ ಮಾಹಿತಿ ಮೇರೆಗೆ ಡಿ.13ರಂದು ಬೆಳಗ್ಗೆ 6 ಗಂಟೆ ಸುಮಾರಿನಲ್ಲಿ ಲಕ್ಷ್ಮಿ ಅವರು ಕೊಳ್ಳೇಗಾಲದ ಪೊಲೀಸ್ ಅರಣ್ಯ ಸಂಚಾರ ದಳದ ಸಬ್ ಇನ್ಸ್‌ಪೆಕ್ಟರ್ ವಿಜಯರಾಜ್ ಮತ್ತು ಸಿಬ್ಬಂದಿಯೊಂದಿಗೆ ಮೈಸೂರಿನ ಮಂಡಿ ಮೊಹಲ್ಲಾದ ಹನುಮಂತು ಹೋಟೆಲ್ ಬಳಿ ತೆರಳಿದಾಗ ಅಲ್ಲಿ ಬಿಳಿ ಬಣ್ಣದ ಕ್ರೇಟಾ ಕಾರು(ಕೆಎ 31 ಎನ್ 6907) ನಿಂತಿತ್ತು. ಸಂಶಯದ ಮೇರೆಗೆ ಕಾರಿನಲ್ಲಿದ್ದ ರಾಘವೇಂದ್ರ ಮತ್ತು ಸಚಿನ್ ಅವರುಗಳನ್ನು ವಿಚಾರಣೆ ಮಾಡಿ ಕಾರಿನ ಡಿಕ್ಕಿ ತೆರೆದು ಪರಿಶೀಲಿಸಿದಾಗ 10 ಚೀಲಗಳಲ್ಲಿ ಶ್ರೀಗಂಧದ ತುಂಡುಗಳು ಇರುವುದು ಪತ್ತೆಯಾಗಿದೆ. ಈ ವೇಳೆ ರಾಘವೇಂದ್ರ, ಶಿರಸಿಯ ಅಕ್ಕಪಕ್ಕದ ಕಾಡಿನಿಂದ ಜನರು ತರುವ ಶ್ರೀಗಂಧದ ತುಂಡುಗಳನ್ನು ತಾನು ಖರೀದಿಸುತ್ತಿದ್ದು, ಅದನ್ನು ಇದೇ ರಸ್ತೆಯಲ್ಲಿರುವ ನಾರಾಯಣ ಅಲಿಯಾಸ್ ಸತ್ಯ ಅವರಿಗೆ ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿದ್ದಾನೆ. ಕಾರಿನ ಎಡ ಭಾಗದಲ್ಲಿದ್ದ ರಾಜೇಂದ್ರ ನಗರದ ನಾರಾಯಣ ಅಲಿಯಾಸ್ ಸತ್ಯ ಮಾಲೀಕತ್ವದ ನಾರಾಯಣ ಫೈನ್ ಆರ್ಟ್ಸ್ ಮಳಿಗೆ ಮೇಲೆ ದಾಳಿ ನಡೆಸಿದಾಗ ಅಲ್ಲಿ ಕೂಡ 8 ಚೀಲಗಳಲ್ಲಿ ಶ್ರೀಗಂಧದ ತುಂಡುಗಳು ದೊರೆತಿವೆ. ಒಟ್ಟು 308.550 ಕೆಜಿ ಶ್ರೀಗಂಧ, ಕ್ರೇಟಾ ಕಾರು ಮತ್ತು 2 ಮೊಬೈಲ್‌ಗಳನ್ನು ವಶಪಡಿಸಿಕೊಂಡ ಸಬ್ ಇನ್ಸ್‌ಪೆಕ್ಟರ್ ಲಕ್ಷ್ಮಿ ಅವರು ಈ ಸಂಬಂಧ ಮಂಡಿ ಠಾಣೆಯಲ್ಲಿ ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

ಮನೆ ಮಾರುವುದಾಗಿ ಅಡ್ವಾನ್ಸ್ ಪಡೆದು ವಂಚನೆ: ಮೂವರ ವಿರುದ್ಧ ಕೇಸು ದಾಖಲು

ಮೈಸೂರು, ಡಿ.15–ಮನೆ ಮಾರಾಟ ಮಾಡುವುದಾಗಿ 2 ಲಕ್ಷ ರೂ. ಅಡ್ವಾನ್ಸ್ ಪಡೆದು ಅಗ್ರಿಮೆಂಟ್ ಮಾಡಿಕೊಂಡ ನಂತರ ಮನೆಯನ್ನು ಬೇರೆಯವರಿಗೆ ಮಾರಾಟ ಮಾಡುವ ಮೂಲಕ ವಂಚನೆ ಎಸಗಿರುವ ಆರೋಪದ ಮೇರೆಗೆ ಒಂದೇ ಕುಟುಂಬದ ಮೂವರ ವಿರುದ್ಧ ನ್ಯಾಯಾಲಯದ ಆದೇಶದ ಮೇರೆಗೆ ಪ್ರಕರಣ ದಾಖಲಾಗಿದೆ. ಮೈಸೂರಿನ ಕುಂಬಾರಕೊಪ್ಪಲು ನಿವಾಸಿಗಳಾದ ಸೋಮ ಸುಂದರ್, ಕೆ.ಯೋಗಿತ, ಎಸ್.ಎಸ್.ಚಂದನಾ ಆರೋಪಕ್ಕೆ ಗುರಿಯಾಗಿರುವವರು. ಇವರು ಕುಂಬಾರಕೊಪ್ಪಲು ಒಂದನೇ ಮುಖ್ಯ ರಸ್ತೆಯಲ್ಲಿ 38/1 ಸಂಖ್ಯೆಯ ಮನೆ ಮಾಲೀಕರಾಗಿದ್ದು, ಈ ಮನೆಯನ್ನು 8 ಲಕ್ಷ ರೂ.ಗಳಿಗೆ ಮಾರಾಟ ಮಾಡುವುದಾಗಿ ತಿಳಿಸಿ, ಗುಂಡ್ಲುಪೇಟೆ ತಾಲೂಕು ಪಡಗೂರು ಗ್ರಾಮದ ಪಿ.ಸಿ.ಸುರೇಶ್ ಅವರಿಂದ 2 ಲಕ್ಷ ರೂ. ಅಡ್ವಾನ್ಸ್ ಪಡೆದು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಒಪ್ಪಂದ ಕರಾರು ಪತ್ರವನ್ನು 2017ರ ಸೆ.27ರಂದು ನೋಂದಾಯಿಸಿದರು.

ನಂತರ ಸುರೇಶ್ ಅವರಿಗೆ ತಿಳಿಯದಂತೆ ಮೈಸೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಇದೇ ಮನೆಯ ಮೇಲೆ ಸಾಲ ಪಡೆದಿದ್ದರು. ಬ್ಯಾಂಕ್‌ನವರೂ ಕೂಡ ಋಣಭಾರ ಪ್ರಮಾಣ ಪತ್ರ ಹಾಗೂ ದಾಖಲಾತಿಗಳನ್ನು ಪರಿಶೀಲಿಸದೆ ಸಾಲ ಮಂಜೂರು ಮಾಡಿದ್ದರು ಎಂದು ಆರೋಪಿಸಲಾಗಿದೆ. ಈ ಸಂಬಂಧ ಮೈಸೂರಿನ 5ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಸುರೇಶ್ ಪ್ರಕರಣ ದಾಖಲಿಸಿದ್ದರು. ಈ ಮಧ್ಯೆ ಈ ಮೂವರೂ ಸೇರಿ 2022ರ ಸೆ.6ರಂದು ಭರತ್‌ರಾಜ್ ಎಂಬುವರಿಗೆ ಮನೆಯನ್ನು ಮಾರಾಟ ಮಾಡುವ ಮೂಲಕ ಸುರೇಶ್ ಅವರನ್ನು ವಂಚಿಸಿದ್ದಾರೆ. ಮೈಸೂರಿನ 7ನೇ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯದ ಆದೇಶದ ಮೇರೆಗೆ ಮೇಟಗಳ್ಳಿ ಪೊಲೀಸರು ಸೋಮಸುಂದರ್ ಮತ್ತಿತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ; ಬಿಜೆಪಿ ಶಾಸಕನಿಗೆ 25 ವರ್ಷ ಜೈಲು

ಸೋನಭದ್ರ, ಡಿ.15– ಒಂಭತ್ತು ವರ್ಷಗಳ ಹಿಂದೆ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ ಉತ್ತರ ಪ್ರದೇಶದ ಬಿಜೆಪಿ ಶಾಸಕ ರಾಮದುಲರ್ ಗೊಂಡ್ ಅವರಿಗೆ ವಿಶೇಷ ನ್ಯಾಯಾಲಯ ಶುಕ್ರವಾರ 25 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಹೀಗಾಗಿ ಉತ್ತರ ಪ್ರದೇಶ ವಿಧಾನಸಭೆಯಿಂದ ಬಿಜೆಪಿ ಶಾಸಕ ಅನರ್ಹಗೊಳ್ಳಲಿದ್ದಾರೆ.



ಪ್ರಜಾಪ್ರತಿನಿಧಿ ಕಾಯ್ದೆಯ ಪ್ರಕಾರ, ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಜೈಲು ಶಿಕ್ಷೆಗೆ ಗುರಿಯಾದ ಶಾಸಕರನ್ನು ಅನರ್ಹಗೊಳಿಸಲಾಗುತ್ತದೆ ಮತ್ತು ಮುಂದಿನ ಆರು ವರ್ಷಗಳವರೆಗೆ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧ ವಿಧಿಸಲಾಗುತ್ತದೆ. 2014ರಲ್ಲಿ ನಡೆದ ಅಪ್ರಾಪ್ತ ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣದ ವಿಚಾರಣೆ ನಡೆಸಿದ ಎಂಪಿ/ಎಂಎಲ್‌ಎ ನ್ಯಾಯಾಲಯದ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ(ಪ್ರಥಮ) ಎಹ್ಸಾನ್ ಉಲ್ಲಾ ಖಾನ್ ಅವರು, ಬಿಜೆಪಿ ಶಾಸಕ ದೋಷಿ ಎಂದು ಕಳೆದ ಮಂಗಳವಾರ ತೀರ್ಪು ನೀಡಿದ್ದರು. ಆದರೆ ಶಿಕ್ಷೆಯ ಪ್ರಮಾಣವನ್ನು ಡಿಸೆಂಬರ್ 15ಕ್ಕೆ ಕಾಯ್ದಿರಿಸಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಕುವೆಂಪುರವರಿಗೆ ನಮನ; 'ಜಲಗಾರ' ನಾಟಕ ಪ್ರದರ್ಶನ



ಮೈಸೂರು, ಡಿ.15(ಎಸ್‌ಪಿಎನ್)– 'ಕುವೆಂಪು ನಮನ ಕಾರ್ಯಕ್ರಮ'ದ ಅಂಗವಾಗಿ ಇಂದು ಅಮರ ಛಾಯಾಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ನಂತರ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್‌ನ ಕಲಾವಿದರು ಕುವೆಂಪು ರಚಿತ 'ಜಲಗಾರ' ನಾಟಕ ಅಭಿನಯಿಸಿ, ಪ್ರೇಕ್ಷಕರ ಮನಸೆಳೆದರು.

ಮೈಸೂರು ಕಲಾಮಂದಿರದ ಆವರಣದ ಕಿರುರಂಗಮಂದಿರದಲ್ಲಿ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಿತ್ತು.

ಎಪಿಎಂಸಿ ಮಾಜಿ ಉಪಾ ಧ್ಯಕ್ಷ ಅಹಿಂದ ಜವರಪ್ಪ ಮಾತನಾಡಿ, ಕುವೆಂಪು ರಚಿತ ಜಲಗಾರ ನಾಟಕದಲ್ಲಿ ಸ್ವಚ್ಛತಾ ಕಾರ್ಮಿಕರ ಶೋಷಣೆ ಕುರಿತು ಮನೋಜ್ಞವಾಗಿ ವಿವರಿಸಿದ್ದಾರೆ. ಅಲ್ಲದೆ, ಅವರ ಬರಹಗಳಲ್ಲಿ ಆ ಕಾಲದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಶೋಷಿತರು, ಕೂಲಿ ಕಾರ್ಮಿಕರ ಜೀವನದ ತಲ್ಲಣ, ಸಾಂಸ್ಕೃತಿಕ ಪಲ್ಲಟಗಳನ್ನು ಕುರಿತು ಸಮಗ್ರವಾಗಿ ವಿವರಿಸಿದ್ದಾರೆ ಎಂದರು.

ಕುವೆಂಪು ಸಾಹಿತ್ಯ ಎಲ್ಲಾ ಕಾಲಕ್ಕೂ ಸಲ್ಲುವ ಬರಹಗಳು. ಅವರು ಕರ್ನಾಟಕ ಏಕೀಕರಣಕ್ಕಾಗಿ, ಕನ್ನಡ ಭಾಷಾ ಏಳಿಗೆಗಾಗಿ ಸಾಕಷ್ಟು ಶ್ರಮಿಸಿದ್ದಾರೆ. ಅಲ್ಲದೆ, 'ಶ್ರೀ ರಾಮಾಯಣಂ ದರ್ಶನಂ' ಕೃತಿ ರಚಿಸಿ, ಕನ್ನಡ ಭಾಷೆಗೆ ವಿಶ್ವಮಟ್ಟದಲ್ಲಿ ಮೆರಗು ತಂದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು. ಸಮಾಜದ ಸಮಸ್ಯೆಗಳನ್ನು ಸಮುದಾಯಕ್ಕೆ ತಲುಪಿಸುವ ಏಕೈಕ ಮಾಧ್ಯಮ ರಂಗಭೂಮಿ. ರಂಗಭೂಮಿಯಲ್ಲಿ ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಪಟ್ಟವರ ಬದುಕು–ಬವಣೆಗಳ ಕುರಿತು ಜನರ ಮನಸ್ಸಿಗೆ ತಲುಪಿಸುವ ಮಾಧ್ಯಮವಾಗಿದೆ. ಈ ಮೂಲಕ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಕಲಾವಿದರು 'ಜಲಗಾರ' ನಾಟಕ ಪ್ರದರ್ಶಿಸುವ ಮೂಲಕ ಕುವೆಂಪು ಸ್ಮರಣೆ ಮಾಡುತ್ತಿರುವುದು ಸಂತೋಷದ ಸಂಗತಿ ಎಂದರು.

ಈ ವೇಳೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಎ.ಸುದರ್ಶನ್, ರಾಜೇಶ್ವರಿ ವಸ್ತ್ರಾಲಂಕಾರದ ಬಿ.ಎಂ.ರಾಮಚಂದ್ರು, ಟ್ರಸ್ಟ್‌ನ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ವಕೀಲ ಎಂ.ಶಿವಪ್ರಸಾದ್ ಉಪಸ್ಥಿತರಿದ್ದರು.

ಕ್ರಿಸ್‌ಮಸ್ ಶಾಪಿಂಗ್ ಉತ್ಸವ

ಮೈಸೂರು, ಡಿ.15– 'ಮಾಲ್ ಆಫ್ ಮೈಸೂರ್' ಡಿ.16ರಿಂದ 23ರವರೆಗೆ 'ಕ್ರಿಸ್‌ಮಸ್ ಶಾಪಿಂಗ್ ಉತ್ಸವ' ಪ್ರಸ್ತುತಪಡಿಸುತ್ತಿದೆ. ಈ ಅವಧಿಯಲ್ಲಿ 5 ಸಾವಿರ ರೂ. ಅಥವಾ ಅದಕ್ಕಿಂತ ಹೆಚ್ಚಿನ ಶಾಪಿಂಗ್ ಮಾಡಿದ ಗ್ರಾಹಕರಿಗೆ ಮಾಲ್ ವತಿಯಿಂದ ಖಚಿತ ಉಡುಗೊರೆ ನೀಡಲಾಗುತ್ತದೆ. ಅಲ್ಲದೆ ಡಿ.24 ಮತ್ತು 25ರಂದು ಸಂತಾಕ್ಲಾಸ್ ಆಚರಣೆ ಹಮ್ಮಿಕೊಂಡಿದ್ದು ಈ ವೇಳೆ ಮಕ್ಕಳು ಆಕರ್ಷಕ ಉಡುಗೊರೆಯನ್ನು ಗೆಲ್ಲಬಹುದಾಗಿದೆ. ಜೊತೆಗೆ ಎತ್ತರದ ಕ್ಯಾಂಡಿ ಕ್ಯಾನ್, ಸೈನಿಕ ಪ್ರತಿಕೃತಿ ಪ್ರದರ್ಶನ ಮತ್ತು ವಿಂಟರ್ ಬಬಲ್ ಶೋ ವೀಕ್ಷಿಸಿ, ಆನಂದಿಸಬಹುದಾಗಿದೆ. ಇದು ಕೇವಲ ಶಾಪಿಂಗ್ ಉತ್ಸವ ಮಾತ್ರವಲ್ಲ, ನಮ್ಮ ಸಮುದಾಯದೊಂದಿಗೆ ಅಮೂಲ್ಯವಾದ ನೆನಪುಗಳನ್ನು ಸೃಷ್ಟಿಸುವ ಸುಸಂದರ್ಭ. ಈ ಸಮಯವನ್ನು ಸಂಭ್ರಮಿಸಲು ಆತ್ಮೀಯವಾಗಿ ಎಲ್ಲರನ್ನೂ ಸ್ವಾಗತಿಸುತ್ತಿದ್ದೇವೆ ಎಂದು ಮಾಲ್ ಆಫ್ ಮೈಸೂರ್ ಜನರಲ್ ಮ್ಯಾನೇಜರ್ ಕರ್ನಲ್ ಸಿ.ಪಿ.ಮೇದಪ್ಪ ತಿಳಿಸಿ ದ್ದಾರೆ. ಮಾಹಿತಿಗೆ ಸೀನಿಯರ್ ಮಾರ್ಕೆಟಿಂಗ್ ಮ್ಯಾನೇಜರ್ ಬಿ.ಎಸ್.ಸುಮಂತ್ (ಮೊ.: 9986770501)ರನ್ನು ಸಂಪರ್ಕಿಸಬಹುದು.

ವಿವಿಧೆಡೆ ನಾಳೆ ವಿದ್ಯುತ್ ವ್ಯತ್ಯಯ



ಮೈಸೂರು,ಡಿ.15– ಡಿ.17 ರಂದು ಬೆಳಗ್ಗೆ 10ರಿಂದ ಸಂಜೆ 5:30 ಗಂಟೆಯವರೆಗೆ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ಈ ಸಂಬಂಧ ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ಮಣಿಪಾಲ್ ಹಾಸ್ಪಿಟಲ್ಸ್, ಹನುಮಂತನಗರ, ಹುಡ್ಕೊ, ಇಂಡಸ್ಟ್ರಿಯಲ್ 'ಎ' ಬಡಾವಣೆ, 'ಸಿ' ಬಡಾವಣೆ, ಟೆಲಿಫೋನ್ ಎಕ್ಸ್‌ಚೇಂಜ್, ಕೆಎಸ್‌ಆರ್‌ಟಿಸಿ ಡಿಪೋ, ಲಿಡ್ಕರ್ ಕಾಲೋನಿ, ಇಂಡಸ್ಟ್ರಿಯಲ್ 'ಬಿ' ಬಡಾವಣೆ, ಹೈವೆ ವೃತ್ತ, ಸ್ಟಾರ್ ಆಫ್ ಮೈಸೂರ್, ಪರಹಾ ಕಾಂಪೌಂಡ್, ಕಾವೇರಿನಗರ, ಬೆಲವತ್ತ, ಶಾದನಹಳ್ಳಿ, ಸಿದ್ದಲಿಂಗಪುರ, ಕೆ.ಆರ್.ಮಿಲ್ ಕಾಲೋನಿ, ನಾಗನಹಳ್ಳಿ, ಲಕ್ಷ್ಮಿಪುರ, ಕಳಸ್ತವಾಡಿ, ಮೈಸೂರು–ಬೆಂಗಳೂರು ಮುಖ್ಯ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೂಟಗಳ್ಳಿ ಸ್ವೀಕರಣಾ ಕೇಂದ್ರದ ವ್ಯಾಪ್ತಿಯ ಪ್ರದೇಶಗಳು: ಆಟೋಮೋಟಿವ್ ಆಕ್ಸೆಲ್ ಸುತ್ತಮುತ್ತ, ರಾಣಿ ಮದ್ರಾಸ್ ಪಕ್ಕದ ರಸ್ತೆ, ಹೆಚ್.ಟಿ.ರೆಕೆಟ್ ಬೆನ್‌ಸರ್, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಹಳೇ ಲೂನಾರ್ಸ್, ತಿಂಯೋರೆವ್ಸ್, ಸ್ಟ್ರಾ ಪೈಪ್ಸ್, ವರ್ಷ ಕೇಬಲ್, ಎಲ್&ಟಿ, ವಿಪ್ರೋ ಲೈಟ್ಸ್, ಶ್ರೀರಾಮ್ ಇಂಜಿನಿಯರ್ಸ್, ರಜತ್ ಬ್ಯಾಟರಿ, ಆರ್.ಪಿ.ಜಿ ಕೇಬಲ್, ಜಿಮ್‌ಕೋ, ಸ್ಪೈ, ಎಂಪ್ರೋ ಕಾಂಕ್ರಿಟ್, ಡ್ಯಾಮ್‌ಡನ್ ಅಪಾರ್ಟ್ಮೆಂಟ್, ಹಿನಕಲ್ ಆಶ್ರಯ ಯೋಜನೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಮೇಟಗಳ್ಳಿ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ಪ್ರದೇಶಗಳು: ಮೇಟಗಳ್ಳಿ ವ್ಯಾಪ್ತಿಯ ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೇಟಗಳ್ಳಿ, ಬೃಂದಾವನ ಬಡಾವಣೆ, ಲೋಕನಾಯಕನಗರ, ಜಯದೇವನಗರ, ಬಿ.ಎಂ.ಶ್ರೀನಗರ, ಹೆಬ್ಬಾಳ್ ಹೊರ ವರ್ತುಲ ರಸ್ತೆ, HPCL GAS ಪ್ಲಾಂಟ್ ಸುತ್ತಮುತ್ತ, ಹೆಬ್ಬಾಳ್ 1ನೇ, 2ನೇ ಹಾಗೂ 3ನೇ ಹಂತ, ಸುಬ್ರಹ್ಮಣ್ಯನಗರ, ಬಸವನಗುಡಿ, ಎಸ್‌ಬಿಎಂ ಬ್ಯಾಂಕ್ ಸುತ್ತಮುತ್ತ, ಹೆಬ್ಬಾಳ್ ಕಾಲೋನಿ, ಹೆಬ್ಬಾಳ್ ಮುಖ್ಯರಸ್ತೆ, ಲಕ್ಷ್ಮಿಕಾಂತನಗರ, ಸಂಕ್ರಾಂತಿ ವೃತ್ತ, ಗೋಲ್ಡನ್ ಬೇಕರಿ, ಕೆಐಎಡಿಬಿ ಲೇಔಟ್, ಮಯೂರ ವೃತ್ತ, ಕಾವೇರಿ ವೃತ್ತ, ಮಿಲಿಟರಿ ಕ್ವಾಟ್ರಸ್, ಆರ್‌ಬಿಐ, ವಿಕ್ರಾಂತ್ ಮೇನ್ ಪ್ಲಾಂಟ್ ಮತ್ತು ಶಿವಮೊಗ್ಗ ಸ್ಟೀಲ್ಸ್ ಸುತ್ತಮುತ್ತಲಿನ ಪ್ರದೇಶಗಳು. ಬೆಳಗೊಳ ಕೈಗಾರಿಕಾ ಪ್ರದೇಶ, ಕೆಆರ್‌ಎಸ್ ರಸ್ತೆ, ಭೈರವೇಶ್ವರನಗರ, ಬಸವೇಶ್ವರ ನಗರ, ಮೇಟಗಳ್ಳಿ ಕೈಗಾರಿಕಾ ಪ್ರದೇಶ ಹಾಗೂ ಸುತ್ತ ಮುತ್ತಲಿನ ಪ್ರದೇಶ.

ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ: ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಎಕ್ಸೆಲ್ ಬ್ರಿಕ್ ಶಾಲೆ, ವಿನ್ಯಾಸ್, ಕೂರ್ಗಳ್ಳಿ ಕೆರೆ ಸುತ್ತಮುತ್ತ, ಗೋಪಾಲನ್ ಕಾಂಪೌಂಡ್, ವಿಪ್ರೋ, ಮೆರಿಟಾರ್, ಪಟ್ಟಾಬಿ ಎಂಟರ್‌ಪ್ರೈಸಸ್, ಮಿಲೆನಿಯಮ್, ಎಲ್&ಟಿ, ಮಾರ್ಕ್ ಬ್ಯಾಟರಿಸ್‌ರಸ್ತೆ ಚಾಮುಂಡಿ ಸಿಲ್ಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲೂ ವಿದ್ಯುತ್ ವ್ಯತ್ಯಯವಾಗಲಿದೆ.

ಕಲಾವಿದರ ಕುಂಚದಲ್ಲಿ ಅರಳಿದ ಅರ್ಜುನನ 3ಡಿ ಚಿತ್ರ



ಮೈಸೂರು, ಡಿ.15(ಆರ್‌ಕೆ)–ಕಾಡಾನೆ ಕಾರ್ಯಾಚರಣೆ ವೇಳೆ ದುರಂತ ಸಾವಿಗೀಡಾದ ಅರ್ಜುನನ 3ಡಿ ಚಿತ್ರವೊಂದು ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಕಾವಾ ಕಲಾವಿದರ ಕುಂಚದಲ್ಲಿ ಮೂಡಿ ಬಂದಿದೆ.

ಅನಿಲ್ ಕುಮಾರ್ ಭೋಗಶೆಟ್ಟಿ, ಭರತ್ ಯೋಗ, ಬಿ.ಆರ್.ರಾಜೇಶ್ ಹಾಗೂ ಚೇತನ್ ಅವರು ಅರ್ಜುನನ 3ಡಿ ಚಿತ್ರವನ್ನು ಬಿಡಿಸುವ ಮೂಲಕ ಮೈಸೂರು ದಸರಾ ಮಹೋತ್ಸವದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತು, ಮೈಸೂರಿನಲ್ಲಿ ಮನೆಮಾತಾಗಿದ್ದ ಗಜರಾಜನ ನೆನಪು ಮರುಕಳಿಸುವಂತೆ ಮಾಡಿದ್ದಾರೆ.

ಅರ್ಜುನ ಸಾವಿಗೀಡಾಗಿ 11ನೇ ದಿನದ ಅಂಗವಾಗಿ ಕಲಾವಿದ ಅನಿಲ್ ಭೋಗಶೆಟ್ಟಿ ಅವರು 3ಡಿ ಚಿತ್ರ ಬಿಡಿಸುವ ಮೂಲಕ ಮೈಸೂರಿನೊಂದಿಗೆ ಅರ್ಜುನ ಹೊಂದಿದ್ದ ಭಾವನಾತ್ಮಕ ಸಂಬಂಧವನ್ನು ನೆನಪು ಮಾಡಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಪತ್ರಿಕಾ ಮತ್ತು ವನ್ಯಜೀವಿ ಛಾಯಾಗ್ರಾಹಕರಾದ ಎಸ್.ಆರ್.ಮಧುಸೂದನ್, ಜಿ.ಎಸ್.ರವಿಶಂಕರ್, ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಎಂ.ಮೋಹನ್ ಕುಮಾರ್ ಗೌಡ, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಸುಕುಮಾರ್, ಹಿರಿಯ ಛಾಯಾಗ್ರಾಹಕ ಕೆ.ಬಿ.ಮಹೇಶ್, ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ ಅಧ್ಯಕ್ಷ ಎ.ಶಾಂತಪ್ಪ ಕಾರ್ಯದರ್ಶಿ ಎನ್.ಮುರಳೀಧರ್, ನಾಗೇಂದ್ರಕುಮಾರ್ ಹಾಗೂ ಇತರರು ಉಪಸ್ಥಿತರಿದ್ದು, ಅರ್ಜುನನ 3ಡಿ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು.

ಸಾರ್ವಜನಿಕರು, ಪ್ರಾಣಿ ಪ್ರಿಯರು, ನಿಸರ್ಗ ಪ್ರೇಮಿಗಳು ಹಾಗೂ ಪ್ರವಾಸಿಗರು ಅರ್ಜುನನ ಚಿತ್ರದ ಬಳಿ ನಿಂತು ಸೆಲ್ಫಿ ತೆಗೆದುಕೊಂಡು, ಅಗಲಿದ ಅರ್ಜುನನಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಿದ್ದಾರೆ.

ಉತ್ತರ ಕರ್ನಾಟಕ ಅಭಿವೃದ್ಧಿಗೆ ಬದ್ಧ: ಪ್ರತ್ಯೇಕ ರಾಜ್ಯದ ಬೇಡಿಕೆ ಸಲ್ಲದು



ಬೆಂಗಳೂರು, ಡಿ.15(ಕೆಎಂಶಿ)– ಸರ್ಕಾರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬದ್ಧವಾಗಿದ್ದು, ಪ್ರತ್ಯೇಕ ರಾಜ್ಯದ ಬೇಡಿಕೆ ಸಲ್ಲದು ಹಾಗೂ ಅದು ತಾರತಮ್ಯ ನಿವಾರಣೆಗೆ ಪರಿಹಾರವೂ ಅಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಉತ್ತರ ಕರ್ನಾಟಕದ ಮೇಲಿನ ಚರ್ಚೆಗೆ ಉತ್ತರ ನೀಡಿದ ಮುಖ್ಯಮಂತ್ರಿಗಳು, ಪ್ರತ್ಯೇಕ ಕರ್ನಾಟಕಕ್ಕೆ ಒತ್ತಾಯ ಮಾಡುವುದು ಏಕೀಕರಣಕ್ಕೆ ಹೋರಾಡಿ, ಪ್ರಾಣ ತ್ಯಾಗ ಮಾಡಿದವರಿಗೆ ನಾವು ಮಾಡುವ ಅವಮಾನವಾಗಿದೆ. ಏಕೀಕರಣಕ್ಕಾಗಿ ಬಹಳ ಜನ ಹೋರಾಡಿದ್ದರು. ಭಾಷಾವಾರು ಪ್ರಾಂತ್ಯ ರಚನೆ ಆಗುವಾಗಲೂ ಹೋರಾಟ ಮಾಡಿದವರಿದ್ದಾರೆ. ಹೈದರಾಬಾದ್ ಕರ್ನಾಟಕಕ್ಕೆ 371ಗೆ ತಿದ್ದುಪಡಿ ಮಾಡಿ 371ಜೆ ಪರಿಚ್ಛೇದಕ್ಕಾಗಿ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ವೈಜನಾಥ್ ಪಾಟೀಲ್ ಮುಂತಾದವರು ಹೋರಾಡಿದರು. ನಾನು ಹಿಂದೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 2014 ಮತ್ತು 2017ರಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಿತ್ತು. ಒಮ್ಮೆ ಈ ಬಗ್ಗೆ ಎರಡು ಗಂಟೆಗಳಿಗೂ ಹೆಚ್ಚು ಕಾಲ ಉತ್ತರ ನೀಡಿದ್ದೆ ಎಂದು ಸ್ಮರಿಸಿದರು. ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನ ಖರ್ಚಾಗಿ ಅಭಿವೃದ್ಧಿಯಾಗಬೇಕು. ಕಿತ್ತೂರು ಕರ್ನಾಟಕದ 5 ತಾಲೂಕುಗಳು ಸೇರಿದಂತೆ ಅತೀ ಹಿಂದುಳಿದ, ಅತ್ಯಂತ ಹಿಂದುಳಿದ ತಾಲೂಕುಗಳಿಗೂ ಅನುದಾನ ಕೊಡಲಾಗುವುದು, ಕಲ್ಯಾಣ ಕರ್ನಾಟಕಕ್ಕೆ 2013–14 ರಿಂದ ಈವರೆಗೆ 14877.36 ಕೋಟಿ ರೂ.ಗಳು ಮೀಸಲಿಡಲಾಗಿದೆ. ಬಿಡುಗಡೆಯಾಗಿದ್ದು 10,280 ಕೋಟಿ ರೂ. ಹಾಗೂ 8,330 ಕೋಟಿ ರೂ. ವೆಚ್ಚವಾಗಿದೆ.

ಮುಂದಿನ ವರ್ಷದಿಂದ 5,000 ಕೋಟಿ ರೂ.ಗಳನ್ನು ಕಲ್ಯಾಣ ಕರ್ನಾಟಕಕ್ಕೆ ನೀಡಲಾಗುವುದು. ಮುಂಬೈ ಕರ್ನಾಟಕದ ಹಿಂದುಳಿದ ತಾಲೂಕುಗಳಿಗೂ ಅನುದಾನ ನೀಡಲಾಗುವುದು ಎಂದರು.



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ, ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಗರದ ಪುರಭವನದ ಮುಂದೆ ಶುಕ್ರವಾರವೂ ಧರಣಿ ಮುಂದುವರೆದಿದೆ. ಈ ವೇಳೆ ಸಮಿತಿ ಅಧ್ಯಕ್ಷ ಜಯಪ್ರಕಾಶ್,ಉಪಾಧ್ಯಕ್ಷ ಸುರೇಶ್ ಗೌಡ, ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಶೈಲಕುಮಾರ್, ಶುಭಶ್ರೀ, ಮೆಲ್ಲಹಳ್ಳಿ ಮಹದೇವಸ್ವಾಮಿ, ಮಂಜುಳಾ, ಪುಷ್ಪವತಿ, ಮಹದೇವ ಸ್ವಾಮಿ, ವಿವಿಧ ಕನ್ನಡ ಪರ ಸಂಘಟನೆ ಹೋರಾಟಗಾರರು ಮತ್ತು ರೈತ ಮುಖಂಡರು ಪಾಲ್ಗೊಂಡಿದ್ದರು.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು,ಡಿ.15– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2023–24ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ನ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ದಿನಾಂಕವನ್ನು ಡಿಸೆಂಬರ್ 22ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳೆಯ ಮೇಲಿನ ದೌರ್ಜನ್ಯ: ಸತ್ಯಶೋಧನೆಗೆ ಬಿಜೆಪಿ ತಂಡ ರಚನೆ

ಬೆಂಗಳೂರು, ಡಿ.15(ಕೆಎಂಶಿ)– ಬೆಳಗಾವಿಯ ವಂಟಮೂರಿ ಗ್ರಾಮದಲ್ಲಿ ನಡೆದ ಘಟನೆಯನ್ನು ಬಿಜೆಪಿ ರಾಷ್ಟ್ರೀಯ ಘಟಕ ತೀವ್ರವಾಗಿ ಪರಿಗಣಿಸಿ, ಪರಿಸ್ಥಿತಿ ಅಧ್ಯಯನಕ್ಕೆ ಸಂಸದರ ತಂಡವನ್ನು ಕರ್ನಾಟಕಕ್ಕೆ ಕಳುಹಿಸುತ್ತಿದೆ.

ಬುಡಕಟ್ಟು ಮಹಿಳೆಯನ್ನು ಬೆತ್ತಲೆಯಾಗಿ ಮೆರವಣಿಗೆ ಮಾಡಿರುವ ಹೇಯ ಘಟನೆಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡ ತೀವ್ರವಾಗಿ ಖಂಡಿಸಿ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಮಹಿಳೆಯರ ವಿರುದ್ಧ ಇಂತಹ ಘಟನೆಗಳು ಆಗಿಂದಾಗ್ಗೆ ನಡೆಯುತ್ತಿವೆ ಎಂದಿದ್ದಾರೆ. ಇದು ರಾಷ್ಟ್ರದೆಲ್ಲೆಡೆ ಕಾಂಗ್ರೆಸ್ ಸರ್ಕಾರಗಳ ಬೇಜವಾಬ್ದಾರಿ ವರ್ತನೆಯನ್ನು ಬಹಿರಂಗಪಡಿಸುತ್ತದೆ ಎಂದಿರುವ ಅವರು, ಕರ್ನಾಟಕದಲ್ಲಿ ನಡೆದಿರುವ ಘಟನೆ ಬಗ್ಗೆ ಸತ್ಯಶೋಧನೆ ಮಾಡಲು ಐವರ ಸಮಿತಿಯನ್ನು ಕಳುಹಿಸುತ್ತಿದೆ. ಸಮಿತಿಯಲ್ಲಿ ಸಂಸದರಾದ ಅಪರಾಜಿತ್ ಸಾರಂಗಿ, ಸುನಿತಾ ದುಗ್ಗಲ್, ರಂಜಿತಾ ಕೊಹ್ಲಿ, ಲಾಕೆಟ್ ಚಟರ್ಜಿ ಅಲ್ಲದೆ ಕೇಂದ್ರ ಸಚಿವೆ ಆಶಾ ಲಾಕ್ರಾ ಅವರು ಇದ್ದು, ಸಂತ್ರಸ್ತೆಯನ್ನು ಭೇಟಿ ಮಾಡಲಿದ್ದಾರೆ.

ಈ ಮಧ್ಯೆ ಬೆಳಗಾವಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಂಟಮೂರಿ ಗ್ರಾಮದಲ್ಲಿ ನಡೆದ ಘಟನೆ ದೇಶಾದ್ಯಂತ ಚರ್ಚೆಗೆ ಒಳಪಟ್ಟಿದೆ, ಪರಿಶಿಷ್ಟ ಜಾತಿ ಮಹಿಳೆಯನ್ನು ಬೆತ್ತಲೆ ಮಾಡಿ ಕಂಬಕ್ಕೆ ಕಟ್ಟಿಹಾಕಿ ಥಳಿಸಿದ್ದು ಖಂಡನಾರ್ಹ ಮತ್ತು ಖೇದಕರ ಎಂದರು.

ಸಂತ್ರಸ್ತೆಯನ್ನು ಇದುವರೆಗೆ ಮುಖ್ಯಮಂತ್ರಿ ಭೇಟಿ ಮಾಡಿಲ್ಲ, ಗೃಹ ಸಚಿವರು ಹೊರತುಪಡಿಸಿ ಬೇರೆ ಯಾರೂ ಭೇಟಿ ಕೊಟ್ಟಿಲ್ಲ. ಹೈಕೋರ್ಟ್ ರಾಜ್ಯ ಸರಕಾರಕ್ಕೆ ಚಾಟಿ ಬೀಸಿದೆ. ಪೊಲೀಸ್ ಗಸ್ತು ಯಾಕೆ ಇರಲಿಲ್ಲ, ರಾಜ್ಯ ಸರಕಾರ ಇಂಥ ಘಟನೆ ಆಗದಂತೆ ತಡೆಯಲು ಏನು ಕ್ರಮ ಕೈಗೊಂಡಿದೆ ಎಂದು ಕೇಳಿದೆ. ರಾಜ್ಯ ಸರಕಾರವು ಘಟನೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ, ಘಟನೆ ಖಂಡಿಸಿ ನಾಳೆ ಬಿಜೆಪಿ ಎಲ್ಲಾ ಜಿಲ್ಲಾ ಕೇಂದ್ರ ಗಳಲ್ಲಿ ದೊಡ್ಡ ಪ್ರತಿಭಟನೆ ನಡೆಸಲಿದೆ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುತ್ತಾರೆ ಎಂದರು.

ಮೈಸೂರಿನ ತ್ಯಾಜ್ಯ ನೀರು ಹರಿವು ವ್ಯವಸ್ಥೆಗೊಳಿಸಲು 194 ಕೋಟಿ ಯೋಜನೆ

ವಿಧಾನಸಭೆಯಲ್ಲಿ ಶಾಸಕ ಹರೀಶ್‌ಗೌಡ ಪ್ರಶ್ನೆಗೆ ಸಚಿವ ಭೈರತಿ ಸುರೇಶ್ ಉತ್ತರ

ಮೈಸೂರು, ಡಿ.15(ಬಿಎಲ್‌ಯು)– ಮೈಸೂರು ನಗರದ ವಿವಿಧ ಭಾಗಗಳಲ್ಲಿ ಹರಿಯುತ್ತಿರುವ ಒಳಚರಂಡಿ ತ್ಯಾಜ್ಯ ನೀರು ಹಾಗೂ ಮಳೆ ನೀರಿನ ಹರಿವನ್ನು ವ್ಯವಸ್ಥೆಗೊಳಿಸಲು 194 ಕೋಟಿ ರೂ. ವೆಚ್ಚದಲ್ಲಿ 34 ಕಾಮಗಾರಿ ಕೈಗೊಳ್ಳುವ ಕ್ರಿಯಾ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದ್ದಾರೆ.

ವಿಧಾನಸಭಾ ಅಧಿವೇಶನದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಚುಕ್ಕೆ ಗುರುತಿನ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಭೈರತಿ ಸುರೇಶ್, ಕಾಮಗಾರಿ ಕೈಗೊಳ್ಳಲು ವಿಶೇಷ ಅನುದಾನ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿದ್ದು, ಪರಿಶೀಲನೆ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಮೈಸೂರು ನಗರದ ವಿವಿಧ ಭಾಗಗಳಲ್ಲಿ ಹರಿಯುವ ಒಳಚರಂಡಿ ನೀರನ್ನು ನಾಲ್ಕು ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಿ ಸಮೀಪದ ಕೆರೆಗಳಿಗೆ ಬಿಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಮೈಸೂರು ನಗರದ ರಾಯನಕೆರೆ,


ಕೆ.ಹರೀಶ್‌ಗೌಡ


ಭೈರತಿ ಸುರೇಶ್

ವಿದ್ಯಾರಣ್ಯಪುರಂ ಮತ್ತು ಕೆಸರೆಯಲ್ಲಿ ಒಟ್ಟು 157.65 ಎಂಎಲ್‌ಡಿ ಸಾಮರ್ಥ್ಯ ಹಾಗೂ ಇನ್ಫೋಸಿಸ್ ಫೌಂಡೇಶನ್ ವತಿಯಿಂದ 8 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಮಾಡಲಾಗಿದೆ. ಇಲ್ಲಿ ಸಂಸ್ಕರಿಸಿ ಬಿಡುವ ನೀರನ್ನು ಪುನರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಭೈರತಿ ಸುರೇಶ್ ವಿವರಿಸಿದ್ದಾರೆ. ಮಲೀನ ನೀರನ್ನು ದೇವನೂರು ಕೆರೆಗೆ ಮರು ಬಳಕೆ ಮಾಡುವ ಕ್ರಿಯಾ ಯೋಜನೆಗೆ ಕೂಡ ಈಗಾಗಲೇ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಇದರ ಜೊತೆಗೆ ತ್ಯಾಜ್ಯ ನೀರು ಹಾಗೂ ಮಳೆ ನೀರು ಹರಿಯುವಿಕೆ ತಪ್ಪಿಸಲು 34 ಕಾಮಗಾರಿ ಕೈಗೊಳ್ಳಲು 194 ಕೋಟಿ ರೂಪಾಯಿ ವೆಚ್ಚದಲ್ಲಿ ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದು ಭೈರತಿ ಸುರೇಶ್ ತಿಳಿಸಿದ್ದಾರೆ. 'ಮೈಸೂರು ಮಿತ್ರ'ದ ಡಿಸೆಂಬರ್ 3ರ ಸಂಚಿಕೆಯಲ್ಲಿ "ಸ್ವಚ್ಛ ನೀರು, ಸ್ವಚ್ಛ ಮೈಸೂರು" ವಿಶೇಷ ಲೇಖನ ಪ್ರಕಟವಾಗಿತ್ತು. ಮೈಸೂರಿನಲ್ಲಿ ಹರಿಯುತ್ತಿರುವ ತ್ಯಾಜ್ಯ ನೀರು ನದಿ ಪಾತ್ರ ಸೇರುತ್ತಿರುವ ಬಗ್ಗೆ ಸಮಗ್ರ ವಿವರ ನೀಡಲಾಗಿತ್ತು.

ಮೈಸೂರು ಮಿತ್ರ





ನಂ.ಗೂಡಲ್ಲಿ ಕಪಿಲಾ ಆರತಿ, ಲಕ್ಷ ದೀಪೋತ್ಸವ ಸಂಪನ್ನ

ವಿವಿಧ ಮಠಗಳ ಶ್ರೀಗಳು, ಸಾವಿರಾರು ಭಕ್ತರು ಭಾಗಿ

ನಂಜನಗೂಡು, ಡಿ.15– ನಗರದ ಕಪಿಲಾ ನದಿಯಲ್ಲಿ ನಗರದ ಯುವ ಬ್ರಿಗೇಡ್ ಶುಕ್ರವಾರ ಆಯೋಜಿಸಿದ್ದ ಕಪಿಲಾ ಆರತಿ, ಲಕ್ಷ ದೀಪೋತ್ಸವ ಸಂಜೆ ಸಾವಿರಾರು ಭಕ್ತರ ಕರತಾಡನ, ಜೈಕಾರಗಳ ನಡುವೆ ಸಂಪನ್ನಗೊಂಡಿತು.

ಕಪಿಲಾ ಆರತಿ ಪ್ರಯುಕ್ತ ಯುವ ಬ್ರಿಗೇಡ್ ಕಾರ್ಯಕರ್ತರು ಕಳೆದ 3 ದಿನಗಳಿಂದ ನದಿಗೆ ಇಳಿದು ನದಿಯಲ್ಲಿದ್ದ ಹಳೇ ಬಟ್ಟೆ, ಹೂವಿನ ತಾಜ್ಯಗಳನ್ನು ತೆಗೆದು ಸ್ವಚ್ಛತೆ ಕಾರ್ಯ ನಡೆಸಿದ್ದರು. ಶುಕ್ರವಾರ ಕಪಿಲಾ ನದಿ ತೀರ ಹಾಗೂ ಹದಿನಾರು ಕಾಲು ಮಂಟಪವನ್ನು ವಿವಿಧ ಬಣ್ಣದ ಹೂವು, ಬಟ್ಟೆ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಬೆಳಿಗ್ಗೆ ಕಪಿಲಾನದಿಯ ಹದಿನಾರು ಕಾಲು ಮಂಟಪದಲ್ಲಿ ಶಿವಲಿಂಗವನ್ನು ಸ್ಥಾಪಿಸಿ, ಕ್ಷೀರಾಭಿಷೇಕ, ಫಲ, ಪಂಚಾಮೃತ ಅಭಿಷೇಕಗಳನ್ನು ನಡೆಸಿದ ನಂತರ ಭಕ್ತರಿಗೆ ದೇವರ ಲಿಂಗಕ್ಕೆ ಹಾಲಿನ ಅಭಿಷೇಕ ನಡೆಸಲು ಅನುವು ಮಾಡಿಕೊಡಲಾಯಿತು.

ನಂತರ ಸಂಜೆ 7.30 ಗಂಟೆಗೆ ಕಪಿಲಾ ನದಿಯ ಮಧ್ಯೆ ಹಾಕಲಾಗಿದ್ದ ಭವ್ಯ ವೇದಿಕೆಯಲ್ಲಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ನದಿಗೆ ಅಷ್ಟ ತೀರ್ಥಗಳನ್ನು ಅರ್ಪಿಸುವುದರ ಮೂಲಕ ಕಪಿಲಾ ಆರತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ಮಲ್ಲನಮೂಲೆ ಮಠದ ಚೆನ್ನಬಸವ ಸ್ವಾಮೀಜಿಗಳನ್ನು ದೋಣಿಯ ಮೂಲಕ ಕಪಿಲಾ ನದಿ ಮಧ್ಯದಲ್ಲಿ ನಿರ್ಮಿಸಲಾಗಿದ್ದ ವೇದಿಕೆಗೆ ಕರೆತರಲಾಯಿತು.

ಕೃಷ್ಣ ಜೋಯಿಸ್ ನೇತೃತ್ವದಲ್ಲಿ 5 ಮಂದಿ ಋತ್ವಿಕರು ವೇದ ಘೋಷಗಳ ನಡುವೆ ಕಪಿಲಾ ನದಿಗೆ ಧೂಪ, ದೀಪ ಹಾಗೂ ಮಂಗಳಾರತಿ ನಡೆಸಲಾಯಿತು. ನದಿಯ ಸೋಪಾನಕಟ್ಟೆಯಲ್ಲಿ ಭಕ್ತರು ಸಾವಿರಾರು ಮಣ್ಣಿನ ಹಣತೆಗಳನ್ನು ಹಚ್ಚುವ ಮೂಲಕ ಭಕ್ತಿ ಭಾವ ಮೆರೆದರು.


> ಭಕ್ತಿಯ ಹೆಸರಿನಲ್ಲಿ ನದಿಯಲ್ಲಿ ಪುಣ್ಯಸ್ನಾನ ಮಾಡಲು ಬರುವ ಭಕ್ತರು ಮೌಢ್ಯದಿಂದ ತಾವು ಧರಿಸಿದ ಹಳೇ ಬಟ್ಟೆ, ಮನೆಯಲ್ಲಿ ದೇವರಿಗೆ ಅರ್ಪಿಸಿದ ಹೂವಿನ ತ್ಯಾಜ್ಯಗಳನ್ನು ನದಿಗೆ ಬಿಡುವ ಮೂಲಕ ಮಲೀನಗೊಳಿಸುವ ಪಾಪದ ಕೆಲಸ ಮಾಡುತ್ತಿದ್ದಾರೆ, ನಮ್ಮ ಯುವ ಬ್ರಿಗೇಡ್ ಯುವಕರು ನದಿಯಲ್ಲಿ 7 ಟಿಪ್ಪರ್ ಗಳಿಗಿಂತಲೂ ಹೆಚ್ಚಿನ ತ್ಯಾಜ್ಯವನ್ನು ನದಿಯಿಂದ ತೆಗೆದು ಸ್ವಚ್ಛಗೊಳಿಸಿದ್ದಾರೆ. ಶ್ರೀಕಂಠೇಶ್ವರನ ದರ್ಶನಕ್ಕೆ ಬರುವ ಭಕ್ತರು ತ್ಯಾಜ್ಯಗಳನ್ನು ನದಿಗೆ ತ್ಯಾಜ್ಯವನ್ನು ಬಿಡುವ ಪಾಪದ ಕೆಲಸ ಬಿಡಬೇಕು, ತೀರ್ಥಕ್ಷೇತ್ರದಲ್ಲಿ ಮಾಡಿದ ಪಾಪ ನಿವಾರಣೆಯಾಗುವುದಿಲ್ಲ.
>
> –ಸುತ್ತೂರು ಶ್ರೀಗಳು


ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ ಯುವ ಬ್ರಿಗೇಡ್ ಪ್ರತಿವರ್ಷ ನಡೆಸುತ್ತಿರುವ ಕಪಿಲಾ ಆರತಿ ಕಾರ್ಯಕ್ರಮ ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಉಳಿಸುವ ಜೊತೆಗೆ ನಮ್ಮ ಜೀವನಾಡಿಯಾದ ನದಿಯನ್ನು ಸ್ವಚ್ಛಗೊಳಿಸುವ ಪವಿತ್ರ ಕಾರ್ಯ ನಡೆಸುತ್ತಿದ್ದಾರೆ. ಭಾರತೀಯರು ನದಿಗಳನ್ನು ಗಂಗೆ, ತುಂಗೆ, ಕಪಿಲೆಯರ ಹೆಸರಿನಿಂದ ಮಾತೆಯ ಸ್ಥಾನ ನೀಡಿ ಗೌರವಿಸುತ್ತಾರೆ ಎಂದರು. ಹಿಂದೂಗಳು ಪ್ರಕೃತಿಯಲ್ಲಿ ದೇವರನ್ನು ಕಾಣುವ, ಆರಾಧಿಸುವ ಸಂಪ್ರದಾಯ ರೂಡಿಸಿಕೊಂಡಿದ್ದೇವೆ, ನಮ್ಮ ನದಿ, ಪರಿಸರ, ಪ್ರಕೃತಿ ಉಳಿದರೆ ಮಾತ್ರ ಮನು ಕುಲ ಉಳಿಯುತ್ತದೆ ಎಂಬ ಪ್ರಜ್ಞೆಯನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು ಎಂದರು.

ಯುವ ಬ್ರಿಗೇಡ್ ಸಂಘಟಕ ಚಂದ್ರಶೇಖರ್ ಮಾತನಾಡಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಪ್ರತಿ ವರ್ಷ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಕಪಿಲಾ ಆರತಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುತ್ತಾರೆ. ಯುವ ಬ್ರಿಗೇಡ್ ನಡೆಸುವ ಕಪಿಲಾ ಆರತಿ ಕಾರ್ಯಕ್ರಮಕ್ಕಾಗಿ ನದಿಯ ಮಧ್ಯೆ ವೇದಿಕೆ ನಿರ್ಮಾಣಕ್ಕಾಗಿ 1 ಲಕ್ಷ ವೆಚ್ಚದ ಸಾಮಗ್ರಿಗಳನ್ನು ನೀಡಿ ನಮ್ಮ ಸೇವಾ ಕಾರ್ಯಕ್ಕೆ ಪ್ರೋತ್ಸಾಹ ನೀಡುವ ಮೂಲಕ ಆಶೀರ್ವದಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಯುವ ಬ್ರಿಗೇಡ್ ರಾಜ್ಯ ಸಂಚಾಲಕ ಹರ್ಷ ಶಿವಮೊಗ್ಗ, ಕಿಶೋರ್, ಗಿರೀಶ್, ಹರ್ಷವರ್ಧನ್ ಉಪಸ್ಥಿತರಿದ್ದರು.

ತಿ.ನರಸೀಪುರದ ಹೋಟೆಲ್ ಉದ್ಯಮಿಯಿಂದ ಮಾದಪ್ಪನಿಗೆ ಬೆಳ್ಳಿ ಮಣೆ ಸಮರ್ಪಣೆ





ತಿ.ನರಸೀಪುರ, ಡಿ.15– ಶ್ರೀ ಮಲೆ ಮಹದೇಶ್ವರ ಬೆಟ್ಟದ ಶ್ರೀ ಮಹದೇಶ್ವರ ಸ್ವಾಮಿಗೆ ತಿ.ನರಸೀಪುರದ ಹೋಟೆಲ್ ಉದ್ಯಮಿಯೊಬ್ಬರು ಮೂರೂವರೆ ಕೆಜಿ ಬೆಳ್ಳಿಯ ಮಣೆಯನ್ನು ಸಮರ್ಪಿಸಿದ್ದಾರೆ.

ತಿ.ನರಸೀಪುರದ ಪಟ್ಟಣದ ಮಹದೇಶ್ವರ ಭವನ್ ಮಾಲೀಕರಾದ ರಾಜಣ್ಣ ನಮಿತ್ ರಾಜ್ ಅವರು ತಮ್ಮ ತಾಯಿ ಸುಂದರಮ್ಮ ಮತ್ತು ತಂದೆ ಲೇಟ್ ಮಹಾದೇವಪ್ಪನವರ ನೆನಪಿನಾರ್ಥವಾಗಿ ಈ ಬೆಳ್ಳಿ ಮಣೆ ಸೇವೆ ಸಲ್ಲಿಸಿದರು. ದೇವಸ್ಥಾನದ ಆಡಳಿತ ಮಂಡಳಿ ಈ ಮಣೆಯನ್ನು ಸ್ವೀಕರಿಸಿ, ಧಾರ್ಮಿಕ ಕಾರ್ಯದೊಂದಿಗೆ ದೇವರಿಗೆ ಸಮರ್ಪಿಸಿ ಪೂಜೆ ನೆರವೇರಿಸಿದರು.

ಈ ವೇಳೆ 'ಉಘೇ ಮಾದಪ್ಪ, ಉಘೇ ಮಾದಪ್ಪ' ಘೋಷಣೆಗಳು ಮೊಳಗಿದವು. ನಂತರ ದೇವಸ್ಥಾನದ ಸುತ್ತಲೂ ಮಾದಪ್ಪನ ಉತ್ಸವ ಅತ್ಯಂತ ವೈಭವದಿಂದ ನಡೆಯಿತು. ನೂರಾರು ಭಕ್ತರು ಈ ಭಕ್ತಿಯ ಕ್ಷಣಕ್ಕೆ ಸಾಕ್ಷಿಯಾದರು. ಈ ವೇಳೆ ಬೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ. ವೆಂಕಟೇಶ್, ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹಾದೇವಸ್ವಾಮಿ, ರೈತ ಮುಖಂಡ ಶಾಂತರಾಜು, ಜಿ.ಎನ್.ಎಲ್. ಉಮೇಶ್, ವಕೀಲರಾದ ಮಹೇಶ್, ಸರ್ಕಲ್ ಇನ್ಸ್‌ಪೆಕ್ಟರ್ ನಂಜುಂಡಸ್ವಾಮಿ, ದೇವಸ್ಥಾನದ ಮಲ್ಲಿಕಾರ್ಜುನ, ಪುಟ್ಟಸ್ವಾಮಿ, ಮತ್ತಿತರರು ಉಪಸ್ಥಿತರಿದ್ದರು.

ಆಫ್ರಿಕಾದಲ್ಲಿ ಟೈಗರ್ ಬ್ಲಾಕ್ ಯುವಕ ಸಾವಿನ ಪ್ರಕರಣ

ಮೃತ ದೇಹ ತರಿಸಲು ತಗುಲಿದ ವೆಚ್ಚ ಭರಿಸಿದ ಸಂಸ್ಥೆ

ಹೆಚ್.ಡಿ.ಕೋಟೆ: ಆಫ್ರಿಕಾದ ಐವರಿ ಕೋಸ್ಟ್‌ನಲ್ಲಿ ಡೆಂಗ್ಯೂ ಜ್ವರದಿಂದ ಸಾವನ್ನಪ್ಪಿದ ಟೈಗರ್ ಬ್ಲಾಕ್ ನಿವಾಸಿ ಎಫ್ರಾಯಮ್ ಅವರ ಮೃತ ದೇಹ ತರಿಸಲು ತಗುಲಿದ ವೆಚ್ಚವನ್ನು ಭರಿಸಲು ಒಪ್ಪಿಕೊಂಡಿದ್ದ ಮೈಸೂರಿನ ಶೆವರನ್ ಲ್ಯಾಬೋರೇಟರಿಸ್ ಸಂಸ್ಥೆ ಮೃತರ ಕುಟುಂಬಕ್ಕೆ 97,500 ರೂ. ಚೆಕ್ ಅನ್ನು ನೀಡಿದೆ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಹರೀಶ್ ಈ ಚೆಕ್ ನೀಡಿದರು.

ಹೆಚ್.ಡಿ. ಕೋಟೆ ತಾಲೂಕಿನ ಟೈಗರ್ ಬ್ಲಾಕ್ ಗ್ರಾಮದ ನಿವಾಸಿಗಳಾದ ಅಮಿತ್ ಮತ್ತು ಮುಮಟ ದಂಪತಿಯ ಪುತ್ರ ಎಫ್ರಾಯಮ್ ಆಫ್ರಿಕಾ ದೇಶಕ್ಕೆ ಗಿಡಮೂಲಿಕೆ ವ್ಯಾಪಾರಕ್ಕೆಂದು ತೆರಳಿದ್ದು, ಅವರಿಗೆ ಡೆಂಗ್ಯೂ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಫ್ರಿಕಾದ ಐವರಿಕೋಸ್ಟ್‌ನಲ್ಲಿರುವ ಸೆಂಟರ್ ಹಾಸ್ಪಿಟಲ್ ಮತ್ತು ಯುನಿವರ್ಸಿಟೇರ್ ಡಿ. ಅಂಗ್ರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಆಫ್ರಿಕಾ ದೇಶದಿಂದ ಮೃತ ದೇಹವನ್ನು ಹೆಚ್.ಡಿ.ಕೋಟೆ ತಾಲೂಕಿನ ಟೈಗರ್ ಬ್ಲಾಕ್ ಗ್ರಾಮಕ್ಕೆ ತರಲಾಗಿತ್ತು,



ಈ ವೇಳೆ ಮಾತನಾಡಿದ ಹರೀಶ್ ಅವರು ಆಫ್ರಿಕಾ ದೇಶದಿಂದ ಟೈಗರ್ ಬ್ಲಾಕ್ ಗ್ರಾಮಕ್ಕೆ ಮೃತ ದೇಹವನ್ನು ತರಿಸಲು ಕುಟುಂಬಸ್ಥರು ಪಟ್ಟ ಕಷ್ಟ ನಮಗೆ ಗೊತ್ತು. ಆ ವೆಚ್ಚವನ್ನು ಬರಿಸಲು ಬಹಳ ಕಷ್ಟ ಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಈ ವೆಚ್ಚವನ್ನು ಕೊಡಬೇಕು ಎಂದು, ಕುಟುಂಬಸ್ಥರು ಮನವಿ ಮಾಡಿದ್ದರು, ಮಾನವೀಯ ದೃಷ್ಟಿಯಿಂದ ಜಿಲ್ಲಾಡಳಿತ ವತಿಯಿಂದ ವೆಚ್ಚವನ್ನು ಸಿಎಸ್‌ಆರ್ ಹಾಗೂ ಇತರೆ ನಿಧಿಯಿಂದ ಬರಿಸುವ ಸಂಬಂಧ ಪರಿಶೀಲಿಸಲಾಯಿತು. ಆಗ ನಾವು ವೆಚ್ಚವನ್ನು ನಮ್ಮ ಸಂಸ್ಥೆಯ ವತಿಯಿಂದ ಬರಿಸಲು ಒಪ್ಪಿಕೊಂಡು, ಅವರ ಕುಟುಂಬಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ನಮ್ಮ ಸಂಸ್ಥೆಯ ವತಿಯಿಂದ 97,500 ರೂ. ಗಳನ್ನು ಚೆಕ್ ಮೂಲಕ ನೀಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾನವ ಸಂಪನ್ಮೂಲ ಅಧಿಕಾರಿಗಳಾದ ಗಂಗಾಧರ್, ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ನಾರಾಯಣಸ್ವಾಮಿ, ವಿಎ ದಿವ್ಯ, ಆರ್ ಐ ವಿಶ್ವನಾಥ್, ಗ್ರಾಮ ಪಂಚಾಯಿತಿ ಸದಸ್ಯ ಇವಾನ್ ರಾಜ್, ಗ್ರಾಮದ ಮುಖಂಡರಾದ ದೇವದಾಸ್, ಮೀನ್ ರಾಜ್ ಇತರರು ಉಪಸ್ಥಿತರಿದ್ದರು.

ಇಂದಿನಿಂದ 26ನೇ ವರ್ಷದ ಶ್ರೀ ಅಯ್ಯಪ್ಪಸ್ವಾಮಿ ಬ್ರಹ್ಮೋತ್ಸವ



ನಂಜನಗೂಡು, ಡಿ.15– ನಗರದ ಕಪಿಲಾ ನದಿಯ ತಟದಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಡಿ.16 ರಿಂದ 27 ರವರೆಗೆ 11 ದಿನಗಳ ಕಾಲ 26ನೇ ವರ್ಷದ ಬ್ರಹ್ಮೋತ್ಸವ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಅಯ್ಯಸ್ವಾಮಿ ದೇವಾಲಯದ ಗುರುಸ್ವಾಮಿ ಪಿದೇಮಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಬ್ರಹ್ಮೋತ್ಸವದಲ್ಲಿ ಶಬರಿಮಲೆಯ ಅರ್ಚಕ ತಂತ್ರಿಗಳ ನೇತೃತ್ವದಲ್ಲಿ ದೇವತಾ ಕಾರ್ಯಗಳನ್ನು ನಡೆಸಲಾಗುವುದು. ಡಿ.16 ರಂದು ಧ್ವಜಾರೋಹಣ ನಡೆಯಲಿದ್ದು, ಡಿ.17ರ ಭಾನುವಾರ ಪಡಿಪೂಜೆಯನ್ನು ನೆರವೇರಿಸಲಾಗುತ್ತದೆ ಡಿ.20 ರಂದು ಅಯ್ಯಪ್ಪ ಭಕ್ತರಿಗೆ ಅನ್ನಸಂತರ್ಪಣೆ ನೆರವೇರಿಸಲಾಗುವುದು, ಅದೇ ದಿನ ಮಧ್ಯಾಹ್ನ 1 ಗಂಟೆ ವೇಳೆಗೆ ನಗರದ ರಾಜಬೀದಿಯಲ್ಲಿ ಅಯ್ಯಪ್ಪ ಸ್ವಾಮಿ ಉತ್ಸವ ಜರುಗಲಿದೆ ಎಂದರು.

ಜೊತೆಗೆ ಅಂದು ಸಂಜೆ 7 ಗಂಟೆಗೆ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ನಡೆಯಲಿದೆ, ಡಿ. 24ರ ರಂದು ಉಚಿತವಾಗಿ ಎಲ್ಲಾ ಭಕ್ತರಿಗೆ ಇರುಮುಡಿ ಕಟ್ಟುವ ಕಾರ್ಯವನ್ನು ದೇವಾಲಯದಲ್ಲಿ ನೆರವೇರಿಸಲಾಗುವುದು. ಡಿ.25ರ ಸೋಮವಾರ ಬೆಳಿಗ್ಗೆ 4.30ಕ್ಕೆ ಇರುಮುಡಿ ಹೊತ್ತ ಭಕ್ತಾಧಿಗಳು ಮೈಸೂರಿನ ವೆಂಕಟೇಶ್ವರ ದೇವಾಲಯದಿಂದ ಅಯ್ಯಪ್ಪನ ಸನ್ನಿಧಿವರೆವಿಗೆ ಬೃಹತ್ ಪಾದಯಾತ್ರೆ ನಡೆಸಲಿದ್ದಾರೆ. ಡಿ.27 ರಂದು ಮಂಡಲಾಭಿಷೇಕ ಕಾರ್ಯಕ್ರಮವನ್ನು ನಡೆಸಲಾಗುವುದು. ಅಲ್ಲದೆ ಜೊತೆಗೆ ಡಿ 16 ರಿಂದ 27ರವರೆವಿಗೂ ಸಹ ಪ್ರತಿ ದಿನ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಶ್ರೀ ಕ್ಷೇತ್ರವನ್ನು ಶಬರಿಮಲೆ ಮಾದರಿಯಲ್ಲೇ ಯಥಾವತ್ತಾಗಿ ನಿರ್ಮಿಸಿರುವುದರಿಂದ ಭಕ್ತರು ಇದನ್ನು ಮಿನಿ ಶಬರಿಮಲೆ ಎಂದು ಕರೆಯುತ್ತಾರೆ. ಶಬರಿಮಲೆಯಲ್ಲಿ ನೂಕು ನುಗ್ಗಲು ಹೆಚ್ಚಾಗಿರುವ ಕಾರಣ ರಾಜ್ಯದ ಭಕ್ತಾಧಿಗಳು 18 ಮೆಟ್ಟಿಲುಗಳನ್ನು ಹತ್ತಿ ಅಭಿಷೇಕ ನೆರವೇರಿಸಿ ಅಯ್ಯಪ್ಪಸ್ವಾಮಿಯವರ ದರ್ಶನ ಪಡೆಯಬಹುದಾಗಿದ್ದು ಭಕ್ತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಹಾಗೂ ಬ್ರಹ್ಮೋತ್ಸವ ಕಾರ್ಯಕ್ರಮದಲ್ಲಿ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಅಯ್ಯಪ್ಪಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಎಂ.ಎನ್. ಮಂಜುನಾಥ್, ಎನ್.ಟಿ.ಗಿರೀಶ್, ನಾರಾಯಣಸ್ವಾಮಿ, ಭಕ್ತವತ್ಸಲ, ಕೆ.ಎನ್.ವೆಂಕಟೇಶ್ ಇದ್ದರು.

ಶ್ರೀಕಂಠೇಶ್ವರ ದೇವಾಲಯದಲ್ಲಿ 2 ಕೋಟಿ 14 ಲಕ್ಷ ಆದಾಯ

ನಂಜನಗೂಡು, ಡಿ.14– ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಶುಕ್ರವಾರ ಹುಂಡಿ ಪರ್ಕಾವಣೆ ಕಾರ್ಯವನ್ನು ನಡೆಸಲಾಗಿದ್ದು ಹುಂಡಿಯಲ್ಲಿ 2 ಕೋಟಿ 14 ಲಕ್ಷ, 53 ಸಾವಿರ ನಗದು, 98 ಗ್ರಾಂ ಚಿನ್ನ, 4.5 ಕೆಜಿ ಬೆಳ್ಳಿ, 190 ವಿದೇಶಿ ಕರೆನ್ಸಿಗಳು ಸಂಗ್ರಹಗೊಂಡಿದೆ. ಶುಕ್ರವಾರ ದೇವಾಲಯದ ದಾಸೋಹ ಭವನದಲ್ಲಿ, ದೇವಾಲಯದ 35 ಹುಂಡಿಗಳನ್ನು ಒಡೆದು ಎಣಿಕೆ ಕಾರ್ಯವನ್ನು ನಡೆಸಲಾಯಿತು. ಎಣಿಕೆ ಕಾರ್ಯದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ಸದಸ್ಯರು ನೆರವಾದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಜನಪ್ರತಿನಿಧಿಗಳ ಸಹಕಾರ ಅಗತ್ಯ



ಹುಣಸೂರು, ಡಿ.15– ಗ್ರಾಮ ಪಂಚಾಯಿತಿ ಅಭಿವೃದ್ಧಿಯತ್ತ ಸಾಗಬೇಕಾದರೆ ಚುನಾಯಿತ ಪ್ರತಿನಿಧಿಗಳ ಸಹಕಾರ ಅತ್ಯಗತ್ಯ ಎಂದು ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ಬಿ.ಕೆ.ಮನು ತಿಳಿಸಿದರು.

ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಕ್ರಿಯಾ ಯೋಜನೆಯ ಪರಸ್ಪರ ಕಲಿಕಾ ಕಾರ್ಯಕ್ರಮದಡಿ ವಿಚಾರ ವಿನಿಮಯ ಹಾಗೂ ಸಮನ್ವಯತೆ ಸಾಧಿಸಿಕೊಳ್ಳುವ ನಿಟ್ಟಿನಲ್ಲಿ ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲೂಕಿನ ಜತ್ರಾಟ ಗ್ರಾಮ ಪಂಚಾಯಿತಿಯವರು ತಾಲೂಕಿನ ತಟ್ಟೆಕೆರೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜನಪ್ರತಿಗಳನ್ನುದ್ದೇಶಿಸಿ ಮಾತನಾಡಿದರು.

ಬಳಿಕ ಗ್ರಾಮ ಪಂಚಾಯಿತಿಯ ಗ್ರಂಥಾಲಯ, ಸಾರ್ವಜನಿಕ ಆಸ್ಪತ್ರೆ, ಸರ್ಕಾರಿ ಪ್ರಾಥಮಿಕ ನರೇಗಾ ಯೋಜನೆ ಸಮಗ್ರ ಶಾಲೆ ಅಭಿವೃದ್ಧಿಯಡಿ ಅನುಷ್ಠಾನಗೊಂಡಿರುವ ಆಟದ ಮೈದಾನ ಕಾಮಗಾರಿ ಸ್ಥಳಕ್ಕೆ ಕರೆದೊಯ್ಯುವ ಮೂಲಕ ಗ್ರಾಮದಲ್ಲಿ ಆಗಿರುವಂತಹ ಅಭಿವೃದ್ಧಿ ಕಾರ್ಯಗಳನ್ನು ತೋರಿಸಲಾಯಿತು.

ಈ ವೇಳೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪಾರ್ವತಿ ದೇವರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹೆಚ್.ಡಿ.ಲೋಕೇಶ್, ಉಪಾಧ್ಯಕ್ಷ ನಟರಾಜು, ಕಾರ್ಯದರ್ಶಿ ರಂಗಯ್ಯ ಸೇರಿದಂತೆ ಸದಸ್ಯರು ಹಾಗೂ ಪಂಚಾಯಿತಿ ಸಿಬ್ಬಂದಿಯವರು ಉಪಸ್ಥಿತರಿದ್ದರು.

ಡಿ.23, 24 ದಾವಣಗೆರೆಯಲ್ಲಿ ವೀರಶೈವ ಮಹಾ ಅಧಿವೇಶನ

ಹೆಸರು ನೋಂದಾಯಿಸಿಕೊಳ್ಳಲು ವೀರಶೈವ ಮಹಾಸಭಾ ಮನವಿ

ತಿ.ನರಸೀಪುರ, ಡಿ.15– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾವಣಗೆರೆ ಜಿಲ್ಲಾ ಘಟಕದಿಂದ ದಾವಣಗೆರೆಯ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಡಿ.23 ಮತ್ತು 24 ರಂದು 24ನೇ ವೀರಶೈವ ಮಹಾ ಅಧಿವೇಶನ ನಡೆಯಲಿದೆ ಎಂದು ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ತಿಳಿಸಿದ್ದಾರೆ.

ಪಟ್ಟಣದ ವಿವೇಕಾನಂದ ನಗರದಲ್ಲಿರುವ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ವೀರಶೈವ ಮಹಾ ಘಟಕ ಹಾಗೂ ಯುವ ಘಟಕದ ವತಿಯಿಂದ ಏರ್ಪಡಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈ ಮಹಾ ಅಧಿವೇಶನಕ್ಕೆ ಆಗಮಿಸಲಿರುವ ವೀರಶೈವ ಸಮಾಜದ ಬಂಧುಗಳು ಎರಡು ದಿನಗಳ ಕಾಲ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಲು 500 ರೂ.ಗಳ ಶುಲ್ಕವನ್ನು ಡಿಡಿ ಅಥವಾ ಆನ್‌ಲೈನ್ ಮೂಲಕ (https://apply.veerashaivamahasabha.in) ನೋಂದಾಯಿಸಿ ಕೊಳ್ಳುವಂತೆ ತಿಳಿಸಿದರು.



ಈ ಹಿಂದೆ ಜಾತಿ ಗಣತಿ ಮಾಡಿರುವುದು ಅವೈಜ್ಞಾನಿಕವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಾತಿಗಣತಿ ವರದಿ ಪ್ರಕಟಿಸುವುದನ್ನು ತಡೆಹಿಡಿಯಬೇಕೆಂದು ಮನವಿ ಮಾಡಿದ ಅವರು, ನಾವು ಜಾತಿ ಗಣತಿ ವಿರೋಧಿಯಲ್ಲ, ಪ್ರತಿ ಮನೆ ಮನೆಗೆ ತೆರಳಿ ಜಾತಿ ಗಣತಿ ಕ್ರಮಬದ್ಧವಾಗಿ ಮಾಡಿಲ್ಲ. ಆದ್ದರಿಂದ ಮತ್ತೊಮ್ಮೆ ಪ್ರತಿ ಮನೆಗಳಿಗೆ ತೆರಳಿ ಅವರಿಂದ ಮಾಹಿತಿ ಕಲೆಹಾಕಿ ಜಾತಿ ಗಣತಿ ಮಾಡುವಂತೆ ಆಗ್ರಹಿಸಿದರು.

ವೀರ ಸಿಂಹಾಸನ ವಾಟಾಳು ಮಠದ ಮಠದ ಅಧ್ಯಕ್ಷರಾದ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ 75ನೇ ವರ್ಷದ ಹುಟ್ಟುಹಬ್ಬವನ್ನು ತಾಲೂಕಿನ ಎಲ್ಲಾ ಜನಾಂಗದವರು ಸೇರಿ ಪಟ್ಟಣದ ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಡಿ.24ರ ಸಂಜೆ ಆಚರಿಸಲು ಸಹಕರಿಸಬೇಕೆಂದು ಮನವಿ ಮಾಡಿದರು. ವೀರಶೈವ ಯುವ ಘಟಕದ ತಾಲೂಕು ಅಧ್ಯಕ್ಷ ಬೆನಕನಹಳ್ಳಿ ವಿಜಯಕುಮಾರ್ ಮಾತನಾಡಿ, ದಾವಣಗೆರೆಯಲ್ಲಿ ಎರಡು ದಿನಗಳ ಕಾಲ ನಡೆಯುವ ಸಮಾವೇಶದಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪರಂಪರೆ ಕಾರ್ಯಕ್ರಮಗಳು ಇರುತ್ತವೆ, ಇಂತಹ ಅಭೂತ ಪೂರ್ವ ಸಮಾವೇಶಕ್ಕೆ ತಾಲೂಕಿನ ವೀರಶೈವ ಲಿಂಗಾಯತ ಬಂಧುಗಳು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಬೇಕೆಂದು ಮನವಿ ಮಾಡಿದರು.

ಮಹಾಸಭಾ ಪ್ರಧಾನ ಕಾರ್ಯದರ್ಶಿ ಪರಶಿವಮೂರ್ತಿ, ಪ್ರಧಾನ ಕಾರ್ಯದರ್ಶಿ ಕಿರಗಸೂರು ಮಹದೇವಸ್ವಾಮಿ, ಸದಸ್ಯರಾದ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಕಾವೇರಿಪುರ ಸುರೇಶ್, ಎನ್. ಲೋಕೇಶ್, ಶಿವಕುಮಾರ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಕೀರ್ತಿ, ಉಮಾ ಶಂಕರ್, ಶಾಮಿಯಾನ ನಾಗೇಶ್, ಧರ್ಮಯ್ಯನ ಹುಂಡಿ ಮಲ್ಲಣ್ಣ, ಸತ್ಯಮೂರ್ತಿ, ಬಿಲಿಗೆರೆ ಹುಂಡಿ ಮಹದೇವಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಮಂಜುನಾಥ್, ಚಿಕ್ಕಬೂವಳ್ಳಿ ನವೀನ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಫೈಟ್ ಕ್ಲಬ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾಯಾ ನಗರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಜರುಗಾ ಹುಷಾರುಗಾ(ತೆ)	4 ಪ್ರದರ್ಶನಗಳು
ಸಂಗಂ	
ಸ್ನೇಹರ್ಷಿ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಪ್ತಸಾಗರದಾಚೆ ಎಲ್ಲೋ–ಸೈಡ್ ಬಿ(ಕ)	4 ಪ್ರದರ್ಶನಗಳು
ಪ್ರಭಾ	
ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ.
ಸ್ಕ್ರೀನ್ 3	ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, **ಭಗವಂತ್ ಕೇಸರಿ** (ತೆ): ರಾ.7.05ಕ್ಕೆ, **ಗಣಪತ್: ಎ ಹೀರೋ** (ಹಿಂ): ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್** (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ** (ಕ): ಮ.12.45ಕ್ಕೆ, **ಲಿಯೋ** (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್** (ಹಿಂ): ರಾ.10ಕ್ಕೆ, **ಟಗರುಪಲ್ಯ** (ಕ): ಮ.1ಕ್ಕೆ, ರಾ.7ಕ್ಕೆ, **ತೇಜಸ್** (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೊಟ್ಟಿಗೆಗೆ ನುಗ್ಗಿ ಕರು ಹೊತ್ತೊಯ್ದ ಚಿರತೆ

ನಂಜನಗೂಡು, ಡಿ.15– ತಾಲೂಕಿನ ಏಚಗುಂಡ್ಲಾ ಗ್ರಾಮದಲ್ಲಿ ಚಿರತೆ ದಾಳಿ ನಡೆಸಿ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಲಾಗಿದ್ದ ಕರುವನ್ನು ಹೊತ್ತೊಯ್ದಿರುವ ಘಟನೆ ಶುಕ್ರವಾರ ಜರುಗಿದೆ.

ಗ್ರಾಮದ ರೈತ ಮಹದೇವಸ್ವಾಮಿ ಎಂಬುವರ ಕೊಟ್ಟಿಗೆಯಲ್ಲಿದ್ದ ಕರುವಿನ ಮೇಲೆ ದಾಳಿ ನಡೆಸಿದ ಚಿರತೆ ಕರುವನ್ನು ನಾಲೆಯ ಏರಿ ಮೇಲೆ ಹೊತ್ತೊಯ್ದು ಕರುವನ್ನು ಅರ್ಧ ತಿಂದು ಹಾಕಿದೆ. ಕರುವಿನ ಅರ್ಧ ಕಳೆಬರ ನಾಲೆಯ ಏರಿ ಮೇಲೆ ದೊರೆತಿದೆ.

ವಿಷಯ ತಿಳಿದು ಸ್ಥಳಕ್ಕೆ ನಂಜನಗೂಡು ವಲಯದ ಅರಣ್ಯ ಅಧಿಕಾರಿ ನಿತಿನ್ ಕುಮಾರ್ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.



'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು ಚಿರತೆ ಸೆರೆ ಹಿಡಿಯಲು ಬೋನ್ ಅಳವಡಿಸಿ, ಕ್ಯಾಮರಾವನ್ನು ಸಹ ಹಾಕಲಾಗಿದೆ. ಗ್ರಾಮಸ್ಥರು ಆತಂಕ ಪಡುವ ಅಗತ್ಯವಿಲ್ಲ ಎಂದರು.

ರಾಜರಾವ್ ನಿಧನ



ಹುಣಸೂರು, ಡಿ.15– ನಗರದ ಕಲ್ಪತರು ಸರ್ಕಲ್ ಬಳಿಯ ನಿವಾಸಿ ನಿವೃತ್ತ ಶಿಕ್ಷಕ ರಾಜರಾವ್ (85) ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಿಗ್ಗೆ ನಿಧನರಾದರು.

ಹುಣಸೂರಿನ ತಾಲೂಕು ಕಚೇರಿ ಬಳಿ ಇರುವ ರುದ್ರಭೂಮಿಯಲ್ಲಿ ಶುಕ್ರವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು. ಮೃತರು ರಾಘವೇಂದ್ರ ಸ್ವಾಮಿಗಳ ಆರಾಧಕರಾಗಿದ್ದರು. ವಿವಾಹವಾಗಿರಲಿಲ್ಲ. ಮೃತರು ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.


ಶತಾಯುಷಿ ತಮ್ಮಯ್ಯ ಗೌಡ



ಬೆಟ್ಟದಪುರ, ಡಿ.15– ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರದ ನಿವಾಸಿ ಶತಾಯುಷಿ ತಮ್ಮಯ್ಯ ಗೌಡ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ 102 ವರ್ಷ ವಯಸ್ಸಾಗಿತ್ತು.

ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಅವರ ಜಮೀನಿನಲ್ಲಿ ನೆರವೇರಿಸಲಾಯಿತು. ಇವರ ನಿಧಾನಕ್ಕೆ ಹಲವಾರು ಗ್ರಾಮದ ಮುಖಂಡರು ಸಂತಾಪ ಸೂಚಿಸಿದ್ದಾರೆ.







ನೆಲೆ ಗೃಹ ನಿರ್ಮಾಣ ಸಹಕಾರ ಸಂಘ (ನಿ.)
#200 ಇಡಬ್ಲ್ಯೂಎಸ್, ಕೆಎಚ್‌ಬಿ 1ನೇ ಹಂತ,
ಕುವೆಂಪುನಗರ, ಮೈಸೂರು

ಕೆಲಸಕ್ಕೆ ಅರ್ಜಿ ಆಹ್ವಾನ

ಸಂಘದ ಕಾರ್ಯದರ್ಶಿ / ಕಾರ್ಯನಿರ್ವಾಹಕ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.
ವಿದ್ಯಾರ್ಹತೆ: ಯಾವುದೇ ಪದವೀಧರರು ಜಿಡಿಸಿ/ಡಿಸಿಎಂ ಹೊಂದಿರುವವರು ಕಂಪ್ಯೂಟರ್ ಜ್ಞಾನ ಹೊಂದಿರುವವರಿಗೆ ಅದ್ಯತೆ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಎಂ.ಪುಟ್ಟಣ್ಣ, ಅಧ್ಯಕ್ಷರು,

9449272244
ಇವರನ್ನು ಸಂಪರ್ಕಿಸಿ

ಹೊಸ ಮನೆ ಮಾರಾಟಕ್ಕೆ

ವಿಜಯನಗರ 4ನೇ ಹಂತ, 2ನೇ ಫೇಸ್, **20x30** ಆರ್ಕಿಟೆಕ್ ಡಿಸೈನ್, 3 ಬೆಡ್ ರೂಂ 1ಕ್ಕೆ, ಅಟ್ಯಾಚ್ಡ್, ಇಟಾಲಿಯನ್ ಕಿಚನ್, ಚಿಮ್ನಿ, ಸೋಲಾರ್, ಗೀಸರ್ ಸಿಸಿಟಿವಿ ವಾರ್ಡ್‌ರೋಬ್, ಆಲ್‌ಟೀಕ್, ಗ್ರಾನೈಟ್ ಫ್ಲೋರಿಂಗ್, ಸುಸಜ್ಜಿತ ಮನೆ, ದಕ್ಷಿಣ ದಿಕ್ಕಿನ ಸೈಟು, ಪೂರ್ವ ದಿಕ್ಕಿನ ಬಾಗಿಲು. ಸಂಪರ್ಕಿಸಿ:

9886311559 | 8073397451

ಹಸಿರು ನಮ್ಮ ಉಸಿರು

ಅಡುಗೆಯವರು ಬೇಕಾಗಿದ್ದಾರೆ

ಗೋಕುಲಂನ ಅತಿಥಿಗೃಹದಲ್ಲಿ ಅನುಭವವುಳ್ಳ ದಕ್ಷಿಣ ಭಾರತೀಯ ಸಸ್ಯಹಾರಿ/ ಮಾಂಸಹಾರಿ ಅಡುಗೆ ಮಾಡುವ ಮಹಿಳೆ ಅಥವಾ ಕುಟುಂಬದವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ ಮತ್ತು ವಸತಿ ನೀಡಲಾಗುವುದು

8970293399



ನಿಮಗೆ ರೂಫ್ ಟಾಪ್ ಸೋಲಾರ್ ಸ್ಥಾಪನೆಗೆ ಈಗ ಒಂದು ಸುವರ್ಣ ಅವಕಾಶ !

10% ರಿಯಾಯಿತಿ

- ಪ್ಯಾನಲ್ ಬೆಲೆಯಲ್ಲಿ ವರ್ಷಾಂತ್ಯದ 10% ರಿಯಾಯಿತಿಯನ್ನು ಕಳೆದುಕೊಳ್ಳಬೇಡಿ!. ಈಗಲೇ ಸೌರಶಕ್ತಿ ಬಳಕೆಯ ಬಗ್ಗೆ ಯೋಚಿಸಿ ಮತ್ತು ಜೀವಿತಾವಧಿ ಉಚಿತ ವಿದ್ಯುತ್‌ನ ಭರವಸೆಯೊಂದಿಗೆ 2024ನ್ನು ಸ್ವಾಗತಿಸಿ.
- ಯಾವುದೇ ಮೇಲಾಧಾರಗಳಿಲ್ಲದೆ ಈಗ ಸೋಲಾರ್‌ಗಾಗಿ ಲೋನ್ ಪಡೆಯಿರಿ.
- ಮೇಲ್ಛಾವಣಿಯ ಸೌರಶಕ್ತಿಯಿಂದ ಭವಿಷ್ಯದ ಚೆಸ್ಕಾಂ ವಿದ್ಯುತ್ ಶುಲ್ಕ ಏರಿಕೆಯನ್ನು ಯಾವುದೇ ಚಿಂತೆಯಿಲ್ಲದೆ ಎದುರಿಸಿ.

ಗ್ರಿಡ್-ಟೈ, ಆಫ್-ಗ್ರಿಡ್ ಸೌರ UPS, ಸೌರ ವಾಟರ್ ಹೀಟರ್ ಪಂಪ್, ಸೌರ ಪಂಪ್‌ಗಳು ಮತ್ತು ಸೌರ ಶಕ್ತಿಯ ಲೈಟಿಂಗ್ ಉತ್ಪನ್ನಗಳಿಗೆ ಕರೆ ಮಾಡಿ.

SmartEco Power Systems Pvt Ltd
#2660/4, 4ನೇ ಕ್ರಾಸ್, ಕಾಳಿದಾಸ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು–570002
Ph : 0821 - 241 6022 / 98803 96022 / 98866 50240 www.smarteco.in

Senior Accountant **WANTED**

- Minimun 3 to 5 yrs experience
- Analyse Company financial reports & records
- Prepare financial reports, Perform A/C reconciliation
- Prepare & submit weekly/monthly reports.
- GST, TDS filing, GST records

Junior Accountant/Asst. Accountant

- Manage general ledger accounts
- Update financial status
- Maintain accounts receivable & accounts payable

Interested candidates may email their Cvs to : **recruitment.fmcg554@gmail.com**

HOUSE FOR SALE

Site Measurement
60 X 40
East Facing 2 Bed Room
with attached Bathroom
2400 Sq Ft Building
North Facing Door
1 Car Parking Covered
1772, 3rd Cross, Hebbal 2nd Stage, Mysore
Call: 99013 13188

ಮನೆ ಬಾಡಿಗೆಗೆ ಬೇಕಾಗಿದೆ

ಶ್ರೀರಾಂಪುರ, ದಟ್ಟಗಳ್ಳಿ, ಜೆಪಿ ನಗರ, ಲಕ್ಷ್ಮೀಪುರಂ, ಕೃಷ್ಣಮೂರ್ತಿಪುರಂ, ಸುತ್ತಮುತ್ತ 40x60 ಅಳತೆಯ ಸೈಟಿನಲ್ಲಿ ಕಟ್ಟಿರುವ 4 ಬೆಡ್‌ರೂಮ್ ವುಳ್ಳ ಮನೆ ಬಾಡಿಗೆಗೆ ಬೇಕಾಗಿದೆ ಮಾಲೀಕರು ಸಂಪರ್ಕಿಸಿ:

9845111310
ಬ್ರೋಕರ್ ಕ್ಷಮಿಸಿ

WANTED

Experienced male/ female staff for super market, nagawala, near st. Joseph central school, Mysore. Contact

8884001233

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

PERSONNEL WANTED
50 POSTS

SSLC Pass / Fail or PUC Pass / Fail,
Age below 30 years
Walk-in with Biodata, Marks Cards, Aadhar and Bank Passbook
between 10.00am to 12.30pm and 2.00pm to 4.30pm.

EXCEL - PAR ELECTRONICS PRIVATE LIMITED
292/B, Hebbal Industrial Area, Mysore-570 016
Ph : 98441 57111 / 99005 57929



ಮೈಸೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ,

01, ಇಂಡಸ್ಟ್ರಿಯಲ್ ಎ ಲೇಔಟ್, ಬನ್ನಿಮಂಟಪ ಮೈಸೂರು.–570015. Ph: 0821-24091318 mob: 8310418630

ಕ್ರ.ಸಂ.ಮೈತಾವ್ಯಮಾಸಸಂನಿ/ನೇ.ಪ್ರ/01/2022-23, ದಿನಾಂಕ : 13-12-2023.

ನೇಮಕಾತಿ ಪ್ರಕಟಣೆ

ಮೈಸೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಮೈಸೂರು. ಈ ಸಂಘದಲ್ಲಿ ಖಾಲಿ ಇರುವ 1) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆ–01, 2) ಪ್ರಥಮ ದರ್ಜೆ ಸಹಾಯಕರ ಹುದ್ದೆ –01 ಮತ್ತು 3) ದ್ವಿತೀಯ ದರ್ಜೆ ಸಹಾಯಕರ ಹುದ್ದೆ –01 ಸೇರಿ ಒಟ್ಟು 03 ವಿವಿಧ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು ಸಂಘದ ಕಚೇರಿ ಸಮಯದಲ್ಲಿ ಖುದ್ದಾಗಿ ಹಾಜರಾಗಿ ಅರ್ಜಿ ಪಡೆದು ಭರ್ತಿ ಮಾಡಿ ಮುದ್ದಾಂ ಹಾಗೂ ನೋಂದಣಿ ಅಂಚೆ ಮೂಲಕ ಸಲ್ಲಿಸಬಹುದಾಗಿದೆ.

ಹುದ್ದೆಗಳ ವರ್ಗೀಕರಣ ಮತ್ತು ವಿದ್ಯಾರ್ಹತೆ

ಕ್ರಸಂ.	ಹುದ್ದೆಯ ಹೆಸರು	ವೇತನ ಶ್ರೇಣಿ	ವರ್ಗ	ವಿದ್ಯಾರ್ಹತೆ	ಹುದ್ದೆ ಸಂಖ್ಯೆ
01.	ಮುಖ್ಯ ಕಾರ್ಯ ನಿರ್ವಹಣಾಧಿಕಾರಿ	24000-600-24600-700-28800-800-33600-900-39000-1050-45300. ಮತ್ತು ನಿಯಮಾನುಸಾರ ತುಟ್ಟಿಭತ್ಯೆ ಮನೆಬಾಡಿಗೆ ಭತ್ಯೆ ಮತ್ತು ನಗರ ಭತ್ಯೆ ಲಭ್ಯವಿರುತ್ತದೆ.	ಸಾಮಾನ್ಯ ವರ್ಗ	ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪಡೆದ ಯಾವುದೇ ಪದವಿ. (ಕನಿಷ್ಠ ಅಂಕ ಶೇಕಡ, 60% ಕ್ಕಿಂತ ಹೆಚ್ಚಿಗೆ ಪಡೆದಿರುವವರಿಗೆ ಆದ್ಯತೆ) ಮತ್ತು ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು	01
02.	ಪ್ರಥಮ ದರ್ಜೆ ಸಹಾಯಕರು	23500-550-24600-600-27000-650-29600-750-32600-850-36000-950-39800-1100-46400-1250-47650 ಮತ್ತು ನಿಯಮಾನುಸಾರ ತುಟ್ಟಿಭತ್ಯೆ ಮನೆಬಾಡಿಗೆ ಭತ್ಯೆ ಮತ್ತು ನಗರ ಭತ್ಯೆ ಲಭ್ಯವಿರುತ್ತದೆ.	ಸಾಮಾನ್ಯ ವರ್ಗ	ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪಡೆದ ಯಾವುದೇ ಪದವಿ. (ಕನಿಷ್ಠ ಅಂಕ ಶೇಕಡ, 60% ಕ್ಕಿಂತ ಹೆಚ್ಚಿಗೆ ಪಡೆದಿರುವವರಿಗೆ ಆದ್ಯತೆ) ಮತ್ತು ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು	01
03.	ದ್ವಿತೀಯ ದರ್ಜೆ ಸಹಾಯಕರು	18600-450-20400-500-22400-550-24600-600-27000-650-29600-750-32600 ಮತ್ತು ನಿಯಮಾನುಸಾರ ತುಟ್ಟಿಭತ್ಯೆ ಮನೆಬಾಡಿಗೆ ಭತ್ಯೆ ಮತ್ತು ನಗರ ಭತ್ಯೆ ಲಭ್ಯವಿರುತ್ತದೆ.	ಸಾಮಾನ್ಯ ವರ್ಗ	ಪಿ.ಯು.ಸಿ. ತೇರ್ಗಡೆ (ಕನಿಷ್ಠ ಅಂಕ ಶೇ. 60% ಕ್ಕಿಂತ ಹೆಚ್ಚಿಗೆ ಪಡೆದಿರುವವರಿಗೆ ಆದ್ಯತೆ) ಮತ್ತು ಕಂಪ್ಯೂಟರ್ ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು	01
		ಒಟ್ಟು			03

ಭರ್ತಿ ಮಾಡಿದ ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ದಿನಾಂಕ. 06 - 1 -2024 ರಂದು ಸಂಜೆ 5.00 ಗಂಟೆಯೊಳಗೆ ಮೇಲೆ ತಿಳಿಸಿದ ಸಂಘದ ಕಚೇರಿಗೆ ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ. 18-12-2023.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ. 06-01-2024

ವಯೋಮಿತಿ: ಸಾಮಾನ್ಯ ಅಭ್ಯರ್ಥಿಗಳಿಗೆ ಗರಿಷ್ಠ 35 ವರ್ಷ, ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ 38, ವರ್ಷ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳ ಮಿತಿಯಲ್ಲಿರಬೇಕು.(ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ)

ಅರ್ಜಿ ಶುಲ್ಕ: ಸಾಮಾನ್ಯ ಅಭ್ಯರ್ಥಿಯಾದಲ್ಲಿ ಅರ್ಜಿ ಶುಲ್ಕ ರೂ.500/- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಮತ್ತು ಮಹಿಳಾ ಅಭ್ಯರ್ಥಿಗಳಾಗಿದ್ದಲ್ಲಿ ಅರ್ಜಿ ಶುಲ್ಕ ರೂ.250/- ಗಳನ್ನು ಡಿ.ಡಿ. ಮೂಲಕ ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಮೈಸೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಮೈಸೂರು ಇದರ ಹೆಸರಿಗೆ ಪಾವತಿಸತಕ್ಕದ್ದು.

ಇತರೆ: 1)ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಹೆಚ್ಚಿನ ಮಾಹಿತಿ ಹಾಗೂ ಸಲಹೆ ಸೂಚನೆಗಳನ್ನು ಸಂಘದ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಲಾಗಿದೆ. ಹಾಗೂ ಅರ್ಜಿಯ ಜೊತೆಯಲ್ಲಿ ನೀಡಲಾಗುವುದು.

2) ನೇಮಕಾತಿಗಳನ್ನು 1959ರ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, ಕಲಂ ಹಾಗೂ ನಿಯಮಾವಳಿಗಳ ರೀತ್ಯಾ ನಡೆಸಲಾಗುವುದು.

3) ಹುದ್ದೆಗೆ ಸಲ್ಲಿಸುವ ಅರ್ಜಿ ನಮೂನೆಗಳನ್ನು ಸಂಘದ ಕಚೇರಿ ವೇಳೆಯಲ್ಲಿ ಸಂಘದಿಂದ ಪಡೆಯಬಹುದಾಗಿದೆ.

4) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು, ವಿದ್ಯಾರ್ಹತೆಯ ಎಲ್ಲಾ ವರ್ಷಗಳ ಅಂಕಪಟ್ಟಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. ಹಾಗೂ ಅರ್ಜಿಗೆ ಪಾಸ್ ಪೋರ್ಟ್ ಅಳತೆಯ ಫೋಟೋ ಪ್ರತಿ ಲಗತ್ತಿಸುವುದು.

5) ಸಹಕಾರ ವಿಷಯದಲ್ಲಿ ಅಧ್ಯಯನ ಮಾಡಿದ ಮತ್ತು ಡಿಪ್ಲೊಮೋ ಇನ್ ಕೋ-ಆಪರೇಟೀವ್ ಮ್ಯಾನೇಜ್‌ಮೆಂಟ್ (ಡಿ.ಐ.ಸಿ.ಎಂ.) ತರಬೇತಿ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.

6) ಅಭ್ಯರ್ಥಿಗಳು ವಿವಿಧ ಹುದ್ದೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಅರ್ಜಿ ಶುಲ್ಕ ಪಾವತಿಸಿ, ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.

7) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಅರ್ಹತಾ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಲಿಖಿತ ಪರಿಕ್ಷೆ ನಡೆಸಿ, ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಜೇಷ್ಠತೆಯ ಆಧಾರದ ಮೇಲೆ ನಿಯಮಾನುಸಾರ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು.

ದಿನಾಂಕ. 13-12-2023, ಸ್ಥಳ: ಮೈಸೂರು

ಸಹಿ/- ಸದಸ್ಯ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ, ಮೈಸೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ, ಮೈಸೂರು.